(3) ಆಶ್ರಯ ಯೋಜನೆಯಲ್ಲಿ ಸರ್ವೆ ನಂ. 24 ನಿಂಬೇಮಠದ ಹಳ್ಳಿಯ 4 ಎಕರೆ ಜಮೀನಿನಲ್ಲಿ ಸೈಟುಗಳನ್ನಾಗಿ ಮಾಡುವುದು.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೇ, ಶಿರಾತಾಲ್ಲೂಕಿನ ವಡ್ಡನ ಹಳ್ಳಿ, ನಿಂಬೇ ಮಠದ ಹಳ್ಳಿ ಮತ್ತು ಅಕ್ಕಪಕ್ಕದ ಗ್ರಾಮದಲ್ಲಿರುವ ನಿವೇಶನರಹಿತ ರೈತರು ಅದೇ ಗ್ರಾಮದ ಮಧ್ಯದಲ್ಲಿ ಬರುವ ಸರ್ವೆ ನಂಬರ್. 24 ನಿಂಬೇ ಮಠದಹಳ್ಳಿ 4 ಎಕರೆ ಸರ್ಕಾರಿ ಜಮೀನಿನಲ್ಲಿ ಸೈಟುಗಳನ್ನಾಗಿ ವಿಂಗಡಿಸಲು ಆಶ್ರಯ ಸಮಿತಿ ತೀರ್ಮಾನಿಸಿದ್ದು, ಇದುವರೆವಿಗೂ ಸೈಟುಗಳನ್ನು ವಿಂಗಡಿಸಲು ಸಾಧ್ಯವಾಗಿಲ್ಲ. ಸ್ಥಳೀಯ ಮುಖಂಡರು ಸೈಟುಗಳನ್ನು ವಿಂಗಡಿಸಲು ತೊಂದರೆ ಉಂಟು ಮಾಡಿದ್ದು, ನಿವೇಶನರಹಿತರಿಗೆ ತೊಂದರೆಯಾಗಿ ಎಷ್ಟೋ ಜನರು ಖಾಸಗಿಯವರ ಜಮೀನಿನಲ್ಲಿ ವಾಸವಾಗಿದ್ದವರನ್ನು ಹೊರದೂಡಲಾಗಿದೆ. ಆದುದರಿಂದ, ಸನ್ಮಾನ್ಯ ಮಂತ್ರಿಗಳು ಜಿಲ್ಲಾಧಿಕಾರಿಗಳು ಈ ಕೂಡಲೇ ಸ್ಥಳಕ್ಕೆ ಕಳುಹಿಸಿ ಈ ಸ್ಥಳದಲ್ಲಿ ಸೈಟುಗಳನ್ನು ವಿಂಗಡಿಸಿ ಸಮಿತಿಯವರು ಹಂಚಲು ಅವಕಾಶ ಮಾಡುವಿರೆಂದು ನಿಮ್ಮಲ್ಲಿ ಅರಿಕೆ ಮಾಡಲಿಚ್ಛಿಸುತ್ತೇನೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ:– ಮಾನ್ಯ ಸದಸ್ಯರು ಪ್ರಸ್ತಾಪಿಸಿದ ವಿಚಾರವನ್ನು ಗಮನಿಸಿದೆ. ಉತ್ತರವನ್ನು ನಂತರ ಒದಗಿಸಿಕೊಡುತ್ತೇನೆ.

(4) 5 ಹೆಚ್.ಪಿ. ಹಾಗೂ 10 ಹೆಚ್.ಪಿ. ಎಲೆಕ್ಟ್ರಿಕಲ್ ಪಂಪ್‌ಸೆಟ್ಟಿಗೆ ಸರ್ಕಾರದಿಂದ ವಾರ್ಷಿಕ ಬಾಡಿಗೆ ವಿನಾಯಿತಿ.

ಶ್ರೀ ಎಂ.ಎಸ್. ಪಾಟೀಲ್:– ಮಾನ್ಯ ಅಧ್ಯಕ್ಷರೇ, 5 ಹೆಚ್.ಪಿ. ಹಾಗೂ 10 ಹೆಚ್.ಪಿ. ಇಲೆಕ್ಟ್ರಿಕ್ ಪಂಪು ಸೆಟ್ಟಿಗೆ ಸರ್ಕಾರದಿಂದ ವಾರ್ಷಿಕ ಬಾಡಿಗೆ ವಿನಾಯಿತಿ ಮಾಡಿದ್ದು ಈಗ ಪ್ರತಿ ಯೂನಿಟ್‌ಗೆ 40 ಪೈಸೆಯಂತೆ ಆಕಾರ ಮಾಡುವುದನ್ನು ಸರ್ಕಾರ ತೀರ್ಮಾನಿಸಿದೆ ಎಂದು ತಿಳಿದು ಬಂದಿದೆ. 5 ಹೆಚ್.ಪಿ. ಹಾಗೂ 10 ಹೆಚ್‌ಪಿಗಳಿಗೆ ವಿದ್ಯುತ್ ಕನೆಕ್ಷನ್ ತೆಗೆದುಕೊಳ್ಳಬೇಕಾದರೆ ಡಿಪಾಸಿಟ್ ಹಣ ಎಷ್ಟು ಇರಬೇಕು ಮತ್ತು ಪ್ರತಿಯೊಂದು ಪೋಲುಗಳಿಗೆ ಎಷ್ಟು ಹಣ ಹೆಚ್ಚಿಗೆ ತುಂಬಬೇಕಾಗುತ್ತದೆ ? 5 ಹೆಚ್.ಪಿ. ಮತ್ತು 10 ಹೆಚ್.ಪಿ. ಮೋಟರ್ ಕನೆಕ್ಷನ್ ತೆಗೆದುಕೊಳ್ಳಬೇಕಾದರೆ ಹುಕ್ಕೇರಿ ತಾಲ್ಲೂಕು ರೂರಲ್ ಇಲೆಕ್ಟ್ರಿಕ್ ಸೊಸೈಟಿಯವರು ಎಷ್ಟು ಹಣ ಡಿಪಾಸಿಟ್ ಎಂದು ತೆಗೆದುಕೊಳ್ಳುತ್ತಾರೆ ? ಷೇರು ಹಣ ಎಷ್ಟು ಕೊಡಲು ಹಣಕಾಸಿನ ವ್ಯತ್ಯಾಸ ಎಷ್ಟು ಈ ವಿಷಯವನ್ನು ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ವಿದ್ಯುತ್ ಮಂತ್ರಿಗಳಿಂದ ಸದನದಲ್ಲಿ ದಿನಾಂಕ: 23–2–93 ರಂದು ಉತ್ತರವನ್ನು ಬಯಸಿದ್ದೆನು.

ಶ್ರೀ ಕೆ.ಎ. ನಿಸಾರ್ ಅಹಮದ್:– ಮಾನ್ಯ ಸದಸ್ಯರಿಗೆ ಉತ್ತರವನ್ನು ನಾಳೆಯ ದಿನ ಒದಗಿಸಿಕೊಡುತ್ತೇನೆ.

ರಾಜ್ಯಪಾಲರು ಸಲ್ಲಿಸತಕ್ಕ ಭಾಷಣಕ್ಕೆ ವಂದನಾ ನಿರ್ಣಯದ ಮೇಲಿನ ಮುಂದುವರಿದ ಚರ್ಚೆ.

ಅಧ್ಯಕ್ಷರು:– ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯದ ಮೇಲಿನ ಚರ್ಚೆ. ಶ್ರೀ ಯಡಿಯೂರಪ್ಪನವರು.

† ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ):– ಸನ್ಮಾನ್ಯ ಅಧ್ಯಕ್ಷರೇ, ಈ ಸಂದರ್ಭದಲ್ಲಿ ನಾವುಗಳು ರಾಜ್ಯಪಾಲರು ದಯಪಾಲಿಸಿದ ಭಾಷಣದ ಮೇಲೆ ಅಭಿನಂದನೆಯನ್ನು ಸಲ್ಲಿಸಿ

ಮಾತನಾಡಬೇಕಾಗಿದೆ. ಆದರೆ ಅನಿವಾರ್ಯವಾಗಿ ಈ ರಾಜ್ಯಪಾಲರ ಭಾಷಣದಲ್ಲಿ ಸರ್ಕಾರವು ನಾಡಿನ ಜನರ ಅಭಿವೃದ್ಧಿಯ ಬಗ್ಗೆ ಯಾವುದೇ ಕಾರ್ಯಕ್ರಮವನ್ನು ರೂಪಿಸುವ ಬಗ್ಗೆ ಕಳಕಳಿ ಇಲ್ಲದೆ ಇರುವ ಕಾರಣದಿಂದಾಗಿ ನಾವು ಇದನ್ನು ಅನಿವಾರ್ಯವಾಗಿ ವಿರೋಧ ಮಾಡಬೇಕಾಗಿದೆ.

ನಾನು ಪ್ರಾರಂಭದಲ್ಲಿ ತಮ್ಮ ಮೂಲಕ ಒತ್ತಾಯ ಮಾಡುವುದೇನೆಂದರೆ, ಕಳೆದ ಮೂರು ವರ್ಷಗಳಲ್ಲಿ ಇದು 4ನೇ ರಾಜ್ಯಪಾಲರ ಭಾಷಣವಾಗಿದೆ. ತಾವುಗಳು ಮಾನ್ಯ ರಾಜ್ಯಪಾಲರಿಂದ ಏನೆಲ್ಲಾ ಹೇಳಿಸಿದ್ದೀರಿ. ಅದಕ್ಕನುಗುಣವಾಗಿ ಏನು ಸುಧಾರಣೆಗಳನ್ನು ಮಾಡಿದ್ದೀರಿ ಎಂಬ ಬಗ್ಗೆ ತಾವುಗಳು ಅದರ ವಿವರಗಳನ್ನು ನಾಡಿನ ಜನರಿಗೆ ಒದಗಿಸಬೇಕೆಂದು ಒತ್ತಾಯ ಮಾಡುತ್ತೇನೆ. ಕಳೆದ ಎರಡು ವರ್ಷಗಳಿಂದ ಬಣ್ಣಬಣ್ಣದ ಮಾತುಗಳನ್ನು ಆಡಿ, ಬಣ್ಣ ಬಣ್ಣದ ಸಾಹಿತ್ಯ ಪ್ರಕಟಣೆಗಳನ್ನು ಪ್ರಕಟಿಸಿ, ಜನರನ್ನು ಮರುಳುಗೊಳಿಸುವಂಥ ಪ್ರಯತ್ನವನ್ನು ನಿಮ್ಮ ಸರಕಾರ ಮಾಡಿತು. ಇವೊತ್ತಿನ ದಿವಸ ರಾಜ್ಯಪಾಲರ ಭಾಷಣವನ್ನು ಎರಡು ವಿಧದಲ್ಲಿ ಇದೊಂದು ನಿರುಪಯುಕ್ತ ಸಂವಿಧಾನಿಕ ಕಸರತ್ತನ್ನು ಮಾಡುವ ಪ್ರಯತ್ನವನ್ನು ಸರಕಾರದವರು ಮಾಡಿದ್ದಾರೆಂದು ಹೇಳಬೇಕಾಗುತ್ತದೆ.

ಕಳೆದ ಮೂರು ವರ್ಷಗಳಲ್ಲಿ ರಾಜ್ಯ ಸರ್ಕಾರದ ಆಡಳಿತದಲ್ಲಿ ಒಂದು ಅಸಂಬದ್ಧ ಪ್ರಲಾಪ ಮಾಡುವ ಪ್ರಯತ್ನ ಮಾಡಿದ್ದೀರಿ. ಅದು ಬಿಟ್ಟು ಬೇರೇನೂ ನಾವು ರಾಜ್ಯಪಾಲರ ಭಾಷಣದಲ್ಲಿ ಕಾಣುವುದಿಲ್ಲ. ಈ ಬಾಷಣವನ್ನು ನೋಡಿದಾಗ ಮುಂಬರುವ ಒಂದು ವರ್ಷ, ರಾಜ್ಯದ ಜನತೆಯನ್ನು ತನ್ನ ಶಬ್ಧಜಾಲಗಳ ಮೂಲಕ ಬಂಧಿಸುವ ರೀತಿಯಲ್ಲಿ ರಾಜ್ಯಪಾಲರಿಂದ ಭಾಷಣ ಮಾಡಿಸುವ ಪ್ರಯತ್ನ ಮಾಡಿದ್ದೀರಿ. ರಾಜ್ಯಪಾಲರ ಭಾಷಣದಲ್ಲಿ ವಿಶೇಷವಾದದ್ದೇನಾದರೂ ಇರಬಹುದೇನೋ ಎಂದು ನಾನು ನೋಡಿದೆ, ರಾಮಸ್ವಾಮಿಗಳವರಿಗೆ ಗೊತ್ತಿರಬಹುದು ಮನೆಯಲ್ಲಿ ಹಿರಿಯರ ಶ್ರಾದ್ಧ ಮಾಡುತ್ತೇವೆ. ಅದು ಒಂದು ಪದ್ಧತಿ. ಆ ರೀತಿ ರಾಜ್ಯಪಾಲರಿಂದ ಭಾಷಣ ಮಾಡಿಸುವ ಪ್ರಯತ್ನ ಮಾಡಿದ್ದೀರಿ ಎಂದು ಅನಿವಾರ್ಯವಾಗಿ ನಾನು ಹೇಳಬೇಕಾಗಿದೆ. ನಿಮಗೆ ಯಾವುದೇ ಒಂದು ಪೊಲಿಟಿಕಲ್ ವಿಲ್ ಇದ್ದಂತೆ ಕಾಣುವುದಿಲ್ಲ. ಅದಿದ್ದರೆ ಬಹುಶಃ ರಾಜ್ಯಪಾಲರ ಭಾಷಣದಲ್ಲಿ ಸರ್ಕಾರದ ಧೋರಣೆ, ಮುಂದಿನ ಕಾರ್ಯಕ್ರಮ, ಹಿಂದಿನ ವರ್ಷಗಳ ಸಾಧನೆಯ ಕ್ರೋಢೀಕರಣದ ಚಿತ್ರಣ ಅವರಲ್ಲಿರಬೇಕಾಗಿತ್ತು. ನಿಮ್ಮ ನಡವಳಿಕೆ ಹೇಗಿದೆ ಎಂದರೆ ಯಾರೋ ಹೊಸದಾಗಿ ಮದುವೆ ಮಾಡಿಕೊಂಡಂಥ ಒಬ್ಬ ಯುವಕ ತನ್ನ ಹೆಂಡ್ತಿ ಕಿವಿಯಲ್ಲಿ ಹೇಳಿದನಂತೆ, ನಿನ್ನ ತುಂಬ ಚೆನ್ನಾಗಿ ನೋಡಿಕೊಳ್ತೀನಿ, ಆದರೆ, ತಿನ್ನುವುದಕ್ಕೆ ಏನು ಕೇಳಬೇಡ, ಉಡುವುದಕ್ಕೆ ಬಟ್ಟೆಬರೆ ಕೇಳಬೇಡ ಎಂದು. ಏಕೇ ನಾನು ಈ ಮಾತು ಬಹಳ ಜವಾಬ್ದಾರಿಯಿಂದ ಹೇಳುತ್ತಿದ್ದೇನೆಂದರೆ ತಮಗೆ ಜ್ಞಾಪಕ ಇರಬಹುದು, ನಿಮ್ಮ ವಿಧಾನಸಭಾ ಚುನಾವಣೆ ಮೂರು ವರ್ಷಗಳ ಹಿಂದೆ ನಡೆದಾಗ ಸನ್ಮಾನ್ಯ ವೀರೇಂದ್ರ ಪಾಟೀಲರು ಈ ನಾಡಿನ ಜನರಿಗೆ ಒಂದು ಭರವಸೆ ಕೊಟ್ಟಿದ್ದರು. ಹಿಂದೆ ಮಾಡಿದ ತಪ್ಪನ್ನು ನಾನು ಮತ್ತೆ ಮಾಡುವುದಿಲ್ಲ ನಾವು ಮಾಡಿದ ತಪ್ಪಿಗೆ ಎರಡು ಬಾರಿ ಶಿಕ್ಷೆ ಕೊಟ್ಟು ವಿರೋಧಪಕ್ಷನಾಗಿ ಕುಳಿತುಕೊಳ್ಳುವ ಕೆಲಸ ಮಾಡಿದಿರಿ, ಆ ತಪ್ಪು ಮಾಡದೆ ನ್ಯಾಯಯುತವಾಗಿ ಕೆಲಸ ಮಾಡುತ್ತೇವೆ ಅಭಿವೃದ್ಧಿ ಕೆಲಸಗಳ ಗಮನ ಕೊಡುತ್ತೇವೆ ಎಂದು ಹೇಳಿದ್ದರು. ನಾನು ಅಂಕಿಅಂಶಕ್ಕೆ ಬರುತ್ತೇನೆ. ಆತ್ಮಸಾಕ್ಷಿ ನಿಮಗೇನಾದರೂ ಇದ್ದಿದ್ದರೆ ನಿಮ್ಮ ಆತ್ಮಸಾಕ್ಷಿಗೆ ಪ್ರಶ್ನೆ ಹಾಕಿಕೊಳ್ಳಿ. ಈ ನಾಡಿನ ಜನರಿಗೆ ಏನು ಭರವಸೆ ಕೊಟ್ಟು ಅಧಿಕಾರಕ್ಕೆ ಬಂದಿರಿ, ಅದನ್ನು ಕಾರ್ಯರೂಪಕ್ಕೆ ತರುವಂತಹ ಯಾವುದಾದರೂ ಒಂದು ಪ್ರಾಮಾಣಿಕ ಪ್ರಯತ್ನ ಕಳೆದ ಮೂರು ವರ್ಷಗಳಲ್ಲಿ ತಾವು ಮಾಡಲಿಕ್ಕೆ ಸಾಧ್ಯವಾಯಿತೇನು ? ಅಜೀರ್ಣವಾಗುವಷ್ಟು ಬಹುಮತ ನಿಮಗೆ ಇದ್ದರೂ ಸಹ ಪರಸ್ಪರ ಸ್ಥಾನಮಾನಕ್ಕಾಗಿ ಕಚ್ಚಾಟ ಬಡಿದಾಟ ರಾಜಕೀಯ ಅಸ್ಥಿರತೆ ವ್ಯಾಪಕ ಭ್ರಷ್ಟಾಚಾರ ಆರ್ಥಿಕ ದಿವಾಳಿತನದಲ್ಲಿ ತೊಡಗಿದರೇ ಹೊರತು ಅಭಿವೃದ್ಧಿ ಕಾರ್ಯದ ಕಡೆ ಜನರ ಕಲ್ಯಾಣದ ಕಡೆ ಯಾವುದೇ ವಿಶೇಷ ಪ್ರಯತ್ನವನ್ನು ತಾವು ಮಾಡಲಿಲ್ಲ.

ಸನ್ಮಾನ್ಯ ವೀರಪ್ಪ ಮೊಯಿಲಿಯವರು ಈ ರಾಜ್ಯದ ಮುಖ್ಯಮಂತ್ರಿಗಳಾದ ಮೇಲೆ ಆಡಳಿತದಲ್ಲಿ ಮೇಜರ್ ಸರ್ಜರಿ ಮಾಡುತ್ತೇನೆಂದು ಬಂಗಾರಪ್ಪನವರ ಜೊತೆ ಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಅವರು ಹೇಳಿದಂಥ ಮಾತು. ಆದರೆ ಇವೊತ್ತು ರಾಜ್ಯದ ಮುಖ್ಯಮಂತ್ರಿಯಾಗಿ ಅಧಿಕಾರ ನಡೆಸುವ ಅವಕಾಶ ಸಿಕ್ಕಿದಾಗ ಮೇಜರ್ ಸರ್ಜರಿ ಏನು ಮಾಡಿದಿರಿ? ಹಿಂದೆ ಆದ ಅವ್ಯವಹಾರಗಳ ಬಗ್ಗೆ ಭ್ರಷ್ಟಾಚಾರದ ಹಗರಣಗಳ ಬಗ್ಗೆ, ಸರ್ಕಾರೀ ಬೊಕ್ಕಸ ಲೂಟಿ ಮಾಡಿದ ಹಗಲುದರೋಡೆ ಬಗ್ಗೆ, ಏನಾದರೂ ನಿರ್ದಿಷ್ಟ ಕಾರ್ಯಕ್ರಮ ತೆಗೆದುಕೊಂಡು ಈ ರೀತಿಯ ಅಪರಾಧಗಳು ತಪ್ಪು, ಮತ್ತು ಇವು ಆಗದಂತೆ ಮಾಡುವ ಯಾವುದರೂ ದಿಟ್ಟ ಕಾರ್ಯಕ್ರಮ ಕೈಕೊಂಡಿರಾ? ಅವರು ಬಂದ ಮೇಲೆ ನಾವು ಅಂದುಕೊಂಡೆವು ಹಿರಿಯರಾದ ಸನ್ಮಾನ್ಯ ರಂಗನಾಥ್ ಇದ್ದಾರೆ. ರಾಮಸ್ವಾಮಿಗಳಿದ್ದಾರೆ, ರಾಜಶೇಖರಮೂರ್ತಿಗಳಿದ್ದಾರ, ಇಂತಹ ಪ್ರಮುಖರೆಲ್ಲರೂ ಇದ್ದಾಗ ನಿಮ್ಮ ಜೊತೆಗೆ ವಿಶ್ವಾಸ ಇಟ್ಟುಕೊಂಡು ಸಹಕಾರ ಪಡೆದು ಅಧಿಕಾರ ನಡೆಸುವ ಪ್ರಯತ್ನ ಮಾಡುತ್ತಾರಾ? ನನಗೆ ಆಶ್ಚರ್ಯವಾಗುತ್ತದೆ, ವೀರಪ್ಪ ಮೊಯಿಲಿಯವರನ್ನು ಮುಖ್ಯಮಂತ್ರಿಗಳಾದ ಮೇಲೆ ನೋಡುವುದಕ್ಕೆ, ಕೇವಲ ಕೆಲವು ಅಧಿಕಾರಿಗಳ ಕಿವಿಮಾತು ಕೇಳಿಕೊಂಡು ನಮ್ಮನ್ನು ನಂಬುವುದು ಬೇಡ, ವಿರೋಧ ಪಕ್ಷದ ಮುಖಂಡರ ಮಾತು ಕೇಳುವುದು ಬೇಡ, ಕ್ಯಾಬಿನೆಟ್‌ನಲ್ಲಿರುವ ಹಿರಿಯ ಸಚಿವರನ್ನೇ ವಿಶ್ವಾಸಕ್ಕೆ ತೆಗೆದುಕೊಳ್ಳದೇ ಅಧಿಕಾರ ನಡೆಸುವ ಪ್ರಯತ್ನ ಏನು ನಡೆಯುತ್ತಿದೆ ಇದರಿಂದ ಜನರ ಕಲ್ಯಾಣದ ಯಾವುದೇ ಕೆಲಸ ಮಾಡಲು ನಿಮ್ಮಿಂದ ಸಾಧ್ಯವಿಲ್ಲ. ಅದು 90 ದಿವಸಗಳ ನಿಮ್ಮ ಆಡಳಿತ ವೈಖರಿ ನೋಡಿದಾಗ ಸ್ಪಷ್ಟವಾಗಿ ನಮಗೆ ಕಾಣುತ್ತದೆ. ಸರ್ಕಾರವನ್ನು ನಾನು ಒತ್ತಾಯ ಮಾಡುತ್ತೇನೆ, ನಿಮ್ಮ ಹಣಕಾಸಿನ ಪರಿಸ್ಥಿತಿ ಏನು? ಬಜೆಟ್ ಮುಗಿದ ತಕ್ಷಣ ಏಪ್ರಿಲ್ ಮೇ ನಲ್ಲಿ ಬೇಕಾದ ಪ್ಲಾನ್ ಎಸ್ಟಿಮೇಟ್ ಸ್ಯಾಂಕ್ಷನ್ ಮಾಡಿ ವರ್ಕ್ ಪ್ರಾರಂಭ ಆಗಬೇಕು.ಆದರೆ ಈಗ ಫೆಬ್ರವರಿ ಮಧ್ಯಭಾಗ ಕಳೆಯುತ್ತಿದೆ. ಎಲ್ಲಾದರೂ ರಾಜ್ಯದಲ್ಲಿ, ಅಭಿವೃದ್ಧಿ ಕಾರ್ಯಗಳು ಯಡಿಯೂರಪ್ಪನವರೇ ನಡೆಯುತ್ತಿದೆ ಎಂದು ಹೇಳುವುದಕ್ಕೆ ತಾವು ಬರುತ್ತೀರಾ? ನೀರಾವರಿ ಯೋಜನೆ ಇರಬಹುದು, ಬೇರೆ ಪ್ರಮುಖ ಕೆಲಸ ಕಾರ್ಯಗಳಿರಬಹುದು, ಎಲ್ಲಾ ಅಭಿವೃದ್ಧಿ ಕಾರ್ಯಗಳು ಸ್ಥಗಿತವಾಗಿವೆ. ಇವತ್ತು ಯಾವ ರೀತಿ ಹಣಕಾಸಿನ ಪರಿಸ್ಥಿತಿ ಅಧೋಗತಿಗೆ ಬಂದಿದೆ ಎಂದರೆ ಫೆಬ್ರವರಿಯಲ್ಲಿ ಸರ್ಕಾರಿ ನೌಕರರಿಗೆ ಸಂಬಳ ಕೊಡುವುದಕ್ಕೆ ಅಲ್ಲಿ ಇಲ್ಲಿ ಬಡಿದಾಡಿ ಹುಡುಕಾಡಿ ಸಂಬಳ ಕೊಡುವಂಥ ಪರಿಸ್ಥಿತಿಗೆ ಬಂದಿದ್ದೀರಿ.

ಪಿಡಬ್ಲ್ಯೂಡಿ ಸಚಿವರು ಇಲ್ಲಿ ಇದ್ದಾರೆ, ಹಿರಿಯರಾದ ರಾಮಸ್ವಾಮಿಯವರು ಇದ್ದಾರೆ. ನಾನು ನಿಮ್ಮನ್ನು ಕೇಳುತ್ತೇನೆ. ಇವತ್ತು ನಮ್ಮ ರಾಜ್ಯದಲ್ಲಿ ನೀರಾವರಿ ಇಲಾಖೆಗೆ, ಪಿಡಬ್ಲ್ಯೂಡಿ ಇಲಾಖೆಗೆ ಸುಮಾರು 40ಕೋಟಿ ರೂಪಾಯಿಗೂ ಹೆಚ್ಚು ಬಿಲ್ ಬಾಕಿ ಇದೆ. ಪಾವತಿ ಮಾಡಬೇಕು. ಎಲ್.ಒ.ಸಿ. ಬಿಡುಗಡೆಯಾಗಿಲ್ಲ. ತಮಗೆ ಗೊತ್ತಿದೆಯೇ? ಆದಕ್ಕೆ ನಾನು ಇವತ್ತು ಸರ್ಕಾರವನ್ನು ಒತ್ತಾಯವನ್ನು ಮಾಡುತ್ತೇನೆ ನಮ್ಮ ಜನರು ಕೊಟ್ಟಂಥ ತೆರಿಗೆ ಹಣ ಏನಾಯಿತು? ಕಳೆದ ನಾಲ್ಕೈದು ತಿಂಗಳಿಂದ ಅಭಿವೃದ್ಧಿ ಕಾರ್ಯಗಳು ಸ್ಥಗಿತವಾಗಿ, ಗೊಂದಲದ ವಾತಾವರಣ ಈ ರಾಜ್ಯದಲ್ಲಿ ಇರಬೇಕಾದರೆ ಜನವರಿ, ಫೆಬ್ರವರಿ ಮಾರ್ಚಿನಲ್ಲಿ ಹಗಲು ರಾತ್ರಿ ಅಭಿವೃದ್ಧಿ ಕಾರ್ಯ ನಡೆಯಬೇಕಾದಂಥ ಈ ಸಂದರ್ಭದಲ್ಲಿ ಎಲ್ಲಾ ಅಭಿವೃದ್ಧಿ ಕಾರ್ಯಗಳು ಸ್ಥಗಿತವಾಗಿದೆ. ದಯಮಾಡಿ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ ನಿಮ್ಮ ಹಣಕಾಸಿನ ಪರಿಸ್ಥಿತಿಯ ಬಗ್ಗೆ ತಕ್ಷಣ ಒಂದು ವೈಟ್ ಪೇಪರನ್ನು ಬಿಡುಗಡೆ ಮಾಡಿ. ನಿಮ್ಮ ಹಣಕಾಸಿನ ಪರಿಸ್ಥಿತಿಯನ್ನು ದಯಮಾಡಿ ಹೇಳಿ. ನಾನು ಕೆಲವು ಅಂಕಿಅಂಶಗಳನ್ನು ನಿಮಗೆ ಕೊಟ್ಟರೆ ಆಶ್ಚರ್ಯವಾಗಬಹುದು.

ಶ್ರೀ ಶಿವಾನಂದ ಹೆಚ್. ಕೌಜಲಗಿ:– ಮಾನ್ಯ ಅಧ್ಯಕ್ಷರೇ, ಈ ರಾಜ್ಯದ ಹಣಕಾಸಿನ ಸ್ಥಿತಿ ಸರಿಯಿಲ್ಲ, ಈ ವರ್ಷದ ಬಜೆಟಿನಲ್ಲಿ ಯಾವುದೇ ಹಣ ಕೊಟ್ಟಿಲ್ಲ ಎಂದು ಹೇಳಿ ಈಗಾಗಲೇ ಪ್ರೇಮಚಂದ್ರ ಸಾಗರ್‌ರವರು ರಾಜೀನಾಮೆಯನ್ನು ಕೊಟ್ಟಿದ್ದಾರೆ ಮುಂದಿನ ವರ್ಷ ಆಯವ್ಯಯದ ಪಟ್ಟಿಯಲ್ಲಿ ನನ್ನ

ಇಲಾಖೆಗೆ ಯಾವುದೇ ಹಣ ಒದಗಿಸಿಲ್ಲ, ಮತ್ತೆ ಹಣಕಾಸಿನ ಸ್ಥಿತಿ ಈ ಸರ್ಕಾರದಲ್ಲಿ ಚೆನ್ನಾಗಿಲ್ಲ ಎನ್ನುವ ಸಲುವಾಗಿ ಪ್ರೇಮಚಂದ್ರ ಸಾಗರ್‌ರವರು ಮುಖ್ಯಮಂತ್ರಿಗಳಿಗೆ ರಾಜೀನಾಮೆಯನ್ನು ಕೊಟ್ಟಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಅದನ್ನೇ ನಾನು ಹೇಳುವುದಕ್ಕೆ ಹೊರಟಿದ್ದೇನೆ. ಇವತ್ತು ನಮ್ಮಂಥ ಒಂದು ಒಕ್ಕೂಟದ ವ್ಯವಸ್ಥೆಯಲ್ಲಿ ರಾಜ್ಯ ಸರ್ಕಾರಕ್ಕೆ ಸಂಬಂಧಪಟ್ಟಂಥ ಒಂದು ಜನಕಲ್ಯಾಣದ ವಲಯಗಳಾದಂಥ ಶಿಕ್ಷಣ, ಕೃಷಿ, ನೀರಾವರಿ, ವಿದ್ಯುಚ್ಛಕ್ತಿ, ಉದ್ಯೋಗ, ಆರೋಗ್ಯ, ಸಾರಿಗೆ ಮತ್ತು ವಸತಿ ಈ ಎಲ್ಲಾ ಪ್ರಮುಖವಾದಂಥ ರಂಗಗಳಲ್ಲಿ ಪರಿಸ್ಥಿತಿಯನ್ನು ನೋಡಿದಾಗ ಕಳೆದ ಮೂರು ವರ್ಷಗಳು ಒಂದು ವಿಫಲತೆಯ ವರ್ಷಗಳೆಂದು ಹೇಳಿದರೆ ಬಹುಶಃ ಆ ಕಡೆ ಕುಳಿತಿರತಕ್ಕಂಥವರು ಒಪ್ಪಿಕೊಳ್ಳುತ್ತಾರೆಂದು ನಾನು ಭಾವಿಸಿದ್ದೇನೆ.

ಇವತ್ತು ನಾನು ಹಣಕಾಸಿನ ಪರಿಸ್ಥಿತಿ ಬಗ್ಗೆ ವೈಟ್ ಪೇಪರ್ ಹೊರಡಿಸಿ ಎಂದು ನಾನು ನಿಮಗೆ ಹೇಳಿದೆ. ಜಿಲ್ಲಾ ಪರಿಷತ್ತು, ಮಂಡಲ ಪಂಚಾಯಿತಿ ವ್ಯವಸ್ಥೆ ಬಂತು. ಆ ಚುನಾವಣೆಯು ಮಾಡಲಿಲ್ಲ, ಅದರ ಬಗ್ಗೆ ನಾನು ಮುಂದೆ ಬರುತ್ತೇನೆ. ಆದರೆ ಇವತ್ತು ನಾನು ಕೇಳುತ್ತೇನೆ, ಡಿಸೆಂಬರ್‌ನಿಂದ ಇವತ್ತಿನವರಗೆ ಈ ರಾಜ್ಯದಲ್ಲಿ ಜಿಲ್ಲಾಪರಿಷತ್ತು ಅಭಿವೃದ್ಧಿ ಕಾರ್ಯಕ್ರೋಸ್ಕರ ಮಂಡಲ ಪಂಚಾಯಿತಿಗೆ ಸರ್ಕಾರದಿಂದ ಒಂದು ಪೈಸೆ ಬಿಡುಗಡೆ ನೀವು ಮಾಡಿಲ್ಲ, ಇದು ನಿಜ ತಾನೇ. ಎಲ್ಲಾ ಕಾರ್ಯಗಳು ಸ್ಥಗಿತವಾಗಿದೆ. ಜವಹರ್ ರೋಜಗಾರ್ ಯೋಜನೆಯಲ್ಲಿ ನಿಮಗೆ ಒಂದು ತಾಜಾ ಉದಾಹರಣೆಯನ್ನು ಕೊಡಬೇಕೆಂದರೆ ಸುಮಾರು 65 ರಿಂದ 70 ಕೋಟಿ ರೂಪಾಯಿ ನೀವೇನು ಬಿಡುಗಡೆ ಮಾಡಬೇಕಾಗಿತ್ತು, ಬಿಡುಗಡೆ ಮಾಡಿಲ್ಲ. ಫೆಬ್ರವರಿ ಮಧ್ಯಬಾಗ ಕಳೆದುಹೋಯಿತು. ನೀವು ಯಾವಾಗ ಬಿಡುಗಡೆ ಮಾಡುವುದು? ಗ್ರಾಮೀಣ ಜನರ ಒಂದು ಉದ್ಯೋಗಕ್ಕೆ ಆ ಬಡವರ ಕೈಗೆ ಕೆಲಸ ಮಾಡಬೇಕಾದಂಥ ಅತ್ಯಂತ ಪ್ರಮುಖರಾದಂಥ ಜವಹರ್ ರೋಜ್‌ಗಾರ್ ಯೋಜನೆ ಇವತ್ತು ಸ್ಥಗಿತವಾಗಿದೆ. ನಿಮಗೆ ಗ್ರಾಮೀಣ ಜನರ ಬಗ್ಗೆ ಕಳಕಳಿ ಇದ್ದರೆ ಹಣ ಬಿಡುಗಡೆ ಮಾಡಬೇಕಾಗಿತ್ತು? ಎಷ್ಟು ಹಣವನ್ನು ಜವಹರ್ ರೋಜಗಾರ್ ಯೋಜನೆಯಲ್ಲಿ ಬಿಡುಗಡೆ ಮಾಡಬೇಕು? ಬಿಡುಗಡೆ ಮಾಡದೇ ಇರುವುದಕ್ಕೆ ಕಾರಣವೇನು? ಇದನ್ನ ದಯಮಾಡಿ ಸ್ಪಷ್ಟಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುವುದಕ್ಕೆ ಇಚ್ಛೆ ಮಾಡುತ್ತೇನೆ. ರಾಜಕೀಯ ಅಂತಃಕಲಹದಲ್ಲಿ ಗೊಂದಲದಲ್ಲಿ ನೀವು ತಲ್ಲೀನರಾಗಿದ್ದಾರೆಯೇ ವಿನಹ ಹೊಸ ಸರ್ಕಾರ ಬಂದ ಮೇಲೆ, ಹೊಸ ಮುಖ್ಯಮಂತ್ರಿ ಅಧಿಕಾರ ವಹಿಸಿಕೊಂಡ ಮೇಲೆ ನೀವು ಶಾಂತ ರೀತಿಯಿಂದ ಮಂತ್ರಿಮಂಡಲದ ಸಭೆಯನ್ನು ಕರೆದು ಹಿಂದಿನ ಎರಡು ವರ್ಷಗಳಲ್ಲಿ ಅನೇಕ ತಪ್ಪುಗಳು ಏನು ಆಯಿತು ಎಂದು ಹೇಳಿ ಅವರನ್ನು ಅಧಿಕಾರದಿಂದ ಇಳಿಸಿದರೋ ಆ ತಪ್ಪುಗಳಾಗದಂತೆ ದಿಟ್ಟ ಹೆಜ್ಜೆ ಇಡುವಂಥ ಒಂದು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೀರೇನು? ಇವತ್ತು ಜವಹರ್ ರೋಜಗಾರ್ ಯೋಜನೆಯಂಥ ಒಂದು ಪ್ರಮುಖವಾದ ಬಾಬಿಗೆ ನೀವು 65 ಕೋಟಿಗೂ ಹೆಚ್ಚು ಹಣ ಬಿಡುಗಡೆ ಮಾಡಿಲ್ಲ ಎಂದು ಹೇಳುವುದಾದರೆ ಬಹುಶಃ ಇದಕ್ಕಿಂತ ಒಂದು ಬೇಜವಾಬ್ದಾರಿ, ರೈತ ವಿರೋಧಿ ಗ್ರಾಮೀಣ ಜನರ ವಿರೋಧಿ ಸರ್ಕಾರ ಇದೆ ಎಂದು ನಾವು ಹೇಳಬಹುದೇನು? ಖಾದಿ ಗ್ರಾಮೋದ್ಯೋಗ ಇಲಾಖೆಗೆ 3 ಕೋಟಿ ರೂಪಾಯಿ ಸಬ್ಸಿಡಿ ಕೊಡಬೇಕು, ಕೊಟ್ಟಿಲ್ಲ. ಸ್ಮಾಲ್ ಸ್ಕೇಲ್ ಇಂಡಸ್ಟ್ರೀಗೆ ಸಬ್ಸಿಡಿ ಬಿಡುಗಡೆ ಮಾಡಬೇಕು, ಒಂದು ರೂಪಾಯಿ ಬಿಡುಗಡೆ ಮಾಡಿಲ್ಲ. ಸಣ್ಣಪುಟ್ಟ ಕಾರ್ಖಾನೆಗಳು ಬಾಗಿಲು ಮುಚ್ಚುವಂಥ ಒಂದು ಸ್ಥಿತಿಗೆ ಬಂದಿವೆ. ನಾನು ಪ್ರಾರಂಭದಲ್ಲೇ ಹೇಳಿದಂತೆ ಪಿಡಬ್ಲ್ಯೂಡಿ ಮತ್ತೆ ಇರಿಗೇಷನ್‌ಗೆ ನನಗೆ ಗೊತ್ತಿರುವ ಪ್ರಕಾರ ಸುಮಾರು 40 ಕೋಟಿಗೂ ಹೆಚ್ಚು ಎಲ್.ಒ.ಸಿ. ಬಿಡುಗಡೆ ನೀವು ಮಾಡಬೇಕು. ಇವತ್ತು ಯಾವ ಪರಿಸ್ಥಿತಿಗೆ ಬಂದಿದೆ ಎಂದರೆ ಈ ರಾಜ್ಯದಲ್ಲಿ ಯಾವುದೇ ಪಿಡಬ್ಲ್ಯೂಡಿ ಕಂಟ್ರಾಕ್ಟರ್ಸ್ ನಿಮಗೆ ಇಲಾಖೆಯ ಯಾವುದೇ ಕೆಲಸಕಾರ್ಯಗಳಿಗೆ ಮುಂದೆ ಬರುತ್ತಿಲ್ಲ.

ಮೊನ್ನೆ ನನಗೆ ಗೊತ್ತಿದೆ, ತಾವು ಅಧಿಕಾರ ವಹಿಸಿಕೊಂಡ ಮೇಲೆ ಆ ಸಿಮೆಂಟು, ಕಬ್ಬಿಣ ಪರ್ಚೇಸ್ ಮಾಡಿದ್ದೇವೆ ಎಂದು ಅದನ್ನೆಲ್ಲಾ ತೋರಿಸಿಕೊಳ್ಳಬೇಕಲ್ಲ ಮಾರ್ಚಿ ಎಂಡ್‌ನಲ್ಲಿ ಅದಕ್ಕೋಸ್ಕರ ಸ್ವಲ್ಪ ಹಣವನ್ನು ಬಿಡುಗಡೆ ಮಾಡಿದ್ದೀರಿ. ನಾನು ನಿಮ್ಮನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ, ಫೆಬ್ರವರಿ ತಿಂಗಳಲ್ಲಿ ಈ ರೀತಿ ಹಣಕಾಸಿನ ಪರಿಸ್ಥಿತಿ ಇರಬೇಕಾದರೆ ಇವತ್ತು ಜನರು ಕೊಟ್ಟಂಥ ತೆರಿಗೆ ಹಣ ಎಲ್ಲಿ ಹೋಯಿತು ?

ಬಜೆಟ್ ಸಂದರ್ಭದಲ್ಲಿ ರಾಜ್ಯಪಾಲರ ಭಾಷಣದಲ್ಲಿ ಪ್ರಾಮಿಸ್ ಮಾಡಿದಂತಹ ಯಾವುದಾದರೂ ಒಂದು ಕಾರ್ಯಕ್ರಮವನ್ನ ಕಾರ್ಯರೂಪಕ್ಕೆ ತಂದಿರುವಂತಹ ಒಂದು ಉದಾಹರಣೆಯನ್ನ ತಾವೇನಾದರೂ ಇವತ್ತುಕೊಡುತ್ತೀರಾ ? ಈ ನಾಡಿನ ಜನ ಗ್ರಾಮೀಣ ಜನರು ಮೊದಲ ಬಾರಿಗೆ ವಿಚಿತ್ರವಾದಂತಹ ನೆರೆಹಾವಳಿಗೆ ಸಿಕ್ಕಿಕೊಂಡರು. ಇಲ್ಲಿ ಚರ್ಚೆಯಾಯಿತು ದು ಕಲೆದು ಹೋಗಿ ಮೂರು ತಿಂಗಳಾಯತು. ಮತ್ತೆ ನಾವು ಈಗ ಸದನದಲ್ಲಿ ಬಂದು ಸೇರಿದ್ದೇವೆ. ನಾವು ನಿಮ್ಮನ್ನು ಕೇಳುತ್ತೇವೆ. ಬೇರೆ ಏನು ಬೇಡ ತಾವೇನು ಭಿಕ್ಷೆಯನ್ನು ಕೊಡುವ ರೀತಿಯಲ್ಲಿ ಹೆಕ್ಟೇರಿಗೆ 50 ರೂಪಾಯಿಯನ್ನು ಪರಿಹಾರವನ್ನು ಕೊಡುತ್ತೇವೆಂದು ಹೇಳಿದ್ದೀರಿ ಅದನ್ನು ಕೊಟ್ಟಿದ್ದಿರಾ ? ನನಗೆ ಅನ್ನಿಸುತ್ತದೆ ಈ ಸದನದ ಒಳಗಡೆ ಬಂದು ಏತಕ್ಕೋಸ್ಕರ ಚರ್ಚೆ ಮಾಡಬೇಕು ? ತಮಗೆ ಗೊತ್ತಿರಬಹುದು ಬಡವರ ಬಗ್ಗೆ, ಕೃಷಿ ಕಾರ್ಮಿಕರ ಬಗ್ಗೆ, ನಿರುದ್ಯೋಗಿ ಯುವಕರ ಬಗ್ಗೆ, ಹರಿಜನ ಗಿರಿಜನರ ಬಗ್ಗೆ ಪ್ರಸ್ತಾಪ ಮಾಡಿದಾದ ಜನವರಿ, 12ನೇ ತಾರೀಖು ಈ ಸದನದಲ್ಲಿ ಒಂದು ಮಾತನ್ನು ಹೇಳಿದರು. ಅದನ್ನ ಸೀರಿಯಸ್ ಆಗಿ ತೆಗೆದುಕೊಂಡು ಅದನ್ನ ಕಾರ್ಯರೂಪಕ್ಕೆ ತರುವ ಕಳಕಳಿ ಇಲ್ಲವೋ ? ಇಲ್ಲಿ ಚರ್ಚೆ ಮಾಡುವುದರ ಬದಲಾಗಿ ರಾಜ್ಯದ ಉದ್ದಕ್ಕೂ ಹೋಗಿ ನಿಮ್ಮನ್ನು ನಂಬಿ ನಿಮಗೆ ಅಜೀರ್ಣವಾಗುವಷ್ಟು ಬಹುಮತ ಕೊಟಂತಹ ಜನ ಆ ಬಡ ಜನರನ್ನು ಹೋಗಿ ಭೇಟಿ ಮಾಡಿದ್ದೀರಾ ? ಬಹುಶಃ ನಿಮಗೆ ವರದಿ ಬಂದಿರಬಹುದು, ಜನವರಿ 12ನೇ ತಾರೀಖಿನಿಂದ ಇವತ್ತಿನವರೆಗೆ ಕರ್ನಾಟಕ ರಾಜ್ಯದಲ್ಲಿ ಸುಮಾರು 450 ಸಾರ್ವಜನಿಕ ಸಭೆಗಳನ್ನು ಮಾಡಿಬಿಟ್ಟು ಬಂದಿದ್ದೇವೆ. ನಮ್ಮ ಶಾಸಕರು ನಮ್ಮ ಲೋಕಸಭಾ ಸಗಸ್ಯರು ನಮ್ಮ ರಾಜ್ಯಪದಾಧಿಕಾರಿಗಳು ಸುಮಾರು 13 ತಾಲ್ಲೂಕ್ ಕೇಂದ್ರಗಳನ್ನು ಬಿಟ್ಟು 'ಎಲ್ಲಾ ತಾಲ್ಲೂಕ್ ಕೇಂದ್ರಗಳಿಗೆ ಹೋದೆವು. ಸಾವಿರಾರು ಜನ ಬಂದು ಸೇರಿದರು. ತಮ್ಮ ಅಕ್ರೋಶವನ್ನು ವ್ಯಕ್ತಪಡಿಸಿದ್ದಾರೆ. ಅಂದರೆ ಯಾವ ನಾಡಿನ ಜನ ನಿಮಗೆ ಅಜೀರ್ಣವಾಗುವಷ್ಟು ಬಹುಮತವನ್ನು ಕೊಟ್ಟರೋ ಆ ಜನರನ್ನು ಹೋಗಿ ಭೇಟಿ ಮಾಡುವಂತಹ ಒಂದು ಪ್ರಾಮಾಣಿಕ ಪ್ರಯತ್ನವನ್ನು ನೀವು ಮಾಡಿದ್ದೀರಾ ? ನೀವು ಕೊಟ್ಟಂಥ ಭರವಸೆಯು ಈಡೆರಿದೆಯೋ ಇಲ್ಲವೋ ಇದನ್ನು ನೋಡುವಂಥ ಪ್ರಾಮಾಣಿಕ ಪ್ರಯತ್ನ ಮಾಡಿದ್ದೀರೋ, ನಿಮ್ಮ ಸಾಧನೆ ಏನು ? ನಿಮ್ಮ ಸಾಧನೆ ಒಂದೇ, ಇರುವಂತಹ 184-185 ಜನ ಶಾಸಕರಲ್ಲಿ ನೂರಕ್ಕೂ ಹೆಚ್ಚು ಜನ ಶಾಸಕರರ ಕಳೆದ ಮೂರು ವರ್ಷದಲ್ಲಿ ಮಂತ್ರಿಗಳಾದರು. ನಮ್ಮ ಮಾನ್ಯ ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿಗಳಾದ ತಕ್ಷಣ ಹೇಳಿದರು. ಈ ಆನೆಯ ಗಾತ್ರದ ಮಂತ್ರಿಮಂಡಲ ಏಕೆ ಎಂದು ನಾವು ಕೇಳಿದಾಗ ಅವು ಕೇವಲ ಇನ್ನು ಒಂದು ಮುಕ್ಕಾಲು ಎರಡು ವರ್ಷ ಅವಧಿ ಇದೆ, ಸಂಖ್ಯೆ ಜಾಸ್ತಿಯಾದರೆ ಬೇಗ ಅಭಿವೃದ್ಧಿ ಕಾರ್ಯ ಮಾಡಬಹುದೆಂದು ಈಗ 95 ದಿವಸ ಕಳೆದು ಹೋಯಿತು. ತಾವು 100 ದಿವಸದ ಪ್ರಗತಿಯ ಬಗ್ಗೆ ಹೇಳಿದ್ದೀರಿ. 95 ದಿವಸದಲ್ಲಿ ಅಥವಾ 100 ದಿವಸ ದಾಟಿದ ತಕ್ಷಣ ಯಾವ್ಯಾವ ಬಾಬಿನಲ್ಲಿ ನೀರಾವರಿಯಲ್ಲಿ, ಕೃಷಿ ಬಾಬಿನಲ್ಲಿ, ಗ್ರಾಮೀಣಾಭಿವೃದ್ಧಿ ಬಾಬಿನಲ್ಲಿ, ನಿರುದ್ಯೋಗ ಯುವಕರಿಗೆ ಉದ್ಯೋಗವನ್ನು ಒದಗಿಸಿಕೊಡುವುದರಲ್ಲಿ ಎಷ್ಟೆಷ್ಟು ಪ್ರಗತಿಯಾಗಿದೆ ಇದನ್ನು ನೀವು ತಿಳಿಸುತ್ತೀರಾ ? ನಾವು ನಿಮ್ಮ ಮುಖ್ಯಮಂತ್ರಿಗಳನ್ನು ಕೇಳಿದ್ದೇವೆಯೇ ? ನಾವು ಮಂತ್ರಿಗಳನ್ನು ಮಾಡಬೇಕಾದರೆ ಯಾರು ಲೋಕಾಯುಕ್ತಕ್ಕೆ ಅವರ ಆಸ್ತಿಪಾಸ್ತಿಗಳನ್ನು ಘೋಷಣೆ ಮಾಡಿಕೊಂಡಿರುವುದಿಲ್ಲವರನ್ನು ಮಂತ್ರಿಗಳನ್ನು ಮಾಡುವುದಿಲ್ಲ, ನಾವು ಇವರನ್ನು ಕೇಳಿದ್ದೇವೇಯೇ ?

ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ನಿಮ್ಮ ಮಂತ್ರಿಮಂಡಲದಲ್ಲಿ ಇರುವಂತಹ ಸದಸ್ಯರು ಲೋಕಾಯುಕ್ತಕ್ಕೆ ತಮ್ಮ ಆಸ್ತಿಯನ್ನು ಡಿಕ್ಲೇರ್ ಮಾಡಿಕೊಂಡಿದ್ದಾರೆಯೇ ? ಮಾಡಿಕೊಳ್ಳದಿದ್ದರೆ ನಾನು ಅದರ ಬಗ್ಗೆ ಚಿಂತನೆ ಮಾಡುವುದಿಲ್ಲ. ಆದರೆ ಈ ರೀತಿ ಅಧಿಕಾರಕ್ಕೆ ಬಂದ ತಕ್ಷಣ ಜನರಿಗೆ ಸುಳ್ಳು ಭರವಸೆಯನ್ನು ಕೊಡುವಂತಹ ಪ್ರವೃತ್ತಿ ಏನಿದೆ. ಈ ಪ್ರವೃತ್ತಿಯನ್ನು ಮಾನ್ಯ ಮುಖ್ಯಮಂತ್ರಿಗಳು ಬಿಡಬೇಕಾಗಿದೆ. ನಾನು ಅನೇಕ ಜನ ಮಂತ್ರಿಗಳನ್ನು ಭೇಟಿ ಮಾಡಿದ್ದೇನೆ. ಅಧಿಕಾರಿಗಳು ನಮ್ಮ ಮಾತನ್ನ ಕೇಳುವುದಿಲ್ಲ ಎಂದು ಹೇಳುತ್ತಾರೆ. ನಾನು ಮುಖ್ಯಮಂತ್ರಿಗಳನ್ನು ಇವತ್ತು ಕೇಳುವುದಕ್ಕೆ ಇಚ್ಛೆಪಡುತ್ತೇವೆ, ಈ ಸರ್ಕಾರವನ್ನು ಕೇಳುವುದಕ್ಕೆ ಇಚ್ಛೆಪಡುತ್ತೇರೆ, ವಿರೋಧ ಪಕ್ಷದ ಮುಖಂಡರ ಮಾತಿಗೆ ಬೆಲೆಯಿಲ್ಲ. ಇವತ್ತು ನಿಮ್ಮ ಕ್ಯಾಬಿನೆಟ್‌ನ ಹಿರಿಯ ಸಚಿವರ ಜೊತೆಗೆ ವಿಶ್ವಾಸವನ್ನು ತೆಗೆದುಕೊಂಡು ಕೆಲಸಮಾಡಲಿಕ್ಕೆ ಮಾನ್ಯ ಮುಖ್ಯಮಂತ್ರಿಗಳಿಗೆ ಸಿದ್ಧವಿಲ್ಲ ಎನ್ನುವುದಾದರೆ ಮೂರು ಕಾಲು ವರ್ಷ ಕಳೆದು ಹೋಯಿತು ಇದೇ ರೀತಿಯಲ್ಲಿ ಅಧಿಕಾರವನ್ನು ಮುಂದುವರಿಸಿಕೊಂಡು ಹೋದರೆ ನಮ್ಮ ಜನರ ಪರಿಸ್ಥಿತಿಗಳು ಏನಾಗಬಹುದು. ಎಲ್ಲಿಗೆ ಮುಟ್ಟಬಹುದು.

ಶ್ರೀ ಆರ್. ದಯಾನಂದರಾವ್:- ತಾವು ಆಸ್ತಿಯನ್ನು ಡಿಕ್ಲೇರ್ ಮಾಡಿದ್ದೀರೋ ಎಂದು ಕೇಳುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಯಡಿಯೂರಪ್ಪನ ಆಸ್ತಿ ಎಷ್ಟಿದೆ ಅವನು ಡಿಕ್ಲೇರ್ ಮಾಡಿಕೊಂಡಿದ್ದನೋ ಇಲ್ಲವೋ ಇದರ ಬಗ್ಗೆ ಬೇರೆ ಪ್ರಶ್ನೆ. ನಾನೇನು ಹೇಳುವುದಕ್ಕೆ ಹೊರಟಿದ್ದೇನೆಂದರೆ ....

ಶ್ರೀ ಆರ್. ದಯಾನಂದರಾವ್:- ತಾವು ಡಿಕ್ಲೇರ್ ಮಾಡಿದ್ದಿರೋ, when you are questioning others, you should be perfect first. Let us know whether you have declared or not. that is all.

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾನು ಅವರು ಹೇಳಿದಂತೆ ಯಾವ್ಯಾವ ಸದಸ್ಯರು ಲೋಕಾಯುಕ್ತಕ್ಕೆ ಅವರ ಆಸ್ತಿಪಾಸ್ತಿಯನ್ನು ಘೋಷಣೆ ಮಾಡಿಕೊಂಡಿದ್ದಾರೋ ಇದು ಬೇರೆ ಪ್ರಶ್ನೆ. ಇದು ಇಡೀ ಜಗತ್ತಿಗೆ ಗೊತ್ತಿರುವಂಥದ್ದು. ಆದರೆ ನಾನು ಕೇಳುವುದಕ್ಕೆ ಹೊರಟಿರುವುದೇನೆಂದರೆ ಯಾವ ಒಂದು ಪ್ರಮುಖವಾದಂತಹ ಸಚಿವರ ಹುದ್ದೆಯನ್ನು ಕೊಡುವುದಕ್ಕೆ ಮುಂಚೆ ಲೋಕಾಯುಕ್ತಕ್ಕೆ ಅವರ ಆಸ್ತಿಪಾಸ್ತಿಯನ್ನು ಘೋಷಣೆ ಮಾಡಿಕೊಂಡಂಥ ವ್ಯಕ್ತಿಗಳಿಗೆ ಮಾತ್ರ ಮಂತ್ರಿಗಳನ್ನು ಮಾಡುತ್ತೇವೆಂದು ಹೇಳಿದಂತಹ ಈ ಮುಖ್ಯಮಂತ್ರಿಗಳು ಇವತ್ತು ಮಂತ್ರಿಗಳನ್ನು ಮಾಡಿರುವಂತಹ ಈ ಸಂದರ್ಭದಲ್ಲಿ ಲೋಕಾಯುಕ್ತಕ್ಕೆ ಅವರ ಆಸ್ತಿಪಾಸ್ತಿಗಳನ್ನು ಘೋಷಣೆ ಮಾಡಿಕೊಂಡಿದ್ದಾರೆಯೇ ಇಲ್ಲವೇ ? ಅದರ ಬಗ್ಗೆ ಉತ್ತರವನ್ನು ಕೊಡಿ ಎಂದು ನಾನು ಕೇಳಿದ್ದೇನೆ. ಈ ಕಡೆ ಇರುವಂಥವರು ಆ ಕಡೆ ಇರುವಂಥವರು ಸದಸ್ಯರು ಯಾರು ಲೋಕಾಯುಕ್ತಕ್ಕೆ ಆಸ್ತಿಪಾಸ್ತಿಗಳನ್ನು ಘೋಷಣೆ ಮಾಡಿಕೊಂಡಿಲ್ಲ ಇದರ ಬಗ್ಗೆ ನಾನು ಚರ್ಚೆ ಮಾಡುತ್ತಿಲ್ಲ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್:- ಲೋಕಾಯುಕ್ತ ಈಗ ಇಲ್ಲ. ನಿಮಗೆ ಗೊತ್ತಿದೆಯೋ ಇಲ್ಲವೋ ಗೊತ್ತಿಲ್ಲ. ಆಸ್ತಿ ವಿವರಣೆಯನ್ನು ಕೊಡುವ ಪ್ರಶ್ನೆ ಎಲ್ಲಿ ಬರುತ್ತದೆ. ಅಲ್ಲಿ ನಿಮ್ಮಲ್ಲಿ ಟಿ.ವಿ. ಇದೆಯೋ ಎಂದು ಕೇಳುತ್ತಾರೆ. ಮೋಟಾರ್ ಸೈಕಲ್ ಇದೆಯೋ ಎಂದು ಕೇಳುತ್ತಾರೆ. ಇದೆಲ್ಲಾ ಕಾನೂನನ್ನು ನಾವೇ ಮಾಡಿದ್ದುದು. ನಿಮ್ಮಲ್ಲಿಯೂ ಟಿ.ವಿ. ಇದೆ. ನನ್ನಲ್ಲಿಯೂ ಟಿ.ವಿ. ಇದೆ. ಏನೇನು ಮಾಡಬೇಕೆಂದು ನನಗೆ ಗೊತ್ತಿಲ್ಲ. ಈ ಪರಿಸ್ಥಿತಿ ನಮಗೆ ಆಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಿಮ್ಮ ಪರಿಸ್ಥಿತಿ ಹದಗೆಟ್ಟಿದೆ ಎಂದು ನನಗೆ ಗೊತ್ತಿದೆ. ಆದರೆ ಪ್ರಶ್ನೆ ಇರುವಂಥದ್ದು ಏನಾಗಿದೆ....

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್:– ನಮ್ಮ ಪರಿಸ್ಥಿತಿ ಹದಗೆಟ್ಟಿರುವುದು ನಿಮಗೆ ಗೊತ್ತಿರುವುದಕ್ಕೆ ಬಹಳ ಸಂತೋಷ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಸನ್ಮಾನ್ಯ ಅಧ್ಯಕ್ಷರೆ, ನಾನು ಏನು ಹೇಳುತ್ತಿದ್ದೇನೆಂದರೆ, ಇವೊತ್ತು ಸನ್ಮಾನ್ಯ ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿಗಳಾದ ನಂತರದ 95 ದಿವಸಗಳಲ್ಲಿ ಅವರು ಒಳ್ಳೆಯ ಕೆಲಸ ಮಾಡಬೇಕೆಂದು ಏನು ಕಳಕಳಿ ಇಟ್ಟುಕೊಂಡು ಹೊರಟಿದ್ದಾರೆ, ಅದನ್ನಾದರೂ ಮಾಡುವುದಕ್ಕೆ ನೀವು ಬಿಡುತ್ತಿದ್ದೀರೋ ಈಗಾಗಲೇ ಅವರ ಕಾಲು ಹಿಡಿದು ಎಳೆಯುವುದಕ್ಕೆ ಪ್ರಾರಂಭವಾಗಿದೆ. ಅವರ ಬಗ್ಗೆ ಅವಿಶ್ವಾಸ ಸೂಚಿಸುವ ಕಸರತ್ತು ಪ್ರಾರಂಭವಾಗಿದೆ. ಅನೇಕ ಜನ ಪ್ರಮುಖರು ಇವೊತ್ತು ಹೇಗಾದರೂ ಮಾಡಿ ನಾಲ್ಕನೇ ಮುಖ್ಯಮಂತ್ರಿಯನ್ನು ಮಾಡುವುದಕ್ಕೆ ಮತ್ತು ಮಂತ್ರಿ ಸ್ಥಾನ ಸಿಗದಿದ್ದವರು ಮಂತ್ರಿಯಾಗುವುದು ಹೇಗೆನ್ನುವುದರ ಬಗ್ಗೆ ಚಿಂತೆ ಮಾಡುತ್ತಿದ್ದಾರೆ. ಈ ಪರಿಸ್ಥಿತಿಯಲ್ಲಿ ನಾನು ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀಮಾನ್ ವೀರಪ್ಪ ಮೊಯಿಲಿಯವರನ್ನು ಒತ್ತಾಯಿಸುತ್ತಿದ್ದೇನೆ. ಯಾರಿಗೆ ಮಂತ್ರಿಯಾಗಲು ಆಸೆ ಇದೆಯೋ, ಅವರೆಲ್ಲರಿಗೆ ಒಂದೇ ಸಾರಿ ಮಂತ್ರಿಗಳನ್ನಾಗಿ ಮಾಡಿ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಒಂದು ಮುಕ್ಕಾಲು ವರ್ಷದಲ್ಲಿ ಆಗುವಂಥ ಸಾಧನೆ 9 ತಿಂಗಳಿನಲ್ಲಿಯೇ ಆಗುವುದಕ್ಕೆ ನಿಮಗೆ ಶಕ್ತಿ ಇದ್ದರೆ.....

ಶ್ರೀ ಆರ್.ಎಲ್. ಜಾಲಪ್ಪ:– ಒಂದು ವಿಚಾರವನ್ನು ಸನ್ಮಾನ್ಯ ವೀರಪ್ಪ ಮೊಯಿಲಿಯವರು ಯೋಚನೆ ಮಾಡಬಹುದು. ಏನೆಂದರೆ, ಶ್ರೀ ಬಂಗಾರಪ್ಪನವರು ಮುಖ್ಯ ಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ನಮಗೆ ಮಂತ್ರಿ ಸ್ಥಾನ ಸಿಗಲಿಲ್ಲವೆಂದು ಕೆಲವರು ಏನೇನೋ ಪ್ರಯತ್ನ ಮಾಡಿದರು. ಆದರೂ, ಕಡೆಗೆ ಬಂಗಾರಪ್ಪನವರು ಹೋದರು. ಈಗ ವೀರಪ್ಪ ಮೊಯಿಲಿಯವರು ಬಂದಿದ್ದಾರೆ. ಇವರ ಬಗ್ಗೆ ಈಗಾಗಲೇ ಭಿನ್ನಮತ ಚಟುವಟಿಕೆಗಳು ಪ್ರಾರಂಭವಾಗಿವೆ. ಈಗ ಆಡಳಿತದ ಅವಧಿ ಕೇವಲ 18 ತಿಂಗಳುಗಳು ಮಾತ್ರ ಇರುವುದರಿಂದ ಈಗಿರುವ ಸದಸ್ಯರುಗಳೆಲ್ಲರನ್ನೂ ಮೂರನೆಯ ಒಂದು ಭಾಗದಂತೆ ವಿಭಜಿಸಿ, ಅಪೆಕ್ಸ್ ಬ್ಯಾಂಕಿನಲ್ಲಿ ಎಕ್ಸಿಕ್ಯೂಟಿವ್ ಕಮಿಟಿ ಎಂದು ಮೂರು ತಿಂಗಳಿಗೆ ಒಂದು ಸಾರಿ ಬದಲಾವಣೆ ಮಾಡುತ್ತಾರಲ್ಲಾ ಹಾಗೆ 6–6 ತಿಂಗಳು ಒಬ್ಬೊಬ್ಬರಿಗೆ ಮಂತ್ರಿಗಳನ್ನಾಗಿ ಮಾಡಿದರೆ ಎಲ್ಲಾ ಸದಸ್ಯರು ಪೂರ್ತಿಯಾಗಿ ಮಂತ್ರಿಗಳಾಗುತ್ತಾರೆ. ಆಗ ಸಮಾಧಾನದಿಂದ ಆಡಳಿತ ನಡೆಸಬಹುದು. ಆದುದರಿಂದ, ನನ್ನ ಈ ಒಂದು ಸಲಹೆಯನ್ನು ತಮ್ಮ ಮುಂದಿಡುತ್ತಿದ್ದೇನೆ, ಇದರ ಬಗ್ಗೆ ಯೋಚನೆ ಮಾಡಬೇಕು.

ಶ್ರೀ ಜಿ. ರಾಜುಗೌಡ:– ಆ ಸೂತ್ರವನ್ನು ತಾವು ಕಂಡುಕೊಂಡಿದ್ದರೆ ಬೊಮ್ಮಾಯಿಯವರ ಸರ್ಕಾರ ಹೋಗುತ್ತಿರಲಿಲ್ಲ, ರಾಮಕೃಷ್ಣ ಹೆಗಡೆಯವರ ಸರ್ಕಾರ ಹೋಗುತ್ತಿರಲಿಲ್ಲ.

ಶ್ರೀ ವಾಟಾಳ್ ನಾಗರಾಜ್:– ಈಗ ಸರ್ಕಾರ ಬದಲಾವಣೆಯಾದಷ್ಟು ಹೆಚ್ಚು ಜನ ಸದಸ್ಯರಿಗೆ ಮಂತ್ರಿ ಸ್ಥಾನ ಸಿಗುತ್ತದೆ. ನೀವು ಏಕೆ ಹೀಗೆ ಆಡುತ್ತಿದ್ದೀರಿ ?

ಶ್ರೀ ಸಿ. ಬೈರೇಗೌಡ:– ರಾಜುಗೌಡರೆ, ನಾವು ಇಷ್ಟೊಂದು ತಾಪತ್ರಯ, ಬಾಧೆ ಪಡುತ್ತಿರುವುದು ನಿಮಗೋಸ್ಕರವಾಗಿ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಾನು ಒಂದು ಮಾತನ್ನು ನೋವಿನಿಂದ ಹೇಳುವುದಕ್ಕೆ ಇಷ್ಟಪಡುತ್ತೇನೆ. ಏನೆಂದರೆ, ಕಳೆದ ಎರಡು ವರ್ಷಗಳ ಕಾಲದಲ್ಲಿ ನೀವು ರಾಜಕೀಯ ಗೊಂದಲದಲ್ಲಿ ಮುಳುಗಿ ಪರಸ್ಪರ ಕಚ್ಚಾಟ, ಬಡಿದಾಟಗಳಲ್ಲಿ ತಲ್ಲೀನರಾಗಿ ಕೊನೆಗೆ ನೀವುಗಳೆಲ್ಲರೂ ಸೇರಿ ಒಂದು

ಬದಲಾವಣೆ ತಂದುಕೊಂಡು ಹೊಸ ಒಬ್ಬ ನಾಯಕನನ್ನು ಆಯ್ಕೆ ಮಾಡಿ ಮುಖ್ಯಮಂತ್ರಿಯಾಗಿ ಮಾಡಿದ ನಂತರ ಈ ಕಡೆ ಇರುವ ನಾವುಗಳು ಅವರ ಬಗ್ಗೆ ಟೀಕೆ ಮಾಡುವುದಕ್ಕೆ ಸ್ವಲ್ಪ ಸಮಯ ಕಾಯುತ್ತಿದ್ದೇವೆ. ಪತ್ರಿಕಾ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರತಕ್ಕಂಥವರೂ ಸಹ ಟೀಕೆ-ಟಿಪ್ಪಣಿ ಮಾಡುವುದಕ್ಕೆ ನೂರು ದಿವಸ ಕಳೆಯಲಿ. ಎಂದು ಕಾಯುತ್ತಿದ್ದಾರೆ. ಆದರೆ, ನೀವು ಇನ್ನು ಕಾಯುವುದಕ್ಕೆ ಸಿದ್ಧವಿಲ್ಲ. ಈಗಾಗಲೇ ಒಂದು ರಾಜಕೀಯ ಅಸ್ಥಿರತೆ ತಾಂಡವವಾಡುವ ಪ್ರಯತ್ನವನ್ನು ತಾವು ಮಾಡುತ್ತಿದ್ದೀರಲ್ಲಾ, ಇದರ ಬಗ್ಗೆ ಈ ರಾಜ್ಯದ ಜನರ ಹಿತದೃಷ್ಟಿಯಿಂದ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಸಾಧ್ಯವಾದರೆ ಮುಖ್ಯಮಂತ್ರಿಗಳಿಗೆ ಸಹಕಾರ ಕೊಡಿ, ಇಲ್ಲವೆ ತಮಗೆ ಈಗಾಗಲೇ ಮನದಟ್ಟಾಗಿದ್ದರೆ, ಸನ್ಮಾನ್ಯ ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿಗಳಾಗಿದ್ದಂಥ ಕಾಲದಲ್ಲಿ ಯಾವುದೇ ಒಂದು ಅಭಿವೃದ್ಧಿ ಕಾರ್ಯ ಮಾಡುವುದಕ್ಕೆ ಸಾಧ್ಯವಿಲ್ಲವೆನ್ನುವ ಶಕ್ತಿಯನ್ನು ಕಳೆದುಕೊಂಡಿದ್ದಾರೆಂದು ನಿಮಗೆ ಅನ್ನಿಸಿದ್ದರೆ ದಯಮಾಡಿ ವಿಧಾನಸಭೆಯನ್ನು ವಿಸರ್ಜನೆ ಮಾಡಿ, ಚುನಾವಣೆ ನಡೆಸೋಣ. ಈ ರೀತಿ ಮಾಡುವುದರ ಬದಲಾಗಿ ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ಹದಗೆಡಿಸಿಕೊಂಡು ಗೊಂದಲದ ವಾತಾವರಣದಲ್ಲಿ ತಾವೆಲ್ಲರೂ ಏನಿದ್ದೀರಿ. ಇದು ಸರಿಯಲ್ಲ.

ಶ್ರೀ ಕೆ.ಎಚ್. ರಂಗನಾಥ್:- ಯಡಿಯೂರಪ್ಪನವರೇ, ನೀವು ಬಹಳ ಅವಸರದಲ್ಲಿದ್ದೀರೆಂದು ಕಾಣುತ್ತದೆ. ದೆಹಲಿಯಲ್ಲಿ ನಿಮ್ಮ ಪಕ್ಷದ ಪ್ರಮುಖ ನಾಯಕರಾದ ಅದ್ವಾನಿಯವರು ಲೋಕಸಭೆಯನ್ನು ವಿಸರ್ಜನೆ ಮಾಡಿ ಎಂದು ಹೇಳುತ್ತಿದ್ದು, ಇಲ್ಲಿ ನೀವು ವಿಧಾನಸಭೆಯನ್ನು ವಿಸರ್ಜನೆ ಮಾಡಿ ಎಂದು ಹೇಳುತ್ತಿದ್ದೀರಿ. ಇದರಿಂದ ನೀವು ನಿರಾಶೆಗೆ ಒಳಗಾಗುತ್ತಿದ್ದೀರಿ.

ಶ್ರೀ ಡಿ.ಬಿ. ಚಂದ್ರೇಗೌಡ:- ಅವರು ರಾಮ ಒಬ್ಬನೇ ನಮಗೆ ವೋಟು ಕೊಡಿಸುತ್ತಾನೆಂದು, ರಾಮ ಒಬ್ಬನೇ ಓಟ್ ಕೊಟ್ಟರೆ ಸಾಕು ಎಂದು ಹೇಳುತ್ತಿದ್ದಾರೆ.

ಶ್ರೀ ಕೆ.ಎಚ್. ರಂಗನಾಥ್:- ಜನರು ರಾಮನನ್ನು ಪೂಜೆ ಮಾಡುತ್ತಾರೆ. ರಾಮನ ಹೆಸರಿನಲ್ಲಿ ಓಟು ಕೊಡಿ ಎಂದು ಕರ್ನಾಟಕಕ್ಕೆ ಬಂದು ಕೇಳಿದರೆ ಯಾರು ಓಟು ಕೊಡುತ್ತಾರೆ ?

ಶ್ರೀ ವಾಟಾಳ್ ನಾಗರಾಜ್:- ಅವರದೇ ಅಂಥ ಮೂಢ ಸರ್ಕಾರಗಳು, ಭಾರತೀಯ ಜನತಾ ಪಕ್ಷದ ಸರ್ಕಾರಗಳು ವಜಾ ಆಗಿದ್ದುದು ಅನ್ಯಾಯವೆಂದು ಹೇಳುತ್ತಾರೆ. ಅಲ್ಲದೆ, ಈ ವಿಧಾನಸಭೆಯನ್ನೂ ಸಹ ವಿಸರ್ಜನೆ ಮಾಡಿ ಎಂದೂ ಸಹ ಹೇಳುತ್ತಿದ್ದಾರೆ. ಇವರ ಗೊಂದಲ ಏನೆಂದು ನಮಗೆ ಅರ್ಥವಾಗುತ್ತಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಇವೊತ್ತು ನಾನು ಏನು ಹೇಳುತ್ತಿದ್ದೇನೆಂದರೆ, ನಾನು ನಿಮ್ಮ ಸರ್ಕಾರಕ್ಕೆ ಬೆಂಬಲವನ್ನು ಕೊಡುತ್ತಿದ್ದೇನೆ. ಇದು ನಿಮ್ಮ ಕಾಲದಲ್ಲೇ ಕೊನೆಯಾಗಬೇಕೆಂಬುದು ನಮ್ಮ ಆಸೆ. ಇನ್ನು ಎರಡು ವರ್ಷಗಳ ಕಾಲ ಇದ್ದು, 5 ವರ್ಷಗಳನ್ನು ಪೂರ್ತಿಯಾಗಿ ಮುಗಿಸುವುದರ ಬಗ್ಗೆ ನಮಗೆ ಅಪೇಕ್ಷೆ ಇದೆ.

ಶ್ರೀ ಕೆ.ಎಚ್. ರಂಗನಾಥ್:- ನಿಮ್ಮ ಅಪೇಕ್ಷೆ ನಮಗೆ ಬೇಕಾಗಿಲ್ಲ. ನಾವು ಮತ್ತೆ ಅಧಿಕಾರಕ್ಕೆ ಬರುತ್ತೇವೆ. ನಿಮಗೆ ಏಕಿಷ್ಟು ಅನುಮಾನ ?

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾನು ಅನೇಕ ವಿಷಯಗಳನ್ನು ಇಲ್ಲಿ ಪ್ರಸ್ತಾಪಿಸುವುದಕ್ಕೆ ಇಷ್ಟಪಡುವುದಿಲ್ಲ. ಕಾರಣವೇನೆಂದರೆ ನೀವು ಹೋಗುತ್ತಿರುವ ದಾರಿ ಸರಿಯಾಗಿದೆ. ಇದು ಹೀಗೆ ಬಹಳ ದಿವಸ ಮುಂದುವರಿದರೆ....

ಶ್ರೀ ಕೆ.ಹೆಚ್. ರಂಗನಾಥ್:- ಚುನಾವಣೆಯಾಗಿ ನಮ್ಮ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುತ್ತದೆ.

ಇಲ್ಲವೇ ಅವರು ಜನತಾದಳ ಅಧಿಕಾರಕ್ಕೆ ಬರುತ್ತಾರೆ. ನೀವು ಬಿಜೆಪಿ ಕರ್ನಾಟಕದಲ್ಲಿ ಅಧಿಕಾರಕ್ಕೆ ಬರುವುದಿಲ್ಲ. ಸುಮ್ಮನೆ ಕಂಠ ಶೋಷಣೆ ನಿಮ್ಮದು.

ಶ್ರೀ ವಾಟಾಳ್ ನಾಗರಾಜ್:– ಇವರು ಜನತಾದಳ ಮತ್ತು ಅಧಿಕಾರಕ್ಕೆ ಬರುವುದು ನಿಮಗೆ ಖಚಿತವಾಗಿದೆಯೆ ?

ಶ್ರೀ ಕೆ.ಎಚ್. ರಂಗನಾಥ್:– ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬರದೆ ಹೋದರೆ ಜನತಾ ದಳದವರು ಅಧಿಕಾರಕ್ಕೆ ಬರುತ್ತಾರೆ.

ಶ್ರೀ ವಾಟಾಳ್ ನಾಗರಾಜ್:– ಹಾಗಾದರೆ, ನೀವಿಬ್ಬರೂ ದಾಯಾದಿಗಳೆಂದು ಕಾಣುತ್ತದೆ. ಈ ರಾಜ್ಯ ನಿಮ್ಮಿಬ್ಬರ ಕೈಯಲ್ಲೇ ಇರಬೇಕೆಂದು ಕಾಣುತ್ತದೆ.

ಶ್ರೀ ಕೆ.ಎಚ್. ರಂಗನಾಥ್:– ಈಗ ಹಾಗೆಯೇ ಆಗಿರುವುದು.

ಶ್ರೀ ವಾಟಾಳ್ ನಾಗರಾಜ್:– ಹಾಗಾದರೆ, ಏನೋ ಪಿತೂರಿ ನಡೆದಿರಬಹುದು.

ಶ್ರೀ ಕೆ.ಹೆಚ್. ರಂಗನಾಥ್:– ಪಿತೂರಿ ಸ್ವಾತಂತ್ರ್ಯ ಬಂದ ದಿವಸದಿಂದ ನಡೆದುಕೊಂಡು ಬಂದಿದೆ. ಮಾನ್ಯ ಜಾಲಪ್ಪನವರು ಹಿಂದೆ ಎಂ.ಎಲ್.ಸಿ. ಆಗಿದ್ದಾಗ ಎಲ್ಲಿದ್ದರು ? ಬನ್ನಿಕೋಡ್‌ರವರು ಎಲ್ಲಿದ್ದರು ? ಇದರ ಬಗ್ಗೆ ಕೆದಕುತ್ತಾ ಹೋದರೆ ಎಲ್ಲಿಗೇ ಹೋಗುತ್ತದೆ.

ನಾವು ನಾವು ಬೇರೆ ಅಲ್ಲ, ಒಂದಾಗಿದ್ದವಲ್ಲ......

ಶ್ರೀ ವಾಟಾಳ್ ನಾಗರಾಜ್:– ನಿಮಗೂ ಅವರಿಗೂ ಇತ್ತೀಚೆಗೆ ಏನಾದರೂ ಮಾತುಕತೆ ಶುರುವಾಗಿದೆಯೇ ?

ಶ್ರೀ ಬಿ.ಹೆಚ್. ಬನ್ನಿಕೋಡ್:– ಇಲ್ಲಿ ಅವರ ಕಾರ್ಯಕ್ರಮ ರೈತರ ಪರವಾಗಿ, ಬಡವರ ಪರವಾಗಿ, ದೀನದಲಿತರ ಪರವಾಗಿ ಇರತಕ್ಕದ್ದು, ಅದಕ್ಕೆ ನಾವು ಬರುತ್ತೇವೆಂದು ಹೇಳಿದರೆ ಅವರೂ ಬರುತ್ತೇನೆಂದು ಹೇಳುತ್ತಿದ್ದಾರೆ. ಅವರು ರಾಜ್ಯದ ಜನತೆಯ ಬಗ್ಗೆ ನೀತಿಯ ಮಾತನ್ನು ಹೇಳುತ್ತಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಹಿರಿಯ ಸಚಿವರಾದಂಥ ರಂಗನಾಥ್‌ರವರ ಕಳಕಳಿಯನ್ನು ನಾನು ಅರ್ಥಮಾಡಿಕೊಳ್ಳಬಲ್ಲೆ. ತಾವೇ ಅಧಿಕಾರದಲ್ಲಿರಬೇಕು. ನಾವುಗಳು ವಿರೋಧಪಕ್ಷದಲ್ಲೇ ಕುಳಿತುಕೊಳ್ಳಬೇಕೆನ್ನುವ ಒಂದು ಕಾಲವಿತ್ತು, ಆದರೆ 45 ವರ್ಷಗಳ ನಿಮ್ಮ ಆಡಳಿತ ವೈಖರಿ.... ಏನು ? ಆಗ ನಿಮಗೆ ಒಬ್ಬರ ನಾಯಕತ್ವವಿತ್ತು. ಆದರೆ ಇವತ್ತು ಯಾರು ಇದ್ದಾರೆ, ನೀವು ತಬ್ಬಲಿಗಳಾಗಿದ್ದೀರಿ.

ಶ್ರೀ ಕೆ. ಹೆಚ್. ರಂಗನಾಥ್:– ನಿಮ್ಮನ್ನು ನಂಬಿ ರಾಷ್ಟ್ರದ ಜನತೆಯು 1977ರಲ್ಲಿ ಬರೀ ಸಣ್ಣಪುಟ್ಟ ಅಧಿಕಾರಗಳಾದ ತಾಲ್ಲೂಕು ಬೋರ್ಡ್, ಮುನಿಸಿಪಾಲಿಟಿ, ಕಾರ್ಪೊರೇಷನ್, ರಾಜ್ಯಸರ್ಕಾರದ ಆಡಳಿತವಲ್ಲ, ಇಡೀ ರಾಷ್ಟ್ರದ ಅಧಿಕಾರವನ್ನು ಆಳಲುಕೊಟ್ಟರು, ಅದೇ ರೀತಿ 1989ರಲ್ಲಿಯೂ ಕೂಡ ಕೊಟ್ಟರು. ಆದರೆ ತಾವೇನು ಆಡಳಿತ ಮಾಡಿದಿರಿ ? ನಿಮಗೆ ಈಗ ಇರತಕ್ಕಂಥ ರೀತಿಯಲ್ಲೇ ಅಂದು ಬಹುಮತವನ್ನು ಕೊಟ್ಟರು. ಆದರೆ ತಾವು ಏನು ಮಾಡಿದಿರಿ ? ಮತ್ತೆ ಮೊನ್ನೆತಾನೆ ರಾಷ್ಟ್ರದಲ್ಲಿಯೇ ಅತ್ಯಂತ ದೊಡ್ಡ ರಾಜ್ಯವಾದ ಉತ್ತರ ಪ್ರದೇಶದ ಆಡಳಿತವನ್ನು ಮಾಡಲು ಜನರು ಅವಕಾಶ ಕೊಟ್ಟರು, ಆದರೆ ತಾವು ಏನು ಮಾಡಿದಿರಿ ? ಜನರು ತಮಗೆ ಅಧಿಕಾರವನ್ನು ಮಾಡತಕ್ಕ ಜವಾಬ್ದಾರಿಯನ್ನು ಕೊಟ್ಟರೆ ಅದನ್ನು ತಾವು ನಿರ್ವಹಣೆ ಮಾಡಿದಿರಾ ? ಇದು ಜನರಿಗೆಲ್ಲಾ ಗೊತ್ತಿದೆ, ಎರಡು ಸಾಲ

ತಾವು ನಿರಾಸೆಯನ್ನು ಮಾಡಿದ್ದೀರಿ, ಆದುದರಿಂದ ಮತ್ತೆ ನೀವು ಅಧಿಕಾರಕ್ಕೆ ಬರುತ್ತೇನೆಂದು ಬ್ರಾಂತಿಯನ್ನು ಇಟ್ಟುಕೊಳ್ಳಬೇಡಿ, ಅದು ಸಫಲವಾಗುವುದಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ:– ಅವರು ತಬ್ಬಲಿಗಳಾದರು ಎಂದು ಹೇಳಿದರು, ತಬ್ಬಲಿಯನ್ನಾದರೂ ನಂಬಬಹುದು ಆದರೆ ಹೆಬ್ಬುಲಿಯನ್ನಂತೂ ಅಲ್ಲ;

ಶ್ರೀ ಬಿ.ಎಸ್. ಯಡಿಯೂರಪ್ಪ:– 1977ರಲ್ಲಿ ಮತ್ತು ನಂತರ ನಮಗೆ ಅಧಿಕಾರ ಸಿಕ್ಕಿತು ಅದನ್ನು ಉಪಯೋಗ ಮಾಡಿಕೊಳ್ಳಲಿಲ್ಲ ಎನ್ನತಕ್ಕದ್ದು ನಿಜ. ಈ ದೇಶದಲ್ಲಿ ಲೋಕನಾಯಕ ಜಯಪ್ರಕಾಶ್ ನಾರಾಯಣ್‌ರ ನೇತೃತ್ವದಲ್ಲಿ ಸಮಗ್ರವಾದ ಕ್ರಾಂತಿಯಾಗಿ ದೊಡ್ಡ ಹೋರಾಟ ನಡೆಯಿತು. ಆ ಹೋರಾಟದಿಂದ ಜನರಲ್ಲಿ ಬದಲಾವಣೆಯನ್ನು ತಂದಂಥ ಕಾಲದಲ್ಲಿ ನಮ್ಮ ಜನತಾ, ಜನತಾದಳದ ಸ್ನೇಹಿತರು ಸರಿಯಾದ ರೀತಿಯಲ್ಲಿ ಅದನ್ನು ಉಪಯೋಗ ಮಾಡಿಕೊಳ್ಳಲಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ:– ಅವರು ಯಾವಾಗ ನೋಡಿದರೂ ಕೂಡ ಮೋಸ ಮಾಡತಕ್ಕ ಕೆಲಸವನ್ನೇ ಮಾಡುತ್ತಾರೆ. 1977 ಮತ್ತು 1989ರಲ್ಲೂ ಅದೇ ರೀತಿ ಮಾಡಿದ್ದಾರೆ. ನಿಮ್ಮ ಸ್ವಾರ್ಥ ಜಾಸ್ತಿಯಾಗಿದೆ, ಇವರು ಮಿತ್ರ ದ್ರೋಹಿಗಳು, ಆದರಿಂದಾಗಿಯೇ ಅಂದು ನಾವು ಅಧಿಕಾರವನ್ನು ಕಳೆದುಕೊಂಡೆವು ನಾವು ಸತ್ಯವಂತರಾಗಿ ಉಳಿದುಕೊಂಡೆವು, ನಾವು ನಿಮ್ಮಂತೆ ಮೋಸವನ್ನು ಮಾಡಲಿಲ್ಲ.

ಶ್ರೀ ರುಕ್ಮಯ್ಯ ಪೂಜಾರಿ:– 1979ರಲ್ಲಿ ನಾವೇನು ಹೊರಗೆ ಹೋಗಲಿಲ್ಲ. ನಿಮ್ಮ ಪಕ್ಷದವರೇ ಹೋದರು. ನಿಮ್ಮನ್ನು ನಿಮ್ಮವರೇ ಅಡ್ಡಿ ಮಾಡಿದರು. ಅದನ್ನು ಗಮನದಲ್ಲಿಟ್ಟುಕೊಳ್ಳಿ, ನಾವು ಏನೂ ಮಾಡಲಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ:– ಬ್ಯಾಕ್‌ವರ್ಡ್ ಕ್ಲಾಸ್‌ನ ಜನರು ಜನತಾದಳಕ್ಕೆ ಹೋಗುತ್ತಾರೆಂದು ಮಂದಿರ ಮತ್ತು ಮಸೀದಿಯ ಪ್ರಶ್ನೆಯನ್ನು ತೆಗೆದುಕೊಂಡು ಬಂದರು. ಏಕೆಂದರೆ ನಿಮ್ಮಲ್ಲಿರುವ ಹಿಂದುತ್ವದಿಂದಾಗಿ. ನಾವು ಹಿಂದುಳಿದ ವರ್ಗದವರು ಇನ್ನೂ ಶೂದ್ರರಾಗಿ ಇನ್ನೊಂದು ಸಾವಿರ ವರ್ಷ ನಿಮ್ಮಗಳ ಸೇವೆಯನ್ನು ಮಾಡಿಕೊಡಬೇಕೆಂದು ನಿಮ್ಮ ಮನಸ್ಸಿನಲ್ಲಿ ಇಟ್ಟುಕೊಂಡಿರುವುದರಿಂದ ನೀವು ನಮಗೆ ಮೋಸ ಮಾಡಿ ನಮಗೆ ಕೈಕೊಟ್ಟು ಹೋದುದರಿಂದ ನಾವು ಕೆಟ್ಟೆವು, ನೀವೂ ಸಹ ಕೆಟ್ಟಿರಿ, ಆದರೆ ನಾವು ಶಾಶ್ವತವಾಗಿ ಕೆಡಲಿಲ್ಲ, ನಾವು ಪುನಃ ಅಧಿಕಾರಕ್ಕೆ ಬರುತ್ತೇವೆ, ಆದರೆ ನೀವಂತೂ ಈ ಶತಮಾನದಲ್ಲಿ ಅಧಿಕಾರಕ್ಕೆ ಮತ್ತೆ ಬರಲು ಸಾಧ್ಯವಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್:– ಅವರು ಕೈಯನ್ನು ಕೊಡಲಿಲ್ಲ. ಪಲ್ಲಕ್ಕಿಯನ್ನು ಕೊಟ್ಟಿದ್ದರು. ಅದನ್ನು ನೀವು ಬಿಟ್ಟುಬಿಟ್ಟಿರಿ, ಅವರು ಹೆಚ್ಚಾಗಿ ಬಿಟ್ಟರು.

ಶ್ರೀ ಆರ್.ಎಲ್. ಜಾಲಪ್ಪ:– ಅದರ ಜೊತೆಗೆ ನೀವೂ ಕೂಡ ಸೇರಿಕೊಂಡಿರಲ್ಲ, ಅವರನ್ನು ತೆಗೆದುಕೊಂಡು ಹೋಗಿ ಡೆಪ್ಯೂಟಿ ಸ್ಪೀಕರ್ ಆಗಿ ಮಾಡಿದಿರಲ್ಲ. ಒಂದು ಕಾಲದಲ್ಲಿ ನಿಮಗೆ ನೀತಿ ಇತ್ತು. ಆದರೆ ಆ ನೀತಿ ಈಗೇನೂ ಇಲ್ಲ, ಎಲ್ಲಾ ಹೊರಟುಹೋಯಿತು.

ಶ್ರೀ ಕೆ.ಹೆಚ್. ರಂಗನಾಥ್:– ನಾವು ಏನು ಮಾಡುತ್ತೇವೆಂದರೆ ನಿಮ್ಮದು ಏನೆಂದು ನೋಡಿ ಮಾಡುತ್ತೇವೆ.

ಶ್ರೀ ಆರ್.ಎಲ್. ಜಾಲಪ್ಪ:– ನಮಗಿಬ್ಬರಿಗೂ ಕೈಕೊಡುವವರು ತಾವು.

ಶ್ರೀ ಕೆ.ಹೆಚ್. ರಂಗನಾಥ್:– ನಾವಷ್ಟು ದಡ್ಡರಲ್ಲ.

ಶ್ರೀ ವಾಟಾಳ್ ನಾಗರಾಜ್:– ಕಳ್ಳ ಕಳ್ಳರೆಲ್ಲಾ ಒಂದು ಕಡೆ ಸಂತೆಗೆ ಸೇರಿದರು ಎನ್ನುವ ಗಾದೆ ಇದೆ. ಆದರಂತಾಯಿತು.

ಶ್ರೀ ಸಿ. ಬೈರರೇಗೌಡ:-- ನಾವು ಡೆಲ್ಲಿಯಲ್ಲಿ ಏನು ಮಾಡುತ್ತೇವೆಂದು ತಾವು ಹೇಳಿದ್ದೀರಿ, ತಾವು ಡೆಲ್ಲಿಯಲ್ಲಿ ಕುಳಿತುಕೊಂಡು ಬರೀ ಕುರ್ಚಿಯ ಕಡೆಗೆಯೇ ನೋಡುತ್ತಿರುತ್ತೀರಿ. ಆದುದರಿಂದ ಈ ಪರಿಸ್ಥಿತಿ ಬಂದಿದೆ.

ಶ್ರೀ ಕೆ.ಹೆಚ್. ರಂಗನಾಥ್:– ಎರಡು ಸಾರಿ ಈ ರಾಷ್ಟ್ರದ ಜನರು ನಿಮಗೆ ಅಧಿಕಾರವನ್ನು ಈ ರಾಷ್ಟ್ರದ ಅಧಿಕಾರವನ್ನು ಕೊಟ್ಟಂಥ ಕಾಲದಲ್ಲಿ ಅದನ್ನು ಜವಾಬ್ದಾರಿಯಿಂದ ನಿರ್ವಹಿಸಲು ನಿಮ್ಮಿಂದ ಸಾಧ್ಯವಾಗದಿದ್ದರೆ ನಾವೇ ಆ ಕುರ್ಚಿಯನ್ನು ನೋಡಬೇಕಾಗುತ್ತದೆ. ಏಕೆಂದರೆ ಆ ಜವಾಬ್ದಾರಿಯನ್ನು ಹೊರುವುದಕ್ಕೆ ತಯಾರಾಗಿರುವವರು ನಾವೇ, ಅದಕ್ಕೋಸ್ಕರವೇ ನಾವು ಕುರ್ಚಿಯ ಕಡೆಗೆ ನೋಡಬೇಕಾಗುತ್ತದೆ. ಇಲ್ಲದಿದ್ದರೆ ರಾಷ್ಟ್ರವನ್ನು ಹಾಳು ಮಾಡುವುದಕ್ಕೆ ಸಾಧ್ಯವಿಲ್ಲ.

(ಸದಸ್ಯರೆಲ್ಲರೂ ಮೇಜು ತಟ್ಟಿ ಸಂತೋಷವನ್ನು ವ್ಯಕ್ತ ಮಾಡಿದರು)

ಶ್ರೀ ಪಿ.ಜಿ.ಆರ್. ಸಿಂಧ್ಯ:– ಮಾನ್ಯ ಅಧ್ಯಕ್ಷರೇ, ಮಾನ್ಯ ಶ್ರೀ ರಂಗನಾಥ್‌ರವರು ಹೇಳಿದ ಮಾತುಗಳು ಸತ್ಯವಾಗಿದೆ. ನಮ್ಮ ದೇಶದ ಜನರು ನಮಗೆ ಎರಡು ಸಾರಿ ಅಧಿಕಾರವನ್ನು ಕೊಟ್ಟಿದ್ದಾರೆ. 1977 ಮತ್ತು 1989ರಲ್ಲಿ ಎರಡು ಸಾರಿ ನಮಗೆ ಅಧಿಕಾರವನ್ನು ಕೊಟ್ಟರು. ಆದರೆ ನಮಗೆ ಎರಡೂ ಸಾರಿ ಸಹವಾಸ ದೋಷದಿಂದ ಹೀಗಾಯಿತು. ನಮಗೆ ಇವರ ಸಹವಾಸದಿಂದ ಕೆಟ್ಟದ್ದು ಆಯಿತು. ಅವರಿಗೆ ಬಹುಶಃ ಜ್ಞಾಪಕ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ, 1979ರಲ್ಲಿ ಡ್ಯುಯಲ್ ಮೆಂಬರ್‌ಶಿಪ್ ಮೇಲೆ ನಮ್ಮ ಪಾರ್ಟಿಯನ್ನು ಬಿಟ್ಟು ಹೋದರು. ಇವರು ಹೇಳುವುದೊಂದು ಮಾಡುವುದು ಒಂದು. ನಿಮ್ಮ ಪಾರ್ಟಿಯ ಬಾವುಟ ಬೇಕು, ಆದರೆ ನಮ್ಮದ್ದನ್ನು ನಾವು ಮಾಡುತ್ತೇವೆ ಎಂದು ಹೇಳುವುದು. ನಾವು ಮಂಡಲ್ ಕಮೀಷನ್‌ನನ್ನು ಇಂಪ್ಲಿಮೆಂಟ್ ಮಾಡದೇ ಹೋಗದಿದ್ದರೆ ನಮ್ಮ ಪಲ್ಲಕ್ಕಿಯನ್ನೇ ಇವರು ಹೊತ್ತುಕೊಂಡು ಹೋಗುತ್ತಿದ್ದರು. ವಿ.ಪಿ. ಸಿಂಗ್ ಜಗತ್ತಿನಲ್ಲಿಯೇ ದೊಡ್ಡ ಮನುಷ್ಯ ಎಂದು ಹೊತ್ತುಕೊಂಡು ತಿರುಗಾಡುತ್ತಾ ಇರುತ್ತಿದ್ದರು. ನಾವು ಮಂಡಳ್ ಕಮಿಷನ್ ಮಾಡುತ್ತೇವೆ ಎಂದು ಹೇಳಿದೆವು ಆಗ ನಮಗೆ ಮುಳುಗಿಸಿದರು.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಹಿರಿಯ ಸಚಿವರಾದ ರಂಗನಾಥ್‌ರವರು ಪ್ರಸ್ತಾಪ ಮಾಡಿದರು. ಸತ್ಯವಾದ ಮಾತುಗಳನ್ನು ಅವರು ಹೇಳಿದ್ದಾರೆ. ವಿರೋಧ ಪಕ್ಷಕ್ಕೆ ದೈವಿಕ ಪುಣ್ಯಾತ್ಮ ಲೋಕನಾಯಕ ಜಯಪ್ರಕಾಶ್ ನಾರಾಯಣರವರ ಹೋರಾಟದ ಫಲದ ಅವಕಾಶವನ್ನು ಕಳೆದುಕೊಂಡರು.

ಶ್ರೀ ಆರ್.ಎಲ್. ಜಾಲಪ್ಪ:– ಜಯಪ್ರಕಾಶ ನಾರಾಯಣ್‌ರವರ ಹೆಸರನ್ನು ಏಕೆ ಹೇಳುತೀರಿ ? ನಿಮಗೆ ಬೇಕಾಗಿರುವುದು ಅಧಿಕಾರ ಅದಕ್ಕೆ ಏನು ಹೇಳಬೇಕೋ ಅದನ್ನು ಹೇಳಿ, ಏಕೆ ದೊಡ್ಡ ದೊಡ್ಡ ಮನುಷ್ಯರ ಹೆಸರುಗಳನ್ನು ಹೇಳುತ್ತೀರಿ ?

ಶ್ರೀ ಕೆ.ಹೆಚ್. ರಂಗನಾಥ್:– ತಮಗೆ 1956–57 ರ ವಿಚಾರ ಗೊತ್ತಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಬೆಂಗಳೂರಿನಲ್ಲಿ ಮೊದಲನೆಯ ಅಖಿಲ ಭಾರತ ಪ್ರಜಾಸೋಸಲಿಸ್ಟ್ ಪಕ್ಷದ ಸಭೆಯು ಟೌನ್‌ಹಾಲ್‌ನಲ್ಲಿ ಆಯಿತು. 1952ರ ಚುನಾವಣೆಯಾದ ನಂತರ ಮೊದಲಬಾರಿಗೆ ಕಾಂಗ್ರೆಸ್‌ಗೆ ಎಲ್ಲಾ ಪಕ್ಷಗಳೂ ವಿರೋಧ ಪಕ್ಷವಾಗಬೇಕೆಂಬ ಒಂದು ವಿಚಾರವು ಬಂದಾಗ, ನಿಮ್ಮ ಜೊತೆಗೆ ಬೇಡ, ಕಮ್ಯೂನಿಸ್ಟ್ ಜೊತೆಗೆ ಬೇಡ ಎಂದು ಹೇಳಿ, ವಿರೋಧ ಮಾಡಿದಂಥವರು ಜಯಪ್ರಕಾಶ್ ನಾರಾಯಣ್‌ರವರು. ಆದರೆ 1952 ರಿಂದ 1977 ರ ವರೆಗೂ 1976 ರಲ್ಲಿ ಎಮರ್ಜನ್ಸಿ ಆದಂಥ

ಕಾಲದಲ್ಲಿ ಅವರಿಗೆ ಏನೋ ಅಭಿಪ್ರಾಯ ಬದಲಾವಣೆಯಾಗಿ, ಇರಲಿ ನೋಡೋಣ, ಸರಿಯಾಗಿರಬಹುದು ಎಂದುಕೊಂಡರು. 1971 ರಲ್ಲಿ ಗ್ರ್ಯಾಂಡ್ ಆಲಿಯನ್ಸ್ ಮಾಡಿಕೊಂಡು ಎಲ್ಲಾ ನಾಲ್ಕು ಪಕ್ಷದವರು ಸೇರಿಕೊಂಡು, ಪಾಪ ತಾವು ಆಗ ಟೌನ್‌ನೊಳಗೆ ಇದ್ದೀರಿ. ಟೌನ್‌ನೊಳಗೆ ಇದ್ದವರನ್ನು ಹಳ್ಳಿಗಳಿಗೆ ಕರೆದುಕೊಂಡು ಹೋಗಿ ಬಿಟ್ಟು ಬಂದರು. ಹೀಗಾಗಿ ನೀವು ಅಲ್ಲಿ, ಇಲ್ಲಿ ಎಂದು ಚಿಗುರಿದ್ದೀರಿ. ಜಯಪ್ರಕಾಶ್ ನಾರಾಯಣ ನಿಮಗೆ ಅನುಕೂಲವಾಗಿದ್ದರು ಎಂದು ಅವರ ಹೆಸರು ಹೇಳುತ್ತೀರಿ, ವಿವೇಕಾನಂದರ ಹೆಸರನ್ನೂ ಹೇಳುತ್ತೀರಿ. ಇಲ್ಲವಾದರೆ ಎಲ್ಲಿ ಅವರ ಹೆಸರನ್ನು ಹೇಳುತ್ತಿದ್ದೀರಿ ?

ಶ್ರೀ ಬಿ.ಎಸ್. ಯಡಿಯೂರಪ್ಪ:– ತಾವುಗಳು ಪಿಎಸ್‌ಪಿಯಲ್ಲಿದ್ದವರು. ಅಲ್ಲಿ ಹೋರಾಟ ಮಾಡಿದವರು. ಜೆ.ಪಿ.ಯವರು ಹೋರಾಟ ಮಾಡಿದಂಥ ಸಂದರ್ಭದಲ್ಲಿ ಲಕ್ಷಾಂತರ ಜನರು ಜೈಲ್‌ನಲ್ಲಿ ಕುಳಿತು ಆ ತುರ್ತು ಪರಿಸ್ಥಿತಿಯ ವಿರುದ್ಧ ಹೋರಾಟ ಮಾಡಿದಾಗ, ಆಗಿನ ಅಂಕಿಅಂಶಗಳನ್ನು ತೆಗೆಯಬೇಕು. ಅವೊತ್ತು ಜೆ.ಪಿ.ಯವರ ವಿಚಾರಧಾರೆಗೆ ಬೆಂಬಲಕೊಟ್ಟು, ಜೈಲ್‌ನಲ್ಲಿ ಕುಳಿತು ಹೋರಾಟ ಮಾಡಿ ಅಲ್ಲಿಂದ ವಾಪಸ್ ಬರುತ್ತೇವೆ ಎಂಬುದು ನಮಗೆ ಗೊತ್ತಿರಲಿಲ್ಲ. ನಾವು ಏಕೆ ಹೋರಾಟ ಮಾಡಿದ್ದೇನೆ ಅಂದರೆ ಈ ದೇಶಕ್ಕೆ ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಲ್ಲಿ ಜನರಿಗೆ ಬೇಕಾದ ಕನಿಷ್ಟ ಸೌಲಭ್ಯಗಳನ್ನು ಕೂಡ ಕೊಡದೇ ತಮ್ಮ ಸ್ವಾರ್ಥದಲ್ಲಿಯೇ ನಿರತರಾಗಿರತಕ್ಕಂಥ ಕಾಂಗ್ರೆಸ್ ಪಕ್ಷವು ಅಧಿಕಾರದಿಂದ ಮೊದಲು ಪಕ್ಕಕ್ಕೆ ಸರಿದು, ಯಾರಾದರೂ ಒಬ್ಬರು ಅಧಿಕಾರಕ್ಕೆ ಬರಲಿ ಎಂದು ನಾವು ಹೋರಾಟ ಮಾಡಿದ್ದೇವೆ. ಆದರೆ ಏನಾಯಿತು ? ನಾನು ಜನತಾ ದಳದ ಸ್ನೇಹಿತರನ್ನು ಕೇಳುವುದಕ್ಕೆ ಇಚ್ಛೆ ಪಡುವುದೇನೆಂದರೆ, 1983ರಲ್ಲಿ ಬಿಜೆಪಿಯ 18 ಜನರ ಬೇಷರತ್ ಬೆಂಬಲ ಇಲ್ಲದಿದ್ದರೆ, ಸನ್ಮಾನ್ಯ ರಾಮಕೃಷ್ಣ ಹೆಗಡೆಯವರು ಇಲ್ಲಿ ಮುಖ್ಯಮಂತ್ರಿಗಳಾಗಿ ಇರುತ್ತಿದ್ದರೆ ?

ಶ್ರೀ ಕೆ.ಹೆಚ್. ರಂಗನಾಥ್:– ನೀವು ಅಲೈಯನ್ಸ್ ಮಾಡಿ ಕಾಂಗ್ರೆಸ್ ವಿರುದ್ಧ ಎಂದು ಹೇಳಿ ಗೆದ್ದು ಬಂದಿದ್ದೀರಿ. ಇಲ್ಲವಾದರೆ ನೀವೆಲ್ಲಿ ಗೆಲ್ಲುತ್ತಿದ್ದೀರಿ ?

ಶ್ರೀ ಪಿ.ಜಿ.ಆರ್. ಸಿಂಧ್ಯ:– ಮಾನ್ಯ ಅಧ್ಯಕ್ಷರೇ, ಯಡಿಯೂರಪ್ಪನವರು ಹೇಳತಕ್ಕಂಥ ಮೂರು ವಿಚಾರಗಳೂ ಸರಿಯಾಗಿದೆ. 1977ರಲ್ಲಿ ಅಧಿಕಾರಕ್ಕೆ ಬಂದಾಗಲೂ ನಾವು, ನೀವು ಜೊತೆಯಲ್ಲಿದ್ದೆವು. ರಾಮಕೃಷ್ಣ ಹೆಗಡೆಯವರು ಕೂಡ ಮುಖ್ಯಮಂತ್ರಿಯಾಗಿದ್ದುದು ಕೂಡ ನಿಮ್ಮ ಬೆಂಬಲ ಪಡೆದುಕೊಂಡೆ ಆಗಿದ್ದಾರೆ ಮತ್ತು ವಿ.ಪಿ. ಸಿಂಗ್‌ರವರು ಕೂಡ ನಿಮ್ಮ ಬೆಂಬಲ ಪಡೆದುಕೊಂಡೇ ಪ್ರಧಾನಿಯಾಗಿದ್ದಾರೆ. ಆದರೆ ಈಗ ನಮಗೆ ಅರ್ಥವಾಗಿದೆ, ನಿಮ್ಮ ಸಹವಾಸ ಮಾಡುವುದು ಬಹಳ ಕಷ್ಟದಾಯಕ.

ಶ್ರೀ ಆರ್.ವಿ. ದೇಶಪಾಂಡೆ:– ನಿಮ್ಮ ಸಹವಾಸ ಮಾಡುವುದು ಕಷ್ಟ. ಆದರೆ ನಿಮಗೆ ಗ್ರಾಮಾಂತರ ಪ್ರದೇಶವನ್ನು ಪರಿಚಯ ಮಾಡಿಸಿದವರು ನಾವು ಎಂಬುದನ್ನು ನೀವು ಮರೆಯಬಾರದು.

ಶ್ರೀ ಆರ್. ಎಲ್. ಜಾಲಪ್ಪ:– 85ರಲ್ಲಿ ಚುನಾವಣೆ ಆಯಿತಲ್ಲ ಏನಾಯಿತು ? 89ರಲ್ಲಿ ನೀವು ಏಕೆ ಬರಲಿಲ್ಲ ? ನಿಮ್ಮ ಕಾಟ ಸಾಕಾಗಿ ನೀವು ಹೋದರೆ ಸಾಕು ಎನ್ನುವಂತಾಗಿತ್ತು.

ಶ್ರೀ ಬಿ.ಎಸ್. ಯಡಿಯೂರಪ್ಪ:– ಒಂದು ಮಾತಂತೂ ಸತ್ಯ. ಈ ಕಡೆಯವರು ಹೇಳಿದರೆ 45 ವರ್ಷದ ನಮ್ಮ ಜನತಾ, ಜನತಾದಳದ ಆಡಳಿತ ವೈಖರಿ ಬಹುತೇಕ 45 ವರ್ಷಗಳ ಕಾಂಗ್ರೆಸಿನವರು ನಡೆಸಿದ ಆಡಳಿತ ವೈಖರಿ ಇದರ ಪರಿಣಾಮ ತಾವು ಒಪ್ಪುತ್ತೀರಿ ತಾನೇ. ಸ್ವಂತತ್ರವಾಗಿ ನಮ್ಮ ಶಕ್ತಿ ಆಧಾರದ ಮೇಲೆ ನಾಲ್ಕು ರಾಜ್ಯದಲ್ಲಿ ಅಧಿಕಾರಕ್ಕೆ ಬಂದೆವು.

ಶ್ರೀ ಆರ್.ವಿ. ದೇಶಪಾಂಡೆ:– 77ರಲ್ಲಿ ನೀವು ಸಹ ಅಧಿಕಾರದಲ್ಲಿರಿ. ಕಾರ್ಯವೈಖರಿ ಅಂದರೆ ನಿಮ್ಮದೂ ಬರುತ್ತದಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:– 77ರಲ್ಲಿ ಯಾರು ಪ್ರಧಾನಿಯಾಗಬೇಕು ಎಂದು ಕಚ್ಚಾಡುವ ಪರಿಸ್ಥಿತಿ ಬಂದಾಗ, ಯಾರು ಮಂತ್ರಿಗಳಿರಬೇಕೆಂದು ಕಚ್ಚಾಡಬೇಕಾದರೆ, ಲಾಲ್‌ಕೃಷ್ಣ ಆದ್ವಾನಿಯವರು ನಮಗಿರುವ ನಮಗೆ ಇರತಕ್ಕ ನಾಲ್ಕು ಮಂತ್ರಿಸ್ಥಾನ ರಾಜೀನಾಮೆ ಕೊಡುತ್ತೇನೆ ಎಂದು ಹೇಳಿದರು. ಆದರೆ ಜನತೆಯ ಅಣತಿಯನ್ನು ಹಾಳು ಮಾಡಬೇಡಿ, ಎಂದು ವಿನಂತಿ ಮಾಡಿದರು.

ಶ್ರೀ ಹೆಚ್. ಏಕಾಂತಯ್ಯ:– ಅಧ್ಯಕ್ಷರೇ ಇದಕ್ಕೆ ಮಂಗಳ ಹಾಡುವುದು ಉತ್ತಮ. ಮಾನ್ಯ ಯಡಿಯೂರಪ್ಪನವರು ಏನು ಹೇಳ್ತಿದ್ದಾರೆ. ಅಥವಾ ಹಿರಿಯ ಸಚಿವರಾದ ರಂಗನಾಥ್‌ರವರೂ ನಮ್ಮ ಪಕ್ಷದವರೂ ಹೇಳುವುದರ ಹಿನ್ನಲೆಯನ್ನು ನಾವು ಅರ್ಥಮಾಡಿಕೊಳ್ಳಬೇಕು. ನಮ್ಮ ದೇಶದಲ್ಲಿರುವ ಚುನಾವಣಾ ಪದ್ಧತಿ, ಪಾರ್ಲಿಮೆಂಟರಿ ಪ್ರಜಾಸತ್ತೆಯನ್ನು ಹಿಡಿದುಕೊಂಡಿರುವ ಜನ ಬೇರೆ ಇದ್ದಾರೆ. ನಾವೆಷ್ಟೇ ಇಲ್ಲಿ ಸೈದ್ಧಾಂತಿಕವಾಗಿ ಮಾತನಾಡಿದರೂ ಸಹ ನಮ್ಮ ದೇಶದ ಮತ್ತು ಅಂತರರಾಷ್ಟ್ರೀಯ ಬಂಡವಾಳಶಾಹಿಗಳು ನಮ್ಮ ದೇಶವನ್ನಾಳುವ ಸ್ಥಿತಿಯಲ್ಲಿದ್ದಾರೆ. ನಮ್ಮ ಚುನಾವಣೆ ಪದ್ಧತಿ ಸುಧಾರಣೆಯಾಗದೆ ಬಂಡವಾಳಶಾಹಿ ಗುತ್ತಿಗೆಯಿಂದ ಹೊರಬರಲು ಸಾಧ್ಯವಿಲ್ಲ. ಎಲ್ಲಿಯವರೆಗೆ ಬಂಡವಾಳಶಾಹಿಗಳ ಆಪೇಕ್ಷೆಯಂತೆ ನಾವು ಆಡಳಿತ ನಡೆಸುತ್ತೇವೆ. ರಾಜ್ಯಸರ್ಕಾರ ಇರಬಹುದು, ರಾಷ್ಟ್ರಸರ್ಕಾರ ಇರಬಹುದು, ಆದರೆ ಯಾವ ಒಂದು ವರ್ಗ ರಾಷ್ಟ್ರದಲ್ಲಿ ಆಡಳಿತ ಮಾಡಲು ಪ್ರಯತ್ನ ಮಾಡುತ್ತಿದೆ ಮೊದಲಿಂದಲೂ ಅದು ಗುತ್ತಿಗೆ ತೆಗೆದುಕೊಂಡಿದೆ. ಅದರ ತಕ್ಕ ವಿರುದ್ಧವಾಗಿ ನಾವು ಮಾತನಾಡಿದಾಗ ಕಾರ್ಯಕ್ರಮ ಜಾರಿಗೊಳಿಸಲು ಪ್ರಯತ್ನಿಸಿದಾಗ ಅವರು ನಮ್ಮನ್ನು ಒಡೆಯಲಿಕ್ಕೆ ಪ್ರಯತ್ನ ಮಾಡಿದ್ದಾರೆ. ಅದು ಪಕ್ಷದ ಹೆಸರಲ್ಲಿರಬಹುದು ಜಾತಿ ಹೆಸರಲ್ಲಿರಬಹುದು, ಧರ್ಮದ ಹೆಸರಲ್ಲಿರಬಹುದು. ಮಾನ್ಯ ಯಡಿಯೂರಪ್ಪನವರು ಎಲ್ಲಿಯವರೆಗೆ ಇರಲು ಸಾಧ್ಯ ? ಎಲ್ಲಿಯವರೆಗೆ ಈ ಮೇಲ್ವರ್ಗದ ಜನಗಳ ಹಿಡಿತಕ್ಕೆ ಅವರು ಒಳಗಾಗಿದ್ದಾರೆ, ಬಂಡವಾಳಶಾಹಿಗಳ ಬೆಂಬಲ ಎಲ್ಲಿಯವರೆಗೆ ಅವರಿಗಿರುತ್ತದೆ. ಅಲ್ಲಿಯವರೆಗೆ ಅವರು ಸುರಕ್ಷಿತವಾಗಿರುತ್ತಾರೆ. ಆದರೆ ಯಾವಾಗ ಜನಪದವಾದ ಯೋಜನೆಗಳನ್ನು ಜಾರಿಗೆ ಕೊಡಲು ಪ್ರಯತ್ನ ಮಾಡಿದಾಗ ಅದು ಕಾಂಗ್ರೆಸ್ ಸರ್ಕಾರ ಇರಬಹುದು ಜನತಾದಳ ಸರ್ಕಾರ ಇರಬಹುದು. ಅದನ್ನು ಅಸ್ಥಿರಗೊಳಿಸಿದ ಪರಿಸ್ಥಿತಿ ನಮ್ಮ ರಾಷ್ಟ್ರದಲ್ಲಿ ಯಾವತ್ತೂ ಇದೆ, ಇವತ್ತೂ ಇದೆ. ನಮ್ಮಲ್ಲಿರುವ ಪ್ರಭಾವಿ ವಲಯದ ವಿರುದ್ಧ ನಾವು ಮಾತನಾಡಲು ಹೋದರೆ ಅವರೆಲ್ಲ ಒಂದಾಗಿ ಎಲ್ಲಾ ಸರ್ಕಾರಗಳನ್ನು ತೆಗೆಯುವ ಶಕ್ತಿ ಅವರಿಗೆ ಇದೆ. ನಮ್ಮ ಯಡಿಯೂರಪ್ಪನವರು ಆದ್ದರಿಂದ ಮೇಲ್ವರ್ಗದ ಪರವಾಗಿರುವವರೆಗೆ ಮಾತ್ರ ಅವರಿಗೆ ರಕ್ಷಣೆ ಇರುತ್ತದೆ, ಜನಪರವಾದ ಕಾರ್ಯಕ್ರಮ ಜಾರಿ ಮಾಡಲು ಇರಲಿಕ್ಕೆ ಸಾಧ್ಯವಿಲ್ಲ. ನಾವೆಲ್ಲ ಎಷ್ಟೇ ಸೈದ್ಧಾಂತಿಕವಾಗಿ ಮಾತನಾಡಿದರೂ ನಮ್ಮ ರಾಷ್ಟ್ರದ ಚುನಾವಣೆ ಮತ್ತು ಆಡಳಿತ ಪದ್ಧತಿ ಏನಿದೆ ಅಲ್ಲಿಯವರೆಗೆ ನಾವೆಲ್ಲ ಅವರ ಗುಲಾಮರಂತೆ ಇಲ್ಲಿ ಕೆಲಸ ಮಾಡುತ್ತಿದ್ದೇವೆಂದರೆ ತಪ್ಪಾಗುವುದಿಲ್ಲ.

ಪ್ರೊ..ಎಂ.ಡಿ. ನಂಜುಂಡಸ್ವಾಮಿ:– ಏಕಾಂತಯ್ಯನವರು ಈ ವಿಷಯಕ್ಕೆ ಮಂಗಳ ಹಾಡಬೇಕೆಂದರು. ಹಾಗಾದರೆ ಒಂದು ಮಾತು ಹೇಳ್ತೇನೆ. ಮುಂದೆ ಏನಾಗಬಹುದೆಂಬ ಬಗ್ಗೆ ಭ್ರಮೆಗಳಿರಬಹುದು ಎಂದು ರಂಗನಾಥ್ ಹೇಳುತ್ತಿದ್ದರು. ಇವರಿಗೇನಾದರೂ ಅವಕಾಶ ಇದ್ದರೆ ಸ್ವಲ್ಪ ಉತ್ತರ ಭಾರತದಲ್ಲಿ ಇರಬಹುದು ಏಕೆಂದರೆ ಪರಸ್ಪರ ಭೇಟಿ ಮಾಡಿದಾಗ ರಾಮರಾಮ ಅನ್ನುತ್ತಾರೆ. ಆದರೆ ನಾವೆಲ್ಲ ಶಿವ ಶಿವ ಅನ್ನುತ್ತೇವೆ ಇದನ್ನು ತಿಳಿದುಕೊಳ್ಳಬೇಕು. ಇದನ್ನು ನಾನು ತಮಾಷೆಗ ಹೇಳ್ತಿಲ್ಲ, ಆ ಭ್ರಮೆ ಹೋಗಿಬಿಡಲಿ ಎಂದು ಸ್ವಲ್ಪ ಅವಕಾಶ ಇದ್ದರೆ ಆ ರಾಮ ಬೆಲ್ಟಲ್ಲಿ ನಾವಿರುವುದು ಶಿವ ಬೆಲ್ಟಲ್ಲಿ, ಬಿಜೆಪಿಗೆ ಕೊನೆಗೆ ಸಿಕ್ಕೋದು ಶಿವ ಶಿವಾನೇ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಾಲ್ಕೈದು ವರ್ಷದ ಹಿಂದಿನ ರಾಜಕೀಯ ಪರಿಸ್ಥಿತಿ ನೋಡಿದಾಗ ದೇಶದ ಸ್ಥಿತಿ ಹೇಗಿತ್ತು?

ಚುನಾವಣೆಗಳು ಬಂದಾಗ ಕಾಂಗ್ರೆಸ್‌ನ ವಿರುದ್ಧ ನಿಮ್ಮನ್ನು ಸೋಲಿಸುವುದಕ್ಕೆ ಎಲ್ಲಾ ರಾಜಕೀಯ ಪಕ್ಷದವರು ಒಂದಾಗಿ ಹೋರಾಟ ಮಾಡುವಂಥ ಪರಿಸ್ಥಿತಿ ಇತ್ತು. ಆದರೆ ಈ ದೇಶಕ್ಕೆ ಸ್ವಾತಂತ್ರ್ಯ ಗಳಿಸಿಕೊಟ್ಟೆವು ಎಂದು ಹೇಳಿ.....

ಶ್ರೀ ಕೆ.ಹೆಚ್. ರಂಗನಾಥ್:– ಅದು 57ರಲ್ಲಿ ನಡೆದಿದೆ. 67ರಲ್ಲಿ ನಡೆದಿದೆ. 77ರಲ್ಲಿ ನಡೆದಿದೆ, 89ರಲ್ಲಿ ನಡೆಯಿತು. ಕಾಂಗ್ರೆಸ್ ವಿರುದ್ಧ ಎಲ್ಲಾ ಪಕ್ಷದವರು ಸೇರಿ 67ರಲ್ಲಿ ಚುನಾವಣೆ ನಡೆದಾಗ ಕೇಂದ್ರದಲ್ಲಿ ಹತ್ತಿರ ಹತ್ತಿರ ಬಂದರು. 32 ಓಟಿನಿಂದ ಮಾತ್ರ ಕೇಂದ್ರಸರ್ಕಾರದಲ್ಲಿ ಅಧಿಕಾರವನ್ನು ಕಾಂಗ್ರೆಸ್ ಪಕ್ಷ ಉಳಿಸಿಕೊಂಡಿತು. ಆದ್ದರಿಂದ ಇದು ನಿನ್ನೆ ಮೊನ್ನೆಯದಲ್ಲ. ಇದು ನಡೆದಿದೆ. ಮಾನ್ಯ ಏಕಾಂತಯ್ಯನವರು ಚೆನ್ನಾಗಿ ಹೇಳಿದರು, ತಮ್ಮ ಬೇಸ್ ಯಾವುದು ಸ್ವಾಮಿ? ಬಂಡವಾಳಶಾಹಿಗಳು ಏಸು ಇದ್ದಾರೆ, ಅವರನ್ನು ಬಿಟ್ಟು ನೀವು ದೂರ ಇದ್ದೀರೋ? ನಿಮ್ಮ ಆರ್ಥಿಕ ಸ್ಪಷ್ಟ ನೀತಿ ಏನು? ರೈತರ ಬಗ್ಗೆ ನೀತಿ ಏನು? ಕಾರ್ಮಿಕರ ಬಗ್ಗೆ ನಿಮ್ಮ ನೀತಿಯೇನು?

ಶ್ರೀ ಬಿ.ಹೆಚ್. ಬನ್ನಿಕೋಡ್:– ಅವರದು ಮಾರ್ವಾಡಿ ನೀತಿ. ಅದಕ್ಕಾಗಿ ಈ ಮಾತನಾಡುತ್ತಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಾನು ಏತಕ್ಕೋಸ್ಕರ ಇಲ್ಲಿರುವ ಬನ್ನಿಕೋಡ್‌ರವರು ನಮ್ಮ ರೈತ ಸಂಘದ ಮುಖಂಡರು ಮಾತನಾಡಬೇಕು, ಅದು ರೆಕಾರ್ಡ್‌ನಲ್ಲಿ ಬರಬೇಕು ಎಂದು ಹೇಳಿ ಸುಮ್ಮನೆ ಇದ್ದೇನೆ ಎಂದು ಹೇಳಿದರೆ ದಯಮಾಡಿ ಸ್ವಲ್ಪ ಶಾಂತವಾಗಿ ನಿಮ್ಮ ಪರಿಸ್ಥಿತಿಯ ಬಗ್ಗೆ ಯೋಚನೆ ಮಾಡಿ ಎರಡೂ ಕಡೆ ಇರತಕ್ಕಂಥವರು. ಈ ದೇಶದಲ್ಲಿ ಬಹುತೇಕ 45ವರ್ಷಗಳ ಅಧಿಕಾರ ಮಾಡಿದಂಥ ಕಾಂಗ್ರೆಸ್ ಪಕ್ಷದ ವಿರುದ್ಧ ನಾವೆಲ್ಲಾ ರಾಜಕೀಯ ಪಕ್ಷಗಳು ಒಂದಾಗಿ ಹೋರಾಟ ಮಾಡುವಂಥಾದ್ದು ಒಂದು ಕಾಲ ಇತ್ತು. ನಮ್ಮ ವಿರುದ್ಧ ಅನೇಕ ಟೀಕೆ ಟಿಪ್ಪಣಿಗಳನ್ನು ಮಾಡಿದಿರಿ. ನಿಮ್ಮ ಆರ್ಥಿಕ ನೀತಿಯೇನು? ಕೃಷಿಕರ ಬಗ್ಗೆ ನಿಮ್ಮ ನೀತಿಯೇನು? ನಿಮಗೆ ತಿಳಿಸುವ ಅಗತ್ಯ ಇಲ್ಲ. ಆದರೆ ಒಂದು ಮಾತು ಹೇಳುತ್ತೇನೆ. ಇವತ್ತು ನಿಮ್ಮ ಪರಿಸ್ಥಿತಿ ಏನು?

ಶ್ರೀ ಕೆ.ಹೆಚ್. ರಂಗನಾಥ್:– ಇದರ ಜೊತೆಗೆ ಸಮಾಜವಾದ ಪಕ್ಷ ಕಮ್ಯುನಿಸ್ಟ್ ಪಕ್ಷದಲ್ಲಿ ಇದ್ದಂಥವರು, ಕೆಲಸ ಮಾಡಿದಂಥವರೇ. ಈ ರಾಷ್ಟ್ರದ ಸ್ವಾತಂತ್ರ್ಯಕ್ಕೆ ತಮ್ಮ ಕೊಡುಗೆ ಏನು? 1948ರಲ್ಲಿ ಕಾಂಗ್ರೆಸ್‌ನಲ್ಲಿದ್ದಂಥ ಕಾಂಗ್ರೆಸ್ ಸೋಷಿಯಲಿಸ್ಟ್ ಪಕ್ಷ ಹರಿದುಹೋಯಿತು. ಪ್ರಜಾಪ್ರಭುತ್ವ ಬೇಕು ಎನ್ನುವ ಸಿದ್ಧಾಂತದ ಮೇಲೆ ಅದು ಹೊರಗೆ ಹೋಯಿತು. ಪಕ್ಷ ಕಟ್ಟಿದರು. ತದನಂತರ ರಾಜಕೀಯ ಬದಲಾವಣೆಗಳು ಏನೇನೋ ಆಗಿದೆ. ತಮ್ಮ ಕೊಡುಗೆ ಏನು ಈ ರಾಷ್ಟ್ರದ ಸ್ವಾತಂತ್ರ್ಯಕ್ಕೆ ರಾಷ್ಟ್ರದ ಸ್ವಾತಂತ್ರ್ಯಕ್ಕೆ ತಮ್ಮ ಕೊಡುಗೆ ಇಲ್ಲದೇ ಇರುವಾಗ ಇನ್ನು ಆರ್ಥಿಕ ನೀತಿಗೆ ತಮ್ಮ ಕೊಡುಗೆ ಎಲ್ಲಿಂದ ಇರುತ್ತದೆ?

ಶ್ರೀ ಬಿ.ಹೆಚ್. ಬನ್ನಿಕೋಡ್:– ಮಹಾತ್ಮ ಗಾಂಧೀಜಿಗೆ ಗುಂಡಿಟ್ಟಂಥ ಜನರು ಅವರು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:– ಇಂಥ ಹುಚ್ಚು ಜನರಿಗೆ ಏನು ಹೇಳುತ್ತೀರಿ? ಇದು ಹುಚ್ಚುತನದ ಪರಮಾವಧಿ. ನೀವು ಒಂದು ಭ್ರಮೆಯಲ್ಲಿ ಇದ್ದೀರಿ.

(ಗೊಂದಲ)

ಶ್ರೀ ಎ.ಕೆ. ಅನಂತಕೃಷ್ಣ:– ಚರಿತ್ರೆಯಲ್ಲಿ ಭ್ರಮೆ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಏನು ಭ್ರಮೆಯಲ್ಲಿ ಇದ್ದೀರಿ, ಸ್ವಾತಂತ್ರ್ಯಪೂರ್ವದಲ್ಲಿ ಈ ದೇಶಕ್ಕೆ ಸ್ವಾತಂತ್ರ್ಯಕ್ಕೆ ಬೇಕು ಎಂದು ಹೋರಾಟ ಮಾಡಿದಂಥ ಕಾಂಗ್ರೆಸ್ ಅದೊಂದು ರಾಜಕೀಯ ಪಕ್ಷ ಅಲ್ಲ. ಈ ದೇಶಕ್ಕೆ ಸ್ವಾತಂತ್ರ್ಯ ಬೇಕು ಎಂದು ಹೇಳಿ ಎಲ್ಲಾ ಸ್ವಾತಂತ್ರ್ಯ ಸಂಗ್ರಾಮಿಗಳನ್ನು ಕಟ್ಟಿಕೊಂಡು ಹೋರಾಟ ಮಾಡಿದಂಥ ಮಹಾನ್ ಸಂಸ್ಥೆ ಅದು. ಈ ದೇಶಕ್ಕೆ ಸ್ವಾತಂತ್ರ್ಯ ಬಂದ ತಕ್ಷಣ ಮಹಾತ್ಮ ಗಾಂಧಿಯವರು ಒಂದು ಕಿವಿ ಮಾತನ್ನು ಹೇಳಿದರು. ಈ ದೇಶಕ್ಕೆ ಸ್ವಾತಂತ್ರ್ಯಗಳಿಸಿಕೊಟ್ಟವರು ನಾವು ಎಂದು ಹೇಳಿ ದೇಶದ ಜನತೆಗೆ ಎಲ್ಲಿ ಅನ್ಯಾಯ ಮಾಡುತ್ತೀರೋ ಎಂದು ಹೇಳಿ ಕಾಂಗ್ರೆಸನ್ನು ವಿಸರ್ಜನೆ ಮಾಡಿ ನಿಮಗೆ ಬೇಕಾದಂಥ ರಾಜಕೀಯ ಪಕ್ಷ ಕಟ್ಟಿಕೊಳ್ಳಿ ಎಂದು ಅವತ್ತು ಮಹಾತ್ಮ ಗಾಂಧೀಜಿಯವರು ಹೇಳಿದರು. ಇವತ್ತು ನಾನು ನಿಮ್ಮನ್ನು ಕೇಳುತ್ತಾನೆ, 45 ವರ್ಷ ಯಾವುದೋ ಒಂದು ಪುಣ್ಯ ನಾವು ಈ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟೆವು ಎಂದು ಅದರ ಹೆಸರನ್ನು ಹೇಳಿಕೊಂಡು 45 ವರ್ಷಗಳಲ್ಲಿ ನಮ್ಮ ಸಾಧನೆ ಬೇಡವೆ ? ಬಿಜೆಪಿ ಬೇಡ. ನಿಮ್ಮನ್ನು ಕೇಳುತ್ತೇನೆ, 45 ವರ್ಷದಲ್ಲಿ ನಿಮ್ಮ ಸಾಧನೆಯೇನು, ಗ್ರಾಮೀಣ ಜನ ಬಗ್ಗೆ, ಬಡವರ ಬಗ್ಗೆ ಕೂಲಿ ಕಾರ್ಮಿಕರ ಬಗ್ಗೆ ನಿಮ್ಮ ಸಾಧನೆಯೇನು ? ಇದರ ಬಗ್ಗೆ ತಾವು ಹೇಳಬೇಕಾಗುತ್ತದೆ.

ದಯಮಾಡಿ, ರಾಮಸ್ವಾಮಿಯಂಥ ಹಿರಿಯರು, ನಿಮ್ಮಂಥ ಹಿರಿಯರು ಯೋಜನೆ ಮಾಡುವಂಥ ಕಾಲ. 45 ವರ್ಷಗಳ ಕಾಂಗ್ರೆಸ್‌ನ ತಪ್ಪು ನೀತಿಯಿಂದ ಈ ದೇಶದ ಪ್ರಧಾನಿ ಲೋಕಸಭೆಯಲ್ಲಿ ನಿಂತುಕೊಂಡು ಅಧಿಕಾರ ಉಳಿಸಿಕೊಳ್ಳುವುದಕ್ಕೋಸ್ಕರ ಇತರ ಎಲ್ಲಾ ರಾಜಕೀಯ ಪಕ್ಷಗಳ ಸಹಕಾರ ಕೇಳುವಂಥ ದುಃಸ್ಥಿತಿ ಬಂದಿದೆ, ಇವತ್ತು ಕೇಂದ್ರದಲ್ಲಿ ನಿಮ್ಮದು ಬಹುಮತ ಇಲ್ಲ. ಬಿ.ಜೆ.ಪಿ. ಯಾವ ಸ್ಥಾನದಲ್ಲಿದೆ. ಭಾರತೀಯ ಜನತಾ ಪಾರ್ಟಿ ವಿರುದ್ಧ, ಇದೇ ದೇಶದಲ್ಲಿ ಕಾಂಗ್ರೆಸ್ ಸೇರಿ, ಜನತಾ, ಜನತಾದಳ, ಕಮ್ಯುನಿಸ್ಟರು ಎಲ್ಲರೂ ಸೇರಿ, ಬಿ.ಜೆ.ಪಿ.ಯನ್ನು ಎದುರಿಸುವಂಥ ಒಂದು ದುಃಸ್ಥಿತಿಗೆ ಬಂದಿದ್ದೀರಿ ಅಂದರೆ ಬಿ.ಜೆ.ಪಿ. ಎಲ್ಲಿಗೆ ಬೆಳೆದಿದೆ. ನೀವು ಎಲ್ಲಿಗೆ ಇಳಿದಿದ್ದೀರಿ ನಿಮಗೆ ನಿಮ್ಮ ಆತ್ಮಸಾಕ್ಷಿಗೆ ಪ್ರಶ್ನೆಯನ್ನು ಕೇಳಕೊಳ್ಳಬೇಕಾಗುತ್ತದೆ.

ಶ್ರೀ ಕೆ.ಹೆಚ್. ರಂಗನಾಥ್:– ರಾಮರಾಜ್ಯ ಪರಿಷತ್ತು, ತದನಂತರ ಜನಸಂಘ ಅವರ ಜೊತೆಗೆ ಸೇರಿದ ಮೇಲೆ ಜನತಾಪಾರ್ಟಿ ಬೇರೆಯಾದ ಮೇಲೆ ಬಿ.ಜೆ.ಪಿ. ಎಲ್ಲಿತ್ತು ಬಿ.ಜೆ.ಪಿ. ?

ಶ್ರೀ ಬಿ.ಎಸ್. ಯಡಿಯೂರಪ್ಪ:– ನಾನು ಇತ್ತು ಎಂದು ಹೇಳುತ್ತಿಲ್ಲ. ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆಂದರೆ.

ಶ್ರೀ ಕೆ.ಹೆಚ್. ರಂಗನಾಥ್:– ನೀವು ಹಿಂದೆ ಮಹಾಸಭೆಯಲ್ಲಿ ಇದ್ದವರು, ರಾಮರಾಜ್ಯ ಪರಿಷತ್ತಿನಲ್ಲಿದ್ದಂಥವರು ತದನಂತರ ಜನಸಂಖ್ಯೆವಾದ್ದಂತಹವರು, 71ರಲ್ಲಿ ಅಲ್ಲಿಗೆ ಕರೆದುಕೊಂಡು ಹೋದರು. 1977ರಲ್ಲಿ ಜನತಾ ಪಾರ್ಟಿಯಾದಿರಿ. ಭಾಗ ಆದಮೇಲೆ ಬಿ.ಜೆ.ಪಿ. ಆದಿರಿ, ಬಿ.ಜೆ.ಪಿ.ಯ ಕೊಡುಗೆ ಏನಿದೆ. ಬಿ.ಜೆ.ಪಿ. ಯಾವ ಸಿದ್ಧಾಂತದ ಮೇಲೆ ಪ್ರಾರಂಭವಾಗಿದೆ, ಆಗಿಲ್ಲ. ಇದಕ್ಕೆ ಹಿಸ್ಟಾರಿಕಲ್ ಫ್ಯಾಕಟ್ಸ್ ಏತಕ್ಕೆ ?

ಶ್ರೀ ಬಿ.ಎಸ್. ಯಡಿಯೂರಪ್ಪ:– ನಾನು ಕಾಂಗ್ರೆಸ್ಸಿನ ಚರಿತ್ರೆಯ ಬಗ್ಗೆ....

ಶ್ರೀ ಎ.ಕೆ. ಅನಂತಕೃಷ್ಣ:– ರಾಮಾಯಣ ಇದೆ ಎಲ್ಲಾ ಇದೆ. ಎಲ್ಲಾ ಅಂದರೆ ಹೇಗಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಇದನ್ನು ತೀರ್ಮಾನ ಮಾಡುವವರು ಯಾರು ? ಇವತ್ತು ಈ ದೇಶದ ರಾಜಕೀಯ ಪರಿಸ್ಥಿತಿಯ ಬಗ್ಗೆ ಜನ ಏನು ಹೇಳುತ್ತಿದ್ದಾರೆ. ಅದು ಮುಖ್ಯ. ನೀವು ಇದನ್ನು ಮರೆಯಬೇಡಿ. ನೀವು ಹೇಳಿದ್ದುದು ಸರಿ ಇದೆ. ಬಿ.ಜೆ.ಪಿ. ಇರಲಿಲ್ಲ. ಜನಸಂಘ ಇರಲಿಲ್ಲ. ನಿಮ್ಮ ಪರಿಸ್ಥಿತಿಯ ಬಗ್ಗೆ ಎರಡು ವಿಷಯಗಳನ್ನು ನಿಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಮೊದಲನೆಯದು ಇಷ್ಟು ವರ್ಷ ಅಧಿಕಾರವನ್ನು ನಡೆಸಿದಂಥ ಕಾಂಗ್ರೆಸ್ ಪಕ್ಷ ಅಧಿಕಾರದ ಮುಂಚೂಣಿಯಲ್ಲಿದ್ದಂತಹ ಜನತಾದಳ, ಕಮ್ಯೂನಿಸ್ಟ್ ಇವರೆಲ್ಲಾ ಒಂದಾಗಿ ಬಿ.ಜೆ.ಪಿ. ಯನ್ನು ಎದುರಿಸುವಂತಹ ಒಂದು ಪರಿಸ್ಥಿತಿಗೆ ನೀವು ಒಂದು ಮುಟ್ಟಿದ್ದೀರಿ. ಎರಡನೆಯದಾಗಿ ಇವತ್ತು ಲೋಸಭೆಯಲ್ಲಿ ಏನು ಸ್ಥಿತಿ, ಯಾವ ಜನಸಂಘ ಯಾವ ಬಿ.ಜೆ.ಪಿ. ಎಲ್ಲಿಗೆ ಎಂದು ಪ್ರಶ್ನೆಯನ್ನು ಕೇಳುತ್ತಿದ್ದೀರಿ, ನನ್ನನ್ನು ಕೇಳಬೇಡಿ. ಲೋಕಸಭೆಗೆ ಹೋಗಿ, ಅಧಿಕೃತ ವಿರೋಧ ಪಕ್ಷ ಲೋಕಸಭೆಯಲ್ಲಿ ಭಾರತೀಯ ಜನತಾ ಪಾರ್ಟಿ, ಲಾಲ್ ಕೃಷ್ಣ ಅದ್ವಾನಿ ಅದರ ನಾಯಕ. ರಾಜ್ಯಸಭೆಯಲ್ಲಿ ಅಧಿಕೃತ ವಿರೋಧ ಪಕ್ಷ ಭಾರತೀಯ ಜನತಾಪಾರ್ಟಿಯ ಸಿಖಂದರ್ ಭಕ್ತ ಅಧರ ನಾಯಕ. ಎಲ್ಲಿದ್ದಾರೆ ನಮ್ಮ ಸ್ನೇಹಿತರು. ಜನತಾ ಆಯಿತು, ಜನತಾದಳ ಆಯಿತು, ವಿ.ಪಿ. ಸಿಂಗ್ ಆಯಿತು. ಚಂದ್ರಶೇಖರ್ ಆಯಿತು. ಇವರ ಬಗ್ಗೆ ಟೀಕೆ ಮಾಡುತ್ತಿಲ್ಲ. ಇದೇ ಅನಾಹುತ ದೇಶದಲ್ಲಿ ಆಯಿತು. ನಮ್ಮ ದೇಶದ ಅಚಾತುರ್ಯದಿಂದ ನಾಯಕತ್ವದ ಕಚ್ಚಾಟಕ್ಕೋಸ್ಕರ ವಿರೋಧ ಪಕ್ಷಗಳ ಬಗ್ಗೆ ಇದ್ದಂಥ ನಂಬಿಕೆಯನ್ನು ಹಾಳು ಮಾಡುವಂತಹ ಪರಿಸ್ಥಿತಿಗೆ ತಂದುಬಿಟ್ಟರು. ಇದರ ಪರಿಣಾಮದಿಂದ ಇವತ್ತು ನಿಮ್ಮ ಸಹವಾಸವಾನ್ನು ನಾವು ಕಳೆದುಕೊಳ್ಳಬೇಕಾಯಿತು.

ಶ್ರೀ ಆರ್.ಎಲ್ ಜಾಲಪ್ಪ:– ನೀವು ಮಾಡಿದ ನಂಬಿಕೆ ದ್ರೋಹದಿಂದ ಹಾಗಾಯಿತೆ ವಿನಹ ನಾವು ಫೇಲ್ ಆಗಿಲ್ಲ. ಇವತ್ತು ಏನಾದರೂ credibility ಇದ್ದರೆ ನಮಗೆ ಇದೆ. ನಮದ್ದೇನೂ ಇಲ್ಲ. ಏನಾದರೂ ಹೇಳುವುದಿದ್ದರೆ ಹೇಳಿ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್:– ಮಾನ್ಯ ಯಡಿಯೂರಪ್ಪನವರು ಗೌರ್ನರ್ ಭಾಷಣಕ್ಕೆ ಯಾವಾಗ ಬರುತ್ತಾರೆ. ದೇಶದ ಇತಿಹಾಸದ ಬಗ್ಗೆ ಮಾತನಾಡುತ್ತಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ:– ಪದೇ ಪದೇ ಅವರು ನಮ್ಮ ಬೆಂಬಲದಿಂದ, ನಮ್ಮ ಬೆಂಬಲದಿಂದ, ನಮ್ಮ ಬೆಂಬಲದಿಂದ ಎಂದು ಹೇಳುತ್ತಾರೆ. I want to put the records straight. ನಾನು ಲೋಕಸಭೆಯ ಚುನಾವಣೆಯನ್ನು ಎದುರಿಸಿದ್ದುದು ಎಂದಿನ ಮಾನ್ಯ ಹಿರಿಯ ಸದಸ್ಯರು ರೆಫರ್ ಮಾಡಿದಂತಹ ಜನ ಸಂಘವನ್ನು ಕಳೆದ ಮೂರು ವಿಧಾನಸಭಾ ಚುನಾವಣೆಗಳಲ್ಲಿ ನಾನೆಂದು ಇವರ ಜೊತೆಯಲ್ಲಿ ಕಾಂಪರ್‌ಮೈಸ್ ಮಾಡಿಕೊಂಡಿಲ್ಲ. ನಾನು ಬಿ.ಜೆ.ಪಿ. ವಿರುದ್ಧ ಕಾಂಗ್ರೆಸ್ ವಿರುದ್ಧ ಫೈಟ್ ಮಾಡಿಕೊಂಡು ಬಂದಿದ್ದೇನೆ. ಇವರಿಗೆ ನನ್ನದು ಎಂದೂ ಸಹಾಯ ಇಲ್ಲ ನಾನು ಮುಂದೆಯೂ ಸಹಾಯವನ್ನು ಕೇಳುವುದಿಲ್ಲ. Let it not go into the record.

ಜನರಲ್ ಆಗಿ ಬೇಕಾದರೆ ಹೇಳಲಿ, ಯಾರಾದರೂ ಕಾಂಪರ್ ಮೈಸ್ ಮಾಡಿ ಕೊಂಡಿರಬಹುದು. ನಮ್ಮ ಪಾರ್ಟಿ ಹೊಂದಾಣಿಕೆ ಮಾಡಿಕೊಂಡಿತ್ತು. 1992ರಲ್ಲಿ ಚುನಾವಣೆಯಲ್ಲಿ 1985, 1989 ಎಂದು ಏನು ಹೇಳಿದ್ದಾರೆ. ಅದು ನನ್ನ ಕ್ಷೇತ್ರದಲ್ಲಿ. ಹೊಂದಾಣಿಕೆ ಆಗಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನೀವು ನಮ್ಮ ಜೊತೆಗೆ ಬನ್ನಿ ಎಂದು ಕರೆಯುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್:– ನನ್ನದೊಂದು ಸಲಹೆ ಈ ಸದನದಲ್ಲಿ ಪಕ್ಷಗಳ ಪ್ರಣಾಳಿಕೆಗಳ ಬಗ್ಗೆ, ಯಾವ್ಯಾವ ಪಕ್ಷಗಳ ಸಿದ್ಧಾಂತಗಳ ಬಗ್ಗೆ ಚರ್ಚೆ ಮಾಡೋಣ. ಅವರ ಮಾತನಾಡಲಿ ಅವರಿಗೆ ಅವಕಾಶ ಕೊಡೋಣ.

ಚೇರ್ಮನ್:– ಈಗ ಪ್ರಶ್ನೆ ಉತ್ತರ ಬೇಡ. ನಿಮ್ಮ ಭಾಷಣವ ಮುಂದುವರೆಸಿ ಪ್ರಾರಂಭ ಮಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಇವತ್ತು ನಮ್ಮ ಪರಿಸ್ಥಿತಿಯನ್ನು ನೀವು ಯೋಚನೆ ಮಾಡುತ್ತಿಲ್ಲ. ನಿಮ್ಮ ತಪ್ಪು ನೀತಿಯಿಂದ ಜನರಿಗೆ ಕೊಟ್ಟಂತಹ ಭರವಸೆಯನ್ನು ಈಡೇರಿಸದ ಪರಿಣಾಮ.

ಶ್ರೀ ಎ.ಕೆ. ಅನಂತಕೃಷ್ಣ:– ಅವರು ಮಾತನಾಡುವಾಗ ಮಧ್ಯೆ ಮಾತನಾಡಬೇಡಿ.

ಚೇರ್ಮನ್:– ಅವರು ಈಲ್ಡ್ ಆಗಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಇವತ್ತು ನಾನು ನಿಮ್ಮನ್ನು ಕೇಳುತ್ತೇನೆ. ಯಾವ ಮಧ್ಯಪ್ರದೇಶ ಹಿಮಾಚಲ ಪ್ರದೇಶ, ರಾಜಸ್ಥಾನ, ಉತ್ತರಪ್ರದೇಶ ಈ ಮೂರು ದೊಡ್ಡ ರಾಜ್ಯಗಳಲ್ಲಿ ಕಾಂಗ್ರೆಸ್ ನಿರ್ನಾಮ ಆಗಿ ಅಧಿಕಾರವನ್ನು ಕಳೆದುಕೊಂಡು ಭಾರತೀಯ ಜನತಾ ಪಾರ್ಟಿ ನಾಲ್ಕು ರಾಜ್ಯದಲ್ಲಿ ಅಧಿಕಾರಕ್ಕೆ ಬರುವುದಕ್ಕೆ ನೀವು ಹಿಂದೆ ಅಧಿಕಾರದಲ್ಲಿ ನಡೆಸಿಕೊಂಡು ಬಂದಂಥ ತಪ್ಪು ನೀತಿಯ ಕಾರಣ.

ಭಾರತೀಯ ಜನತಾ ಪಕ್ಷವು ಅಧಿಕಾರಕ್ಕೆ ಬಂದಿದ್ದಂಥ ನಾಲ್ಕು ರಾಜ್ಯಗಳನ್ನು ಇವೊತ್ತು ಯಾವುದೋ ಒಂದು ಕಾರಣಕ್ಕೋಸ್ಕರ ವಜಾ ಮಾಡಿದಿರಿ. ನಾವು ಅದರ ಬಗ್ಗೆ ಚಿಂತೆ ಮಾಡುವುದಿಲ್ಲ. ಆದರೆ, ಜನರು ಆಯ್ಕೆ ಮಾಡಿ ಕಳುಹಿಸಿದಂಥ ಮಧ್ಯಪ್ರದೇಶ, ರಾಜಸ್ಥಾನ, ಹಿಮಾಚಲ ಪ್ರದೇಶ ಮತ್ತು ಉತ್ತರ ಪ್ರದೇಶದಲ್ಲಿದ್ದಂಥ ಭಾರತೀಯ ಜನತಾ ಪಕ್ಷದ ಸರ್ಕಾರವನ್ನು ಎದುರಿಸಲಿಕ್ಕಾಗದೆ ಐದು ವರ್ಷಗಳ ಕಾಲ ಪೂರ್ಣ ಅಧಿಕಾರವಿದ್ದ ಕಾಂಗ್ರೆಸ್ ಪಕ್ಷ ನಿರ್ನಾಮವಾಗುತ್ತದೆನ್ನುವ ಒಂದೇ ಒಂದು ಕಾರಣಕ್ಕೋಸ್ಕರ ಪ್ರಜಾತಂತ್ರ ವ್ಯವಸ್ಥೆಯನ್ನು ಕಗ್ಗೊಲೆ ಮಾಡಿ ಮೂರು ರಾಜ್ಯಗಳಲ್ಲಿದ್ದ ಚುನಾಯಿತ ಬಿಜೆಪಿ ಸರ್ಕಾರವನ್ನು ವಜಾ ಮಾಡಿದವರು ನೀವೇ ತಾನೆ ?

ಚೇರ್ಮನ್:– ನೀವು ಹೀಗೆ ಪ್ರಶ್ನೆ ಹಾಕಿಕೊಂಡು ಹೋಗಬೇಡಿ. ಹೀಗೆ ಪ್ರಶ್ನೆ ಹಾಕಿದರೆ ಅವರು ಉತ್ತರ ಕೊಡಬೇಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಇವೊತ್ತು ರಾಜಕೀಯ ವಿಚಾರದಲ್ಲಿ ಯಾವುದೇ ಚರ್ಚೆ ಮಾಡಬೇಕಾದರೆ ಬಿಜೆಪಿ ಬಿಟ್ಟು ಚರ್ಚೆ ಮಾಡುವುದಕ್ಕೆ ಸಾಧ್ಯವಿಲ್ಲ. ಈಗ ನಾವು ಪೊಲಿಟಿಕಲ್ ಅಜೆಂಡಾವನ್ನು ತರುವುದಕ್ಕೆ ಹೊರಟಿದ್ದೇವೆ. ನಿಮ್ಮ ಪರಿಸ್ಥಿತಿ ಬೇರೆ ಎಲ್ಲಿದೆ ? ಒಂದು ಸಂಗತಿಯನ್ನು ತಾವು ಮರೆಯಬೇಡಿ. ಇಂಡಿಯಾ ಟುಡೆ ತೆಗೆದು ನೋಡಿ, ದಿ ವೀಕ್ ತೆಗೆದು ನೋಡಿ, ದಿ ಹಿಂದೂ ಪತ್ರಿಕೆ ತೆಗೆದು ನೋಡಿ. ಅದರಲ್ಲಿ ಇಡೀ ದೇಶದಲ್ಲಿರುವ ಜನರನ್ನು ಸಮೀಕ್ಷೆ ಮಾಡಿದ್ದಾರೆ. ಪತ್ರಿಕೆಗಳ ವರದಿಗಳು ಏನು ಹೇಳುತ್ತವೆ ? ನಿಮಗೆ ಕುಂತಲ್ಲಿ, ನಿಂತಲ್ಲಿ ಬಿಜೆಪಿ ಬಗ್ಗೆ ಭಯ ಏಕೆ ? ಇವೊತ್ತು ನಾನು ನಿಮ್ಮನ್ನು ಕೇಳುತ್ತಿದ್ದೇನೆ: ಕೇಂದ್ರದಲ್ಲಿ ನಾಯಕತ್ವವಿಲ್ಲದೆ, ಪರಸ್ಪರ ಉನ್ನತ ಸ್ಥಾನದಲ್ಲಿರುವವರು ಬಡಿದಾಡುವಂಥ ಒಂದು ವಿಚಿತ್ರ ಪರಿಸ್ಥಿತಿ ಬಂದಿದೆ. ರಾಜಕೀಯ ಅಸ್ಥಿರತೆ ತಾಂಡವವಾಡುತ್ತಿದೆ, ಒಬ್ಬ ಪ್ರಧಾನಿಗೆ, ಒಬ್ಬ ಗೃಹ ಮಂತ್ರಿಗೆ, ಒಬ್ಬ ರಕ್ಷಣಾ ಸಚಿವರಿಗೆ ಪರಸ್ಪರ ಸಂಬಂಗ ಸರಿಯಿಲ್ಲದಂಥ ವಾತಾವರಣ ನಿರ್ಮಾಣವಾಗಿದೆ. ಮಹಾರಾಷ್ಟ್ರ ರಾಜ್ಯದ ಮುಖ್ಯಮಂತ್ರಿಯವರು ಒಬ್ಬ ರಕ್ಷಣಾ ಸಚಿವರ ರಾಜೀನಾಮೆ ಕೊಡಿಸಬೇಕೆಂದು ಕಾಂಗ್ರೆಸ್ ಪಕ್ಷದಿಂದ ಶರದ್–ಪವಾರರಿಗೆ ಕೇಳುವಂಥ ಒಂದು ದುಸ್ಥಿತಿಯೊದಗಿದೆ. ಕರ್ನಾಟಕ ರಾಜಕೀಯದಲ್ಲಿ ಅಸ್ಥಿರತೆ ಇರುವುದಕ್ಕೂ ಇದಕ್ಕೂ ಸಂಬಂಧವಿದೆ. ಕರ್ನಾಟಕ ರಾಜ್ಯದ ಜನರಿಗೆ ಇವೊತ್ತಿನ ನಿಮ್ಮ ಸರ್ಕಾರದ ರಾಕೀಯ ಅಸ್ಥಿರತೆಗೂ ಕೇಂದ್ರ ಸರ್ಕಾರದ ಒಂದು ರಾಜಕೀಯ ಅಸ್ಥಿರತೆಗೂ ಪರಸ್ಪರ ಬಡಿದಾಡುವುದಕ್ಕೂ ಸಂಬಂಧವಿದೆ, ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಳ್ಳುತ್ತಿದೆ. ಅದಕ್ಕಾಗಿ ನಾನು ತಮ್ಮಲ್ಲಿ ಈ ದೇಶದ ಜನರ ಹಿತದೃಷ್ಟಿಯಿಂದ ಜನರೇ ಮುಂದೆ ಬಂದು ಕಾಂಗ್ರೆಸ್ ಸರ್ಕಾರವನ್ನು ವಿಸರ್ಜನೆ ಮಾಡುವುದಕ್ಕಿಂತ ಮುಂಚೆ ನಿಮ್ಮ ತಪ್ಪನ್ನು ತಿದ್ದಿಕೊಳ್ಳಿ, ಸರಿಯಾದ ದಾರಿಯಲ್ಲಿ ಹೋಗುವುದಕ್ಕೆ ಪ್ರಯತ್ನ ಮಾಡಿ, ಕಚ್ಚಾಟದಲ್ಲಿ ತಲ್ಲೀನರಾಗಬೇಡಿ. ಈ ರೀತಿ ಮಾಡುತ್ತಿದ್ದರೆ ಪ್ರಜಾತಂತ್ರ ವ್ಯವಸ್ಥೆಗೆ ಏನಾದರೂ ಅರ್ಥವಿದಯೆ ? ನಾನು ನಿನ್ನೆ ದಿವಸ ದೆಹಲಿಗೆ ದೊಡ್ಡ ರ್‍ಯಾಲಿಗೆ ಹೋಗಬೇಕೆಂದು ಹೊರಟರೆ ಯಾವ ದೊಡ್ಡ ಪ್ರಜಾತಂತ್ರ ವ್ಯವಸ್ಥೆ ಬಗ್ಗೆ ಮಾತನಾಡುತ್ತಿರುವ,

ಮಹಾತ್ಮ ಗಾಂಧೀಜಿ ಬಗ್ಗೆ ಮಾತನಾಡುತ್ತಿರುವವರು ನನ್ನನ್ನು ರೈಲ್ವೆ ನಿಲ್ದಾಣದಲ್ಲಿ ಬಂಧನ ಮಾಡಿದವು ನೀವೇ ತಾನೇ ? ಜನವರಿ, 21, 1993ರಂದು ಧಾರವಾಡದಲ್ಲಿ ಸಾರ್ವಜನಿಕ ಸಭೆಗೆ ಹೋದಾಗ ಅಲ್ಲಿ ಸುಮಾರು ಹತ್ತು ಸಾವಿರ ಜನರು ಸೇರಿದ್ದರು. ಆ ಸಭೆಗೆ ಹೋಗಲು ನನಗೆ ಅವಕಾಶ ಮಾಡಿಕೊಡದೆ ವಿನಾ ಕಾರಣ ನನ್ನನ್ನು ಬಂಧಿಸಿ ಬೆಳಗಾಂ ಜೈಲಿನಲ್ಲಿಟ್ಟಿದ್ದು ನೀವೇ ತಾನೆ ? ನಿಮಗೆ ಬಿಜೆಪಿ ಬಗ್ಗೆ ಏಕೆ ಭಯ ? ಈ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಸಭೆ–ಸಮಾರಂಭಗಳನ್ನು ನಡೆಸುವುದಕ್ಕೆ ನಿಮಗೆ ಇಷ್ಟವಿಲ್ಲವೆ ? ನಮಗೆ ಅಧಿಕಾರವಿಲ್ಲವೇ ? ಅಥವಾ ಈ ದೇಶವನ್ನು ನೀವೇನಾದರೂ ಕೊಂಡುಕೊಂಡಿದ್ದೀರಾ ? ನಾನು ಏನು ಹೇಳುತ್ತಿದ್ದೇನೆಂದರೆ, ಕಾಂಗ್ರೆಸ್ಸಿನಲ್ಲಿ ಹೇಳುತ್ತಿರುವ ಮಾತು ಸತ್ಯವೇ ?.....

ಶ್ರೀ ಕೆ.ಹೆಚ್. ರಂಗನಾಥ್:– ಡಿಸೆಂಬರ್ 6, 1992ರಂದು ಅಯೋಧ್ಯೆಯಲ್ಲಿ ನಡೆದ ಘಟನೆಯ ಅನಾಹುತ ಸರಿಯಿಲ್ಲವೆಂದು ಶ್ರೀ ಅದ್ವಾನಿಯವರು ವ್ಯಥೆ ಪಡುತ್ತಿರುವಾಗ ನೀವು ಇದೇ ತರಹದ ಮತ್ತೊಂದು ರ್‍ಯಾಲಿ ಮಾಡುತ್ತೇವೆ, ಆ ರ್‍ಯಾಲಿಗೆ ನಾನು ಹೋಗುತ್ತೇನೆಂದು ಹೊರಟಿದ್ದೀರಲ್ಲಾ, ಇದಕ್ಕೆ ನಾವೇನು ಹೇಳಬೇಕು ? ಉತ್ತರ ಪ್ರದೇಶದಲ್ಲಿ ರಾಮ ಜನ್ಮಭೂಮಿ ಎಂದು ಹೇಳುವ ಅಯೋಧ್ಯೆಯಲ್ಲಿ ಜಗಳ ತರಬೇಕೆಂದು ಜನರು ನಿಮಗೆ ಓಟು ಕೊಟ್ಟರೆ ? ನಮಗೆ ಅನುಕೂಲ ಮಾಡಿಕೊಡುವ ಕೆಲಸ ಮಾಡಬಹುದೆಂದು ಬಡಬಗ್ಗರು ನಿಮಗೆ ಓಟು ಕೊಟ್ಟರೆ ನೀವು ರಾಮನನ್ನು ಹಿಡಿದುಕೊಂಡು ಸರ್ಕಾರ ಕಳೆದುಕೊಂಡು ನಾವು ಈಗ ಏನೋ ಮಾಡಿದ್ದೇವೆಂದು ಹೇಳುತ್ತಿದ್ದೀರಲ್ಲಾ, ಇದನ್ನು ಜನರು ನೋಡುವುದಿಲ್ಲವೆಂದು ಈ ರೀತಿ ಮಾಡುತ್ತಿದ್ದೀರಾ ? ಹೇಗೆ ? ಅದಕ್ಕೋಸ್ಕರ ಇದರ ಬಗ್ಗೆ ಪ್ರೊ. ನಂಜುಂಡ ಸ್ವಾಮಿಯವರು ಒಂದು ಮಾತು ಹೇಳಿದ್ದುದು. ಏನೆಂದರೆ, ಅಲ್ಲಿ 'ರಾಮನಾಮ' ಎಂದು ಹೇಳುತ್ತಾರೆ, ಅದು ಅಲ್ಲಿ ಸ್ವಲ್ಪ ಚಲಾವಣೆಯಾದರೂ ಆಗಬಹುದು, ಆದರೆ, ಇದು ಹನುಮನ ನಾಡು, ಅದರ ಚಲಾವಣೆ ಇಲ್ಲಿ ನಡೆಯುವುದಿಲ್ಲ ಎಂದು ಹೇಳಿದರು. ನಿಮಗಿದು ಒಂದು ತರಹದ ಭ್ರಾಂತಿ.

ಶ್ರೀ ವೈ.ಕೆ. ರಾಮಯ್ಯ:– ಮಾನ್ಯ ಅಧ್ಯಕ್ಷರೆ, ನನ್ನ ಹೆಸರನ್ನು ಬದಲಾಯಿಸಬೇಕೆಂದು ಕಾಣುತ್ತದೆ. ನನ್ನ ಹೆಸರನ್ನು ಬದಲಾಯಿಸುವ ಪರಿಸ್ಥಿತಿ ಬಂದಿದೆ. ಇವರು ನನ್ನ ಹೆಸರನ್ನು ಹಿಡಿದು, ಜಗ್ಗಿ ಎಳೆದು ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ....

ಶ್ರೀ ಡಿ.ಬಿ. ಚಂದ್ರೇಗೌಡ:– ಅವರು ಅಂದದ್ದು ನಿಮಗಲ್ಲ. (ಕಾಂಗ್ರೆಸ್‌ದಲ್ಲಿದ್ದಾರಲ್ಲಾ, ಆ ರಾಮನಿಗೆ (ಹಾರನಹಳ್ಳಿ ರಾಮಸ್ವಾಮಿಯವರಿಗೆ) ಹೇಳಿದ್ದುದು.

ಶ್ರೀ ಹಾರನಹಳ್ಳಿ ರಾಮಸ್ವಾಮಿ:– ನಿಜವಾದ ರಾಮ ನಮ್ಮ ಕಡೆಗೆ ಇರುವುದು.

ಶ್ರೀ ಕೆ.ಹೆಚ್. ರಂಗನಾಥ್:– ತಾವು ಉತ್ತರ ಪ್ರದೇಶದಂಥ ದೊಡ್ಡ ರಾಜ್ಯವನ್ನು ಆಳಿದಿರಿ, ಬಡವರಿಗೆ ಅನುಕೂಲ ಮಾಡಿಕೊಡಿ, ಕಾಂಗ್ರೆಸ್ಸಿನವರು ತಪ್ಪು ಮಾಡಿದ್ದಾರೆಂದು ಆಡಳಿತವನ್ನು ನಡೆಸುವ ಅಧಿಕಾರವನ್ನು ನಿಮಗೆ ಕೊಟ್ಟರೆ, ಅಯೋಧ್ಯೆಯಲ್ಲಿ ರಾಮನ ದೇವಸ್ಥಾನ, ಮಸೀದಿ ಕಟ್ಟಿರಿ ಎಂದು ಮೊದಲು ನಿಮಗೆ ಅಜೆಂಡಾ ಹಾಕಿಕೊಟ್ಟಿದ್ದರೆ ? ನೀವು ಅದೇ ರೀತಿ ಎಲ್ಲಾ ಊರುಗಳಿಗೆ ಹೋಗಿ ಹಳುತ್ತೀರಾ ? ಉತ್ತರ ಪ್ರದೇಶ ರಾಜ್ಯದಲ್ಲಿ ಸುಮಾರು 56–57 ಜಿಲ್ಲೆಗಳಿವೆ, ಆ ರಾಜ್ಯವನ್ನು ನೋಡಿದರೆ ನಮಗೆ ಆಶ್ಚರ್ಯವಾಗುತ್ತದೆ, ನಾನು ಆ ರಾಜ್ಯವನ್ನು ನೋಡಿದ್ದೇನೆ. ಆ ರಾಜ್ಯಕ್ಕೂ ಈ ರಾಜ್ಯಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಅಂತಹುದನ್ನು ಸರಿ ಮಾಡಿ ಎಂದು ನಿಮಗೆ ಜವಾಬ್ದಾರಿ ಕೊಟ್ಟರೆ ಅದನ್ನು ಕೈಬಿಟ್ಟು ನೀವು ಒಂದು ತರಹ ಪಲಾಯನವಾದಿಗಳಾಗಿದ್ದೀರಿ.

Your party is an escapist party. ನೀವು ಆ ಜವಾಬ್ದಾರಿಯನ್ನು ಕಾಯಾ ವಾಚಾ ಮನಸಾ ಮಾಡುವುದನ್ನು ಬಿಟ್ಟು ಯಾವುದೋ ಒಂದು ವಿಷಯವನ್ನು, ವ್ಯಾಜ್ಯವನ್ನು ಮಧ್ಯೆ ತಂದು ಇಟ್ಟುಕೊಂಡಿರಿ. ಹಳ್ಳಿಯ ಕಡೆ ಸೌದೇ ವ್ಯಾಜ್ಯವೆಂದು ಗಾದೆ ಹೇಳುತ್ತಾರೆ. ಆ ರೀತಿಯಲ್ಲಿ ವ್ಯಾಜ್ಯವನ್ನು ಮಾಡಿಕೊಂಡು ಹೋದಿರಿ. ನಾವು ಅಲ್ಲಿಗೆ ಹೋಗುತ್ತಿದ್ದವು. ನಮ್ಮನ್ನು ಅರೆಸ್ಟ್ ಮಾಡಿದರು ಎಂದರೆ ನಾವು ಏನು ಹೇಳಬೇಕಾಗುತ್ತದೆ ? ನೀವು ಏಕೆ 10 ಲಕ್ಷ ಜನರೊಂದಿಗೆ ಅಲ್ಲಿಗೆ ಹೋಗುತ್ತಿದ್ದಿರಿ ? ಏಕೆ ಅಲ್ಲಿ ಹೋಗಿ ಸೇರಬೇಕಾಗಿತ್ತು ? ಅಲ್ಲಿ ಏನು ಕೆಲಸವಿತ್ತು ?

ಶ್ರೀ ಬಿ.ಎಸ್. ಯಡಿಯೂರಪ್ಪ:– ಹೇಳುತ್ತೇನೆ.

ಶ್ರೀ ಕೆ.ಹೆಚ್ ರಂಗನಾಥ್:– ನೀವು ನನಗೆ ಹೇಳುವುದು ಬೇಡ, ಈ ರಾಜ್ಯದ ಜನರಿಗೆ ಹೇಳಿ ಸಾಕು ನೀವು ನಾಳೆ ಭಾಷಣ ಮಾಡಲು ಹೋಗುತ್ತೀರಲ್ಲಾ ಆಗ ಏಕೆ ಹೋಗಿದ್ದೇವೆಂದು ಹೇಳಿ. ಸ್ವಾಮಿ ನಿಮಗೆ ಕುದಿಯುವ ನೀರು ಮುಖ್ಯವೊ ಅಥವಾ ರಾಮ ಮುಖ್ಯವೋ ? ಕಡಿಮೆ ಬೆಲೆಯಲ್ಲಿ ವಸ್ತುಗಳು ಸಿಗುವುದು ಮುಖ್ಯವೊ ಅಥವಾ ರಾಮ ಮುಖ್ಯವೋ ಎಂಬುದನ್ನು ಕೇಳಿ, ಅವರುಗಳು ಒಪ್ಪಿಕೊಂಡರೆ ಆಗಬಹುದು, ನೀವು ಅಲ್ಲಿಗೆ ಹೋಗಿ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಾವು ದೆಹಲಿಗೆ ಹೋಗುತ್ತಿದ್ದಂಥದ್ದು ಪ್ರಮುಖವಾಗಿ ಎರಡು ಕಾರಣಗಳಿಂದಾಗಿ ಮೊದಲನೆಯದಾಗಿ ಮ್ಯಾಂಡೇಟನ್ನು ಕಳೆದುಕೊಂಡಿರತಕ್ಕ, ಜನರು ಬಹುಮತವನ್ನು ಕಳೆದುಕೊಂಡಿರತಕ್ಕ ಅಲ್ಪಸಂಖ್ಯಾತ ಕೇಂದ್ರಸರ್ಕಾರವು ಇವತ್ತು ದೇಶವನ್ನು ಆಳತಕ್ಕಂಥ ಸ್ಥಿತಿಯಲ್ಲಿ ಇಲ್ಲ, ಆದ್ದರಿಂದ ಲೋಕಸಭೆಯನ್ನು ವಿಸರ್ಜನೆ ಮಾಡಿ ಚುನಾವಣೆಯನ್ನು ಪ್ರಜಾತಂತ್ರದ ವ್ಯವಸ್ಥೆಯಲ್ಲಿ ಮಾಡಬೇಕೆನ್ನುವುದಕ್ಕೋಸ್ಕರ ಹೋಗಿದ್ದೆವು.

ಉಪಾಧ್ಯಕ್ಷರು:– ತಾವು ಚರ್ಚೆಯನ್ನೇ ಬೇರೆ ಕಡೆಗೆ ತೆಗೆದುಕೊಂಡು ಹೋಗುತ್ತಿದ್ದೀರಲ್ಲಾ, ಅವರಿಗೆ ಪ್ರಶ್ನೆಯನ್ನು ಕೇಳಿದ್ದಕ್ಕೆ ಉತ್ತರವನ್ನು ಕೊಡುತ್ತಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ರಾಜ್ಯಪಾಲರ ಭಾಷಣದಲ್ಲಿ ಏನೂ ವಿಷಯವೇ ಇಲ್ಲ, ಹೀಗಿದ್ದಾಗ ಏನು ಚರ್ಚೆ ಮಾಡುತ್ತೀರಿ ಸಮಯವನ್ನು ಕಳೆಯಬೇಕಲ್ಲವೆ ಆದ್ದರಿಂದ ಹೀಗೆ. ನಮ್ಮನ್ನು ಈ ನಾಲ್ಕೂ ರಾಜ್ಯಗಳಲ್ಲಿ ಪ್ರಜಾತಂತ್ರ ವ್ಯವಸ್ಥೆಯಂತೆ ಜನರು ಆಯ್ಕೆ ಮಾಡಿ ಕಳಿಸಿದ್ದರೆ ಅದನ್ನು ವಿಸರ್ಜನೆ ಮಾಡಿ ಅಲ್ಲಿ ರಾಷ್ಟ್ರಪತಿಗಳ ಆಡಳಿತವನ್ನು ಏರಿದ್ದೀರಲ್ಲಾ ಅದಕ್ಕೆ ತಕ್ಷಣ ಚುನಾವಣೆಯನ್ನು ನಡೆಸಬೇಕೆಂದು ಒತ್ತಾಯ ಮಾಡಲು ದೆಹಲಿಗೆ ಹೋಗುತ್ತಿದ್ದೇವೆ.

ಶ್ರೀ ಕೆ.ಹೆಚ್. ರಂಗನಾಥ್:– ಅದನ್ನು ಇಲ್ಲೇ ತೀರ್ಮಾನ ಮಾಡಬಹುದಲ್ಲ ?

ಶ್ರೀ ಬಿ.ಎಸ್. ಯಡಿಯೂರಪ್ಪ:– ಹಿರಿಯ ರಾಜಕಾರಣಿಗಳಾದ ತಾವು ಈ ರೀತಿ ಹೇಳಿದರೆ ಹೇಗೆ ? ಎಲ್ಲಿ ತೀರ್ಮಾನ ಮಾಡಬೇಕೆಂಬ ಬಗ್ಗೆ ತೀರ್ಮಾನ ಮಾಡುವವರು ನೀವಲ್ಲ.

ಚೇರ್ಮನ್:– ಈಗ ಅವರು ನಿಮ್ಮ ಪ್ರಶ್ನೆಗೆ ಉತ್ತರವನ್ನು ಕೊಡುತ್ತಿದ್ದಾರೆ. ಆದರೆ ಆ ಉತ್ತರಕ್ಕೆ ನೀವು ಒಪ್ಪಿಗೆ ಕೊಡುವುದಿಲ್ಲ, ಆದ್ದರಿಂದ ಈಗ ತಾವು ನೇರವಾಗಿ ರಾಜ್ಯಪಾಲರ ಭಾಷಣಕ್ಕೆ ಬನ್ನಿ.

ಶ್ರೀ ಕಾಗೋಡುತಿಮ್ಮಪ್ಪ:– ಇದುವರೆಗೆ ರಾಮ ಮಂದಿರವನ್ನು ಕಟ್ಟಬೇಕು, ನಾವು ಮಸೀದಿಯನ್ನು ಹೊಡೆದಿರುವುದು ಸರಿ ಎನ್ನುವುದನ್ನು ಪ್ರತಿಪಾದನೆ ಮಾಡಲು ದೆಹಲಿಗೆ ಹೊರಟಿದ್ದರು. ಆದರೆ ಈಗ 3–4ರಾಜ್ಯಗಳಲ್ಲಿ ನಮ್ಮ ಸರ್ಕಾರವನ್ನು ವಿಸರ್ಜನೆ ಮಾಡಿ ರಾಷ್ಟ್ರಪತಿಯವರ ಆಳ್ವಿಕೆಯನ್ನು ಏರಿದ್ದರಿಂದ ಅದನ್ನು ಪ್ರತಿಭಟನೆ ಮಾಡುವುದಕ್ಕಾಗಿ ಹೋಗುತ್ತಿದ್ದೇವೆಂದು ಹೇಳುತ್ತಿದ್ದಾರೆ. ಮೊದಲೇ ಇದನ್ನು ಅವರು ಹೇಳಿದ್ದರೆ ಅವರನ್ನು ಯಾರು ತಡೆಯುತ್ತಿದ್ದರು. ನಮಗೆ ಏನಾಗಿದೆ ಎಂದರೆ ಪೂಜೆಯನ್ನು

ಮಾಡಲು ಹೋಗುತ್ತೇವೆಂದು ಕರಸೇವೆಯನ್ನು ಮಾಡುವುದಕ್ಕೆ ಹೋಗಿ ಅಲ್ಲಿರತಕ್ಕ ಮಸೀದಿಯನ್ನು ಹೊಡೆದುಬಂದಿರಿ, ಅಲ್ಲಿ ಆ ರೀತಿ ಮಾಡಿದ್ದು ತಪ್ಪಾಯಿತೆಂದು ಅದ್ವಾನಿಯವರು ಹೇಳಿದ್ದಾರೆ. ಮತ್ತೆ ಕಾಶ್ಮೀರದಲ್ಲಿ ದೇವಾಲಯವನ್ನು ಹೊಡೆದು ಹಾಕಿದಾಗ ಯಾರೂ ಕೇಳಲಿಲ್ಲ, ಆದರೆ ಈಗ ಮಸೀದಿಯನ್ನು ಹೊಡೆದು ಹಾಕಿದ ಮೇಲೆ ಇದನ್ನು ಏಕೆ ಕೇಳಬೇಕು ಎನ್ನತಕ್ಕಂಥ ವಾದವನ್ನು ಮಾಡುತ್ತಿದ್ದೀರಿ, ನಮಗೇನಾಗಿದೆ ಎಂದರೆ ಈ ರೀತಿ ಏನಾದರೂ ಭಾಷಣ ಮಾಡುತ್ತೇವೆಂದು ಹೋಗಿ ದೆಹಲಿಯಲ್ಲಿರತಕ್ಕ ಮಸೀದಿಯನ್ನು ಹೊಡೆದು ಹಾಕುತ್ತೀರೇನೋ ಎನ್ನುವ ಸಂಶಯ ಅಷ್ಟೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಜಾತಿಯೆಂಬ ವಿಷ ಬೀಜವನ್ನು ಕಾಂಗ್ರೆಸ್‌ನ ಕುತಂತ್ರವೆಂದು ಇದಕ್ಕೇ ಹೇಳುವುದು. ತಾವು ಒಂದು ವಿಷಯವನ್ನು ಮರೆಯಬೇಡಿ. ಚುನಾವಣೆಯ ಕಾಲದಲ್ಲಿ ತಾವು ಉತ್ತರ ಪ್ರದೇಶದಲ್ಲಿ ಸ್ಪಷ್ಟವಾಗಿ ನಮಗೆ ಅಧಿಕಾರವನ್ನು ತಂದುಕೊಟ್ಟರೆ ಪ್ರಭು ರಾಮಚಂದ್ರರ ಭವ್ಯ ಮಂದಿರವನ್ನು ಅವರ ಜನ್ಮ ಸ್ಥಾನವಾದ ಅಯೋಧ್ಯೆಯಲ್ಲಿ ಕಟ್ಟುತ್ತೇವೆಂದು ಚುನಾವಣಾ ಪ್ರನಾಳಿಕೆಯಲ್ಲಿ ಹೇಳಿದ್ದುದು ಇದೆ.

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ:– ಮಂದಿರವನ್ನು ಹೊಡೆದು ಕಟ್ಟುತ್ತೇವೆಂದು ಹೇಳಿದ್ದೇವೆಯೇ ?

ಶ್ರೀ ಬಿ.ಎಸ್. ಯಡಿಯೂರಪ್ಪ:– ನೋಡಿ ನನ್ನೊಬ್ಬನ ಪರಿಸ್ಥಿತಿ ಎಲ್ಲಿಗೆ ಬಂತು.

ಚೇರ್ಮನ್:– ನೀವು ಈಲ್ಡ್ ಆಗುತ್ತೀರಿ ಆದ್ದರಿಂದ ಹೀಗೆ ಆಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಇಲ್ಲಿ ಏನಾಗಿದೆ ಎಂದರೆ, ನಮ್ಮ ಕಾಂಗ್ರೆಸ್ ಪಕ್ಷದಲ್ಲಿ ಇರತಕ್ಕ ನಮ್ಮ ಸ್ನೇಹಿತರು ಕಾಂಗ್ರೆಸನ್ನು ಬಿಟ್ಟು ಈ ಕಡೆಗೆ ಕುಳಿತುಕೊಂಡರೆ ಅಧಿಕಾರ ಸಿಗುತ್ತದೆ. ಈ ಕಡೆ ಬಂದವರು, ಎರಡೂ ಕಡೆ ಅಧಿಕಾರ ಕಳೆದುಕೊಂಡು ಬಿ.ಜೆ.ಪಿ.ಗೆ ಅಧಿಕಾರ ಹೋಗಿಬಿಡುತ್ತದೆ ಎಂದು ರಾತ್ರಿ ಹಗಲು ನಿದ್ರೆಗೆಟ್ಟಿರತಕ್ಕ ಅವರ ಮುಖದ ಪರಿಸ್ಥಿತಿಯನ್ನು ನೋಡಿ ನನಗೆ ಅಯ್ಯೋ ಪಾಪ ಅನ್ನಿಸುತ್ತಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಮಾನ್ಯ ಯಡಿಯೂರಪ್ಪನವರೆ ನೀವು ಮಾತನಾಡಿ ನಾನು ಬೇಡ ಎಂದು ಹೇಳುವುದಿಲ್ಲ, ನೀವು ಮಾತನಾಡತಕ್ಕದ್ದು ತೀರಾ ವೈಜ್ಞಾನಿಕವಾಗಿದೆ, ದೇಶವನ್ನು ಕಟ್ಟಬೇಕು, ದೇಶಪ್ರೇಮಿಗಳು ನಾವು. ನಮ್ಮೆಲ್ಲರನ್ನೂ ಟೀಕೆ ಮಾಡಿ.

5.10 ಪಿ.ಎಂ

ಆದರೆ ಅದರಲ್ಲಿ ಆಶಾಡಭೂತಿತನ ಇರಬಾರದು. ನಿಮ್ಮಲ್ಲಿ ಅದರ ವಾಸನೆ ಎಷ್ಟೊಂದು ರೀತಿಯಲ್ಲಿ ಹೊಡೆಯುತ್ತಿದೆ ಅಂದರೆ, ಕಾಂಗ್ರೆಸ್‌ನಲ್ಲಿರತಕ್ಕಂಥ ಮುಖಂಡರುಗಳನ್ನು ಸೇರಿಸಿಕೊಂಡಿದ್ದೀರಿ. ಪ್ರೊ. ವೆಂಕಟಗಿರಿಗೌಡರು ನಮ್ಮ ಪ್ರೊಫೆಸರ್ ಆಗಿದ್ದವರು ಎಂದು ಬಹಳ ಹೆಮ್ಮೆಯಿಂದ ಹೇಳಿಕೊಳ್ಳುತ್ತೇನೆ. ಕಾಂಗ್ರೆಸ್ ಪಾರ್ಟಿಯಿಂದ ನಿಂತಿದ್ದರು ಅವರು. ಅವರನ್ನು ಅತ್ತು ಕರೆದದು ಪಾರ್ಟಿಗೆ ಸೇರಿಸಿಕೊಂಡು ಇಲ್ಲಿ ಒಕ್ಕಲಿಗರನ್ನು ನಿಲ್ಲಿಸಬೇಕೆಂದು ಹೇಳಿ ವೆಂಕಟಗಿರಿ ಗೌಡರನ್ನು ಕರೆದುಕೊಂಡು ಬಂದು, ನಿಲ್ಲಿಸಿದ್ದೀರಿ ಅವರು ಕಾಂಗ್ರೆಸ್‌ನವರು ಎನ್ನುವುದನ್ನು ಮರೆತ್ತಿದ್ದೀರಿ. ಎಲ್.ಜಿ. ಹಾವನೂರ್‌ರವರು ಕಾಂಗ್ರೆಸ್‌ನಲ್ಲಿದ್ದು ಮಂತ್ರಿಗಳಾಗಿದ್ದವರು. ನಿಮ್ಮ ಲೆಕ್ಕಾಚಾರ ಹೇಗೆ ಅಂದರೆ ಗಂಗಾನದಿ ಮುಳುಗಿದರೆ ಎಲ್ಲವೂ ಪವಿತ್ರವಾಗಿ ಬಿಡುತ್ತದೆ. ನಿಮಗೆ ಅಧಿಕಾರವೇ ಬೇಡವೆ, ಬೇಡ. ಮೊನ್ನೆ ರಾಜಸ್ಥಾನದಲ್ಲಿ ಕಾಂಗ್ರೆಸ್ ಮತ್ತು ಜನತಾದಳದ 165 ಜನ ಎಕ್ಸ್ ಎಂ.ಎಲ್.ಎಗಳನ್ನು ಸೇರಿಸಿಕೊಂಡಿರಿ ಅವರೆಲ್ಲಾ ಕಾಂಗ್ರೆಸ್‌ನವರಲ್ಲವೆ ? ಈ ರೀತಿಯಲ್ಲಿ ಆಶಾಢಭೂತಿತನ ಬೇಡ. ನಿಮಗೆ

ಅಧಿಕಾರವನ್ನು ತೆಗೆದುಕೊಳ್ಳಬೇಕೆಂದು ಪ್ರಭು ರಾಮಚಂದ್ರರ ಹೆಸರಿನಲ್ಲಿ ಹೊರಟಿದ್ದೀರಿ ದೇಶದ ಜನರು ಅಧಿಕಾರ ಕೊಟ್ಟರೆ ಅಧಿಕಾರಕ್ಕೆ ಬನ್ನಿ. ಅದೆಲ್ಲ ಬಿಟ್ಟು ನಾವು ಸತ್ಯಹರಿಶ್ಚಂದ್ರರು ಎಂದು ಹೇಳುವುದು ಬೇಡ. ಇದು ಆಶಾಢಭೂತಿತನದ ಪರಮಾವಧಿ ಆಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಮ್ಮ ಎಲ್.ಜಿ. ಹಾವನೂರ್‌ರವರು ರಾಜ್ಯಕ್ಕೆ ಹಿದುಳಿದ ಆಯೋಗದ ವರದಿಯನ್ನು ಕೊಟ್ಟಂಥ ವ್ಯಕ್ತಿ. ಕಾಂಗ್ರೆಸ್‌ನಲ್ಲಿ ನಿಂತು ಪ್ರೊ.ವೆಂಕಟಗಿರಿ ಗೌಡರನ್ನು ಸೋಲಿಸಿ, ಅಲ್ಲಿದ್ದಂಥ ನಂಬಿಕೆ ಮತ್ತು ವಿಶ್ವಾಸವನ್ನು ಅವರು ಕಳೆದುಕೊಂಡು, ಈ ದೇಶದಲ್ಲಿ ಕಾಂಗ್ರೆಸ್‌ನಲ್ಲಿದ್ದು ಮೋಸ ಹೋಗುವುದು ಬೇಡ, ಇಲ್ಲಿ ಒಂದು ಬದಲಾವಣೆಯನ್ನು ತರುವುದಕ್ಕೆ ಸಾಧ್ಯವಿದ್ದರೆ, ಲೋಕ ನಾಯಕ ಜಯಪ್ರಕಾಶ್ ನಾರಾಯಣರ ಇಚ್ಚೆ ಪೂರೈಸುವುದಕ್ಕೆ ಸಾಧ್ಯವಿದ್ದರೆ, ಅದು ಬಿಜೆಪಿಯಿಂದ ಮಾತ್ರ ಸಾಧ್ಯ ಎಂದು ಹಾವನೂರ್‌ರವರು ನಮ್ಮಲ್ಲಿ ಬಂದಿದ್ದಾರೆ. ಪ್ರೊ. ವೆಂಕಟಗಿರಿ ಗೌಡರರಂಥವರು ಬಂದಿದ್ದಾರೆ. ನಿಮ್ಮ ಬಗ್ಗೆ ಇದ್ದ ವಿಶ್ವಾಸವನ್ನು ಕಳೆದುಕೊಂಡಿದ್ದಾರೆ ಎಂಬ ಅರಿವು ನಿಮಗೆ ಇಲ್ಲವಲ್ಲ ಎಂದು ನನಗೆ ಕನಿಕರವಾಗುತ್ತಿದೆ. ನಾವು ಯಾರನ್ನು ಬೇಕಾದರೂ ವಿದ್ಯುಕ್ತವಾಗಿ ತೆಗೆದುಕೊಳ್ಳುವುದಕ್ಕೆ ಸಿದ್ಧರಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ನೀವು ಯಾರನ್ನು ಬೇಕಾದರೂ ತೆಗೆದುಕೊಳ್ಳುತ್ತೀರಿ. ಕಮ್ಯುನಿಸ್ಟರು, ಸೋಶಿಯಲಿಸ್ಟರು, ಮುಸ್ಲೀಮ್ ಲೀಗ್‌ನವರನ್ನು ಕೂಡ ತೆಗೆದುಕೊಳ್ಳುತ್ತೀರಿ. ನೀವು ಅಧಿಕಾರಕ್ಕೆ ಬರಬೇಕು, ಮಾತನಾಡಿ ಸುಮ್ಮನೆ ಅವರು ಬೇಡ ಇವರು ಬೇಡ ಎಂದು ಹೇಳುವುದು ಬೇಡ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಇವೊತ್ತು ಜನತಾದಳದ ಅನೇಕ ಜನ ಪ್ರಮಾಣಿಕ ಸ್ನೇಹಿತರು ಇದ್ದಾರೆ.

ಶ್ರೀ ಹೆಚ್. ಏಕಾಂತಯ್ಯ:– ವೆಂಕಟಗಿರಿಗೌಡರ ಆರ್ಥಿಕ ಸಿದ್ಧಾಂತ ಜೆ.ಪಿ. ಅವರ ಆರ್ಥಿಕ ಸಿದ್ಧಾಂತ ಒಂದೇ ಎಂದು ಹೇಳುತ್ತಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಿಮ್ಮ ಆರ್ಥಿಕ ಪರಿಸ್ಥಿತಿ ನೋಡಿದರೆ ಅಯ್ಯೋ ಪಾಪ ಅನ್ನಿಸುತ್ತದೆ.

ಮಾನ್ಯ ಅಧ್ಯಕ್ಷರೇ ನಾನು ಈ ವಿಷಯಕ್ಕೆ ಮಂಗಳ ಹಾಡುತ್ತೇನೆ. ನಾನು ಒಂದು ಕಿವಿ ಮಾತನ್ನು ಹೇಳುವುದಕ್ಕೆ ಇಚ್ಚೆ ಪಡುತ್ತೇನೆ. ಈ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಯಾವುದೇ ರಾಜಕೀಯ ಪಕ್ಷ ಇದ್ದರೂ ಕೂಡ ಅವರು ತಮ್ಮ ಸಿದ್ಧಾಂತವನ್ನು ಹೇಳುತ್ತಾ ಹೋಗುತ್ತಾರೆ. ಅವೊತ್ತಿನ ಜನಸಂಘದ ವಿಚಾರವನ್ನು, ಇವೊತ್ತಿನ ಭಾರತೀಯ ಜನತಾ ಪಕ್ಷದ ವಿಚಾರವನ್ನು ಈ ದೇಶದ ಜನರಲ್ಲಿ ಅದರ ಬಗ್ಗೆ ನಂಬಿಕೆ, ವಿಶ್ವಾಸವನ್ನು ಹುಟ್ಟಿಸುವುದಕ್ಕೆ 35–40 ವರ್ಷಗಳ ಕಾಲ ನಮಗೆ ಬೇಕಾಯಿತು. ನಿಮ್ಮ 45 ವರ್ಷಗಳ ಆಡಳಿತ ವೈಖರಿಯ ಪರಿಣಾಮ ಕಾಂಗ್ರೆಸ್‌ನ ನೀತಿ ಸಿದ್ಧಾಂತಗಳಲ್ಲಿ ಬಗ್ಗೆ ದೇಶದ ಜನರ ವಿಶ್ವಾಸವನ್ನು ಕಳೆದುಕೊಳ್ಳುತ್ತಿದ್ದಾರೆ.

ಶ್ರೀ ಕೆ.ಹೆಚ್. ರಂಗನಾಥ್:– ನಿಮ್ಮ ತತ್ವವನ್ನು ಒಪ್ಪಿ ಯಾರೂ ನಿಮಗೆ ಓಟು ಕೊಟ್ಟಿಲ್ಲ. ನಾವು ತಪ್ಪು ಮಾಡಿದ್ದೇವೆ ಅದಕ್ಕಾಗಿ ನಿಮಗೆ ಕೊಟ್ಟರು. ನೀವು ಹೇಳುವ ಪ್ರಕಾರ ಜನರನ್ನು ನಿಮ್ಮ ಬಗ್ಗೆ ನಂಬಿಸುವುದಕ್ಕೆ 35–40 ವರ್ಷಗಳು ಬೇಕಾಯಿತು ಎಂದು ಹೇಳುತ್ತೀರಿ ಅದು ಸರಿಯಲ್ಲ. ನಿಮ್ಮ ಎಕಾನಮಿಕ್ ಪಾಲಿಸಿ ಏನು ? ಎಂದು ಹೇಳುತ್ತೀರಾ ?

What is your Election Manifesto? ರಾಜಾಸ್ಥಾನದಲ್ಲಿ ಮೊನ್ನೆವರೆಗೂ ಕಚ್ಚಾಟ ನಡೀತಿರಲಿಲ್ಲವೋ ? ಪಾರ್ಟಿಯೊಳಗೆ ಹೊಡೆದಾಟ ನಡೀತಿರಲಿಲ್ಲವೋ ? ಯಾವುದೇ ಪಕ್ಷ ಅಧಿಕಾರಕ್ಕೆ

ಬಂದರೆ ಸ್ವಾಭಾವಿಕವಾಗಿ ಇದು ಬರುತ್ತದೆ. Wherever human element is there, these things do happen. ಅದನ್ನು ಬಿಡಿ. ಆದರೆ ನಾವು ನಂಬಿಸಿದ್ದೇವೆ ಎನ್ನುವುದು ತಪ್ಪು. ಅದಕ್ಕಾಗಿ ನಾನು ತಮಗೆ ಕೇಳಿದ್ದುದು, 84ರಲ್ಲಿ ತಾವು ಸ್ವತಂತ್ರವಾಗಿ ನಿಂತಿದ್ದರಲ್ಲ ಲೋಕಸಭೆಗೆ ಎಷ್ಟು ಬಂದಿತ್ತು? ಇರಬಹುದು, ನಾವು ತಪ್ಪು ಮಾಡಿದರೆ ನೀವು ಅಧಿಕಾರಕ್ಕೆ ಬರಬಹುದು, ಆ ಮಾತು ಬೇರೆ. ಜನ ಅಧಿಕಾರ ಕೊಟ್ಟರೆ ನೀವು ಇರಬೇಕಾಗುತ್ತವೆ. ಅತಿ ದೊಡ್ಡ ರಾಜ್ಯ ಉತ್ತರಪ್ರದೇಶ, 86–87 ಪಾರ್ಲಿಮೆಂಟರಿ ಸೀಟಿರುವ ರಾಜ್ಯ, ನಿಮ್ಮನ್ನು ಅಧಿಕಾಕ್ಕೆ ಕೂರಿಸಿದರೆ ನೀವು ಜನಸಾಮಾನ್ಯರ ಕೆಲಸ ಬಿಟ್ಟು ಇದನ್ನು ಹಿಡಿದುಕೊಂಡು ಕುಳಿತಿದ್ದೀರಲ್ಲ, ನೀವಾದರೂ ಕೇಳಬಾರದೆ ನಮ್ಮ ರಾಷ್ಟ್ರೀಯ ಮುಖಂಡರಿಗೆ, ಏನು ಸ್ವಾಮಿ ಹೀಗೆ ಮಾಡ್ತಿದೀರಿ, ದಕ್ಷಿಣದಲ್ಲಿ ನಮಗೆ ಕಷ್ಟವಾಗುತ್ತದೆ, ಎಷ್ಟು ದಿವಸ ನಿಮ್ಮನ್ನೇ ನಂಬಿ ನಾವು ಬದುಕಿಕೊಂಡಿರೋದು ನೀವು ಬದಲಾವಣೆ ಮಾಡಿ ಎಂದು ಹೇಳಬಾರದೆ, ಅದು ಬಿಟ್ಟು ಅವರು ಮಾಡಿದ್ದೇ ಸರಿ ಎಂದು ಹೇಳ್ತಿದೀರಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಮ್ಮ ಆರ್ಥಿಕ ನೀತಿ ಬಗ್ಗೆ ನೀವು ಚಿಂತಿಸಬೇಡಿ.

ಶ್ರೀ ಆರ್.ವಿ. ದೇಶಪಾಂಡೆ:– ಆರ್ಥಿಕ ನೀತಿ ಬಗ್ ಚಿಂತನೆ ಮಾಡಬಾರದೆನ್ನುವುದೇ ಅವರ ಕಾರ್ಯಕ್ರಮ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಾನು ಹೇಳುತ್ತೇನೆ. ನಮ್ಮಲ್ಲಿ ನಾಲ್ಕು ರಾಜ್ಯಗಳಲ್ಲಿ ಅಧಿಕಾರಕ್ಕೆ ಬಂದ ಮೇಲೆ ಅಲ್ಲಿರುವ ರೈತರ ಬಗ್ಗೆ, ಕೃಷಿ ಕಾರ್ಮಿಕನ ಬಗ್ಗೆ, ನಿರುದ್ಯೋಗಿ ಯುವಕರ ಬಗ್ಗೆ ಹರಿಜನ ಗಿರಿಜನರ ಬಗ್ಗೆ ಅಧಿಕೃತವಾಗಿ ನಿಮ್ಮ ಮುಖ್ಯ ಕಾರ್ಯದರ್ಶಿಗಳಿಂದ ಕಾಗದ ಬರೆಯಿಸಿ ನೀವು ಅಧಿಕಾರದಲ್ಲಿದ್ದಾಗ ನೀವು ಮಾಡಿದ ಸಾಧನೆ ಏನು? ಭಾರತೀಯ ಜನತಾ ಪಾರ್ಟಿ ಎರಡೂವರೆ ವರ್ಷದಲ್ಲಿ ಈ ನಾಲ್ಕು ರಾಜ್ಯಗಳಲ್ಲಿ ಏನು ಸಾಧನೆ ಮಾಡಿದೆ ಎಂದು ಅಂಕಿ ಅಂಶ ತರಿಸಿಕೊಳ್ಳಿ. ನಾನು ಉದಾಹರಣೆ ಕೊಡುತ್ತೇನೆ. ಉತ್ತರ ಪ್ರದೇಶದಲ್ಲಿ ಮಧ್ಯಪ್ರದೇಶದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿತ್ತು. ಅಲ್ಲಿರುವ ಲಕ್ಷಾಂತರ ಹರಿಜನ ಗಿರಿಜನ ಬಡವರು, ಹಿಂದುಳಿದ ಬಂಧುಗಳು, ಒಂದೆ ಕಡೆ ಎರಡು ಮೂರು ಎಕರೆ ಇಟ್ಟುಕೊಂಡು ಬಗರ್ ಹುಕುಂ ಸಾಗುವಳಿ ಮಾಡಿಕೊಂಡು ಜೀವನ ಸಾಗಿಸುತ್ತಿದ್ದರೋ ಅವರನ್ನು ಒಕ್ಕಲೆಬ್ಬಿಸುವ ಪ್ರಯತ್ನ ನೀವು ಮಾಡಿದುದು. ಅಧಿಕಾರಕ್ಕೆ ಬಂದ ಒಂದು ವರ್ಷದೊಳಗಾಗಿ ಆ ಜನರಿಗೆಲ್ಲ ಒಬ್ಬರನ್ನೂ ಬಿಡದೆ ಹಳ್ಳಿಹಳ್ಳಿಗೆ ಹೋಗಿ ಬಗರ್‌ಹುಕುಂ ಸಾಗುವಳಿ ಖಾಯಂ ಮಾಡಿ ಸಾಗುವಳಿ ಚೀಟಿ ಕೊಟ್ಟು ಬಂದದ್ದು ಬಿಜೆಪಿ.

ಯಾವ ಹರಿಜನ ಗಿರಿಜನರ ಉದ್ಧಾರದ ಬಗ್ಗೆ ನೀವು ಮಾತನಾಡುತ್ತಿದ್ದೀರೋ, ಕರ್ನಾಟಕದ ರಾಜ್ಯದ ಬಗ್ಗೆ ಮಾತನಾಡಿ. ಆರ್ಥಿಕ ಸ್ಥಿತಿ ಬಗ್ಗೆ ಮಾತನಾಡುತ್ತೀರಿ ಏನಾಗಿದೆ ಇವತ್ತು ಆರ್ಥಿಕ ಸ್ಥಿತಿ ನಮ್ಮ ರಾಜ್ಯದ್ದು? ಗ್ರಾಮೀಣ ಜನರ ಸ್ಥಿತಿ ಏನಾಗಿದೆ? ನಲವತ್ತೈದು ವರ್ಷಗಳಲ್ಲಿ ಊರ ಹೊರಗಡೆ ಹರಿಜನ ಗಿರಿಜನರನ್ನು ಉದ್ಧಾರ ಮಾಡುತ್ತೀರಿ ಎಂದು, ರಸ್ತೆ ಇಲ್ಲದೆ ದೀಪ ಇಲ್ಲದೆ ಕೈಗೆ ಕೆಲಸ ಇಲ್ಲದೇನೆ ಸಾಯುವಂತಹ ಸ್ಥಿತಿಗೆ ಅವರನ್ನು ತಂದಿರುವುದು ನೀವೆ ತಾನೇ? ಲಕ್ಷಾಂತರ ರೈತರ ಮಕ್ಕಳಿಗೆ ಉದ್ಯೋಗ ಇಲ್ಲದೆ ಭಿಕ್ಷೆ ಬೇಡುವಂತೆ, ತಲೆತಗ್ಗಿಸಿ ಓಡುವಂತಹ ಸ್ಥಿತಿ ತಂದವರು ನೀವೇ ತಾನೇ? ನಿಮ್ಮ ಕೇಂದ್ರದ ಸಚಿವರು ಮೊನ್ನೆ ಹೇಳಿಕೆ ಕೊಟ್ಟರು. ಇದೇ ಪರಿಸ್ಥಿತಿ ಮುಂದುವರೆದರೆ 2000 ಎ.ಡಿ. ಒಳಗೆ ಒಂದು ದಿವಸಕ್ಕೆ ನಾಲ್ಕು ಗಂಟೆ ಸಹ ವಿದ್ಯುತ್ ಸರಬರಾಜು ಮಾಡುವುದಕ್ಕೆ ಆಗುವುದಿಲ್ಲವೆಂದು.

ಶ್ರೀ ಹೆಚ್. ಏಕಾಂತಯ್ಯ:– ಇದಕ್ಕೆಲ್ಲಾ ಪರ್ಯಾಯವಾಗಿ ನಿಮ್ಮ ಕೈಗಾರಿಕಾ ನೀತಿ ಏನು? ಈ ದೇಶದ ನಿರುದ್ಯೋಗಿಗಳಿಗೆ ಕೆಲಸ ಕೊಡುವಂತಹ ನೀತಿ ಏನು? ನೀವು ಹೇಳ್ತೀರಿ ದೊಡ್ಡ ಬಂಡವಾಳ ಹಾಕಿ ಉತ್ಪಾದನೆಯನ್ನು ಬಂಡವಾಳದ ಮೂಲಕ ಮಾಡುತ್ತೇವೆಂದು ಹೇಳ್ತೀರೋ ಹೊರತು ಹೆಚ್ಚು

ಜನರಿಗೆ ಉದ್ಯೋಗ ಕೊಡುವಂತಹ ಕೈಗಾರಿಕಾ ನೀತಿಯನ್ನು ಕೇಂದ್ರ ಸರ್ಕಾರದಲ್ಲಿದ್ದಾಗಲಿ, ಈಗಾಗಲೇ ಏನಾದರೂ ಹೇಳಿಕೊಂಡಿದ್ದೀರಾ? ಈ ಎಲ್ಲಾ ವಿಚಾರಗಳಲ್ಲಿ ತಾವು ಯಾರ ಪರವಾಗಿದ್ದೀರಿ? ಸಾಮಾನ್ಯ ಜನರು, ಬಡವರು, ನಿರುದ್ಯೋಗಿಗಳಿರಬಹುದು ಅವನ್ನು ಹೋಗಲಾಡಿಸುವ. ಬಗ್ಗೆ ನಿಮ್ಮ ಕಾರ್ಯಕ್ರಮಗಳೇನು ಹೇಳಿ?

ಶ್ರೀ ಬಿ.ಎಸ್. ಯಡಿಯೂರಪ್ಪ:– ಕರ್ನಾಟಕ ರಾಜ್ಯಗಳಲ್ಲಿ ಅಧಿಕಾರದಲ್ಲಿ ನೀವಿದ್ದಿರಿ, ಇವರಿದ್ದರು. ನಮ್ಮ ಆರ್ಥಿಕ ನೀತಿ ಕೈಗಾರಿಕಾ ನೀತಿ ಏನು ಎಂಬ ಬಗ್ಗೆ ನಮ್ಮ ಪ್ರಣಾಳಿಕೆಯ ಪುಸ್ತಕ ವಿತರಣೆ ಮಾಡುತ್ತೇನೆ. ಇಲ್ಲಿ ಒಂದು ದಿವಸ ಚರ್ಚೆ ಮಾಡೋಣ. ನಾವು ಇಲ್ಲಿ ಬಿಜೆಪಿಯವರು 4 ಜನ ಇದ್ದೇವೆ, ಆಯಿತು. ನಮ್ಮ ನೀತಿ ಇಲ್ಲ ಎಂದು ತಿಳಿದುಕೊಳ್ಳಿ. ನಿಮ್ಮ ನೀತಿ ಏನು? ಐದು ವರ್ಷ ಅಧಿಕಾರದಲ್ಲಿದ್ದ ರಾಮಕೃಷ್ಣಹೆಗಡೆಯವರು ಮೌಲ್ಯಾಧಾರಿತ ರಾಜಕಾರಣ ಮಾಡುತ್ತೇವೆ ಎಂದು ಹೇಳಿದರು. ಏನಾಯಿತು, ಮೌಲ್ಯ ಎನ್ನುವ ಶಬ್ದವನ್ನು ಅಪಮೌಲ್ಯ ಮಾಡಿಬಿಟ್ಟಿರಿ.

ಜನರ ಬಗ್ಗೆ ಇದ್ದ ನಂಬಿಕೆ ವಿಶ್ವಾಸವನ್ನು ಹಾಳು ಮಾಡಿದಿರಿ. ನಾನು ಅದರ ಬಗ್ಗೆ ಟೀಕೆ ಮಾಡುತ್ತಿಲ್ಲ. ಅವರೇನು ಮಾಡುತ್ತಾರೆ ಪಾಪ ಅವರೇನು ಮಾಡುವುದಕ್ಕಾಗುವುದಿಲ್ಲ.

ಶ್ರೀ ಹೆಚ್. ಏಕಾಂತಯ್ಯ:– ಮಾನ್ಯ ಯಡಿಯೂರಪ್ಪನವರೇ, ನಾನು ಈಗಾಗಲೇ ಹೇಳಿದೆ. ಈ ಎಲ್ಲದಕ್ಕೂ ಸಹಾ ಹಿನ್ನೆಲೆ ಇರುವಂಥ ಶಕ್ತಿ ಏನೆಂಬುದನ್ನು ನಾನು ಹೇಳಿದೆ. ಎಲ್ಲಿಯವರೆಗೆ ಆ ಪಟ್ಟಭದ್ರ ಹಿತಾಸಕ್ತಿಗಳು ನಮ್ಮ ಮೇಲೆ ನಿಮ್ಮ ಮೇಲೆ ಪ್ರಭಾವ ಬೀರುತ್ತವೆ, ಬೀರುವಂಥ ಪರಿಸ್ಥಿತಿ ಈ ರಾಷ್ಟ್ರದಲ್ಲಿ, ರಾಜ್ಯದಲ್ಲಿ ಇರುತ್ತದೆ. ಅಲ್ಲಿಯವರೆಗೂ ಸಹಾ ಹೊಸ ಸಾಮಾಜಿಕ ವ್ಯವಸ್ಥೆ ತಾವು ಏನು ಹೇಳುತ್ತೀರಿ. ಅದು ಬರುವುದಕ್ಕೆ ಸಾಧ್ಯವಿಲ್ಲ. ನೀವೂ ಸಹಾ ಅದನ್ನು ಆಯ್ಕೆ ಮಾಡಿದಿರಿ ಆ ಸ್ಥಾನದಿಂದ ಕೊಚ್ಚಿಕೊಂಡು ಹೋಗುತ್ತೀರಿ. ಅದರ ಬಗ್ಗೆ ಏನೂ ಅನುಮಾನ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಮ್ಮ ನೀತಿ ಸ್ಪಷ್ಟ ಇದೆ. ಹಳ್ಳಿಯಲ್ಲಿರುವಂಥ ರೈತ ಉಳಿದಾಗ ಮಾತ್ರ ರಾಜ್ಯ ಉಳಿಯುವುದು, ದೇಶ ಉಳಿಯುವುದು. ಅದಕ್ಕಾಗಿ ಗ್ರಾಮೀಣ ಪ್ರದೇಶದಲ್ಲಿರುವಂಥ ಕೈಗಾರಿಕೆಗಳಿಗೆ.....

ಶ್ರೀ ಪಿ.ಜಿ.ಆರ್. ಸಿಂಧ್ಯ:– ಮಾನ್ಯ ಅಧ್ಯಕ್ಷರೇ, ಮಾನ್ಯ ಯಡಿಯೂರಪ್ಪನವರು...

ಚೇರ್ಮನ್:– ನನಗೆ ಒಂದು ಭಯ. ಏನಾಗಿದೆ ಎಂದರೆ ಈ ರಾಜ್ಯಪಾಲರ ಭಾಷಣ ಬಿಟ್ಟು....

ಶ್ರೀ ಪಿ.ಜಿ. ಆರ್. ಸಿಂಧ್ಯ:– ಸನ್ಮಾನ್ಯ ಯಡಿಯೂರಪ್ಪನವರು ರಾಮಕೃಷ್ಣ ಹೆಗಡೆಯವರ ಮೌಲ್ಯಾಧಾತ ಸರ್ಕಾರದ ಬಗ್ಗೆ ಮಾತನಾಡಿದರು. ಈ ಮೌಲ್ಯಾಧಾರಿತ ಸರ್ಕಾರಕ್ಕೆ 83ರಿಂದ 85ರವರೆಗ ಇವರು ಬೆಂಬಲವನ್ನು ಕೊಟ್ಟರು. 85 ನೇ ಚುನಾವಣೆಯಲ್ಲಿ ಇವರು 18 ಸೀಟು ನಾವು ಗೆದ್ದು ಬಂದಿದ್ದೇವೆ, ನಮಗೆ 36 ಸೀಟು ಬಿಟ್ಟುಕೊಡಿ ಎಂದು ಹೇಳಿದರು. ನಾವು 36 ಆಗುವುದಿಲ್ಲ. ಬೇಕಾದರೆ ನಿಮಗೆ 18 ಸೀಟು ಕೊಡುತ್ತೇವೆ. ಇಲ್ಲದಿದ್ದರೆ ನಿಮ್ಮ ದಾರಿ ನಿಮಗೆ ಎಂದು ಹೇಳಿದರು. ಆಗ ಏತಕ್ಕೆ ಈ ಯೋಚನೆ ನಿಮಗೆ ಬರಲಿಲ್ಲ. 85ರಲ್ಲಿ ನೀವು ನಮ್ಮ ಜೊತೆ ಅಲಯನ್ಸ್ ಮಾಡಿಕೊಳ್ಳುವುದಕ್ಕೆ ಬಂದಿದ್ದರಲ್ಲಾ, ನಾವು ನೀವು ಕುಳಿತು ಮಾತುಕತೆ ಮಾಡಿದೆವು. ಆಗ ಏತಕ್ಕೆ ಹೆಗಡೆ ಮೌಲ್ಯ ಮಾಡಲಿಲ್ಲ ಎಂದು ಹೇಳಿ, ನಮಗೆ ಹೆಗಡೆಯವರ ಮೌಲ್ಯಾಧಾರಿತ ಇಲ್ಲ. ರಾಜಕಾರಣ ಹಿಡಿಸುವುದಿಲ್ಲವೆಂದು ಹೇಳಿ. ಮಾನ್ಯ ಬಂಗಾರಪ್ಪನವರನ್ನು ನಾನು ಅಪ್ರಿಸಿಯೇಟ್ ಮಾಡುತ್ತೇನೆ. ಏಕೆಂದರೆ ಅವರು ಹೇಳಿದರು, ನಮಗೂ ನಿಮಗೂ ಹೊಂದಾಣಿಕೆಯಾಗುವುದಿಲ್ಲ, ಹೋಗುತ್ತೇನೆ ಎಂದು ಹೇಳಿ ಹಠ ಸಾಧನೆ ಮಾಡಿದರು. ನೀವು ಏತಕ್ಕೆ ಆ ರೀತಿ ಮಾಡುವುದಕ್ಕೆ ಹೋಗಲಿಲ್ಲ. ನಮಗೆ ಏತಕ್ಕೆ ದುಂಬಾಲು ಬಿದ್ದಿದ್ದೀರಿ? ದಯವಿಟ್ಟು ಇವೆಲ್ಲಾ ಬೇಡ. ಮಾನ್ಯ ರಂಗನಾಥ್‌ರವರು

ಏನು ನಿಮಗೆ ಕೇಳಿದರು, ನೀವು ಏನು ಮಾಡಬೇಕು ಎಂದು ಹೊರಟಿದ್ದೀರಿ ? ಯಾರ ಪರವಾಗಿದ್ದೀರಿ ? ನಿಮ್ಮ ಆರ್ಥಿಕ ನೀತಿ ಏನು ? ನಿಮ್ಮನ್ನು ಏನಾದರೂ ಕೇಳುವುದಕ್ಕೆ ಹೋದರೆ ನಾನು ಇಲ್ಲಿ ಹೇಳುವುದಿಲ್ಲ. ನಾನು ಹೊರಗಡೆ ಹೋಗುತ್ತೇನೆ. ನನಗೆ ಇಲ್ಲಿ ನಂಬಿಕೆ ಇಲ್ಲ ಎಂದು ಹೇಳಿ ಪಬ್ಲಿಕ್ ಮೀಟಿಂಗ್ ಅಡ್ರೆಸ್ ಮಾಡುವುದಕ್ಕೆ ಹೋಗುತ್ತೀರಿ. ಇಲ್ಲಿ ಹೇಳಿ ಎಂದರೆ ನಿಮಗೆ ಏತಕ್ಕೆ ನಾವು ಹೇಳಬೇಕು, ನಿಮ್ಮ ಜವಾಬ್ದಾರಿ ಅದು ಎಂದು ಹೇಳುತ್ತೀರಿ. ನಾವು ಇದಕ್ಕೆ ಏನು ಹೇಳುವುದು ? ನಿಮ್ಮ ಖಚಿತವಾದ ನಿಲುವೇನು ? ಯಾರ ಪರವಾಗಿ ನೀವು ಇದ್ದೀರಿ ? ದಯವಿಟ್ಟು ಅದನ್ನು ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಸನ್ಮಾನ್ಯ ಅಧ್ಯಕ್ಷರೇ, ಸತ್ಯಕ್ಕೆ ಅಪಚಾರ ಮಾಡುವಂಥ ಒಂದು ಮಾತನ್ನು ನೀವು ಹೇಳುತ್ತಿದ್ದೀರಿ. ನಾನು ಸನ್ಮಾನ್ಯ ಸಿಂಧ್ಯಾರವರನ್ನು, ದೇಶಪಾಂಡೆಯವರನ್ನು, ಏಕಾಂತಯ್ಯನವರನ್ನು ಕೇಳುತ್ತೇನೆ. ಬಿ.ಜೆ.ಪಿ. ಕರ್ನಾಟಕದಲ್ಲಿ ಯಾವುದಾದರೂ ಒಂದು ಸಂದರ್ಭದಲ್ಲಿ ನಿಮಗೂ ನಮಗೂ ಹೊಂದಾಣಿಕೆಯನ್ನು ಮಾಡಿಕೊಂಡು ವಿಧಾನಸಭೆಗೆ ಚುನಾವಣೆಯನ್ನು ನಡೆಸಿದ್ದೇವೆಯೋ ? ಇಲ್ಲ. ಹೊಂದಾಣಿಕೆಯಾಗಿಲ್ಲ. ದಯಮಾಡಿ ಸತ್ಯವನ್ನು ತಿಳಿದುಕೊಳ್ಳುವಂಥ ಪ್ರಯತ್ನವನ್ನು ಮಾಡಿ. 18 ಜನರು ನಾವು ಗೆದ್ದಾಗ ನಾವು ಸ್ವತಂತ್ರ್ಯವಾಗಿ ನಾವು ಗೆದ್ದವರು. ನಿಮಗೆ 18 ಜನರ ಬೇಷರತ್ ಬೆಂಬಲ ಕೊಟ್ಟು ವಿರೋಧ ಪಕ್ಷಗಳ ಬಗ್ಗೆ ಇದ್ದ ನಂಬಿಕೆಯನ್ನು ಹಾಳು ಮಾಡಿಕೊಂಡು ಹತ್ತು ವರ್ಷ ನಮ್ಮ ಬೆಳವಣಿಗೆಯನ್ನು ಹಾಳು ಮಾಡಿಕೊಂಡಂಥ ಜನರು ನಾವು. ಇದರ ಅರಿವು ನಮಗಾಗಿದೆ. ಆದರೆ ನಾವು ಇವತ್ತು ನಿಮ್ಮನ್ನು ಕೇಳುತ್ತೇವೆ. ಇವತ್ತು ಬಿಜೆಪಿ.ಯಿಂದ 18 ಜನರು ಬೆಂಬಲವನ್ನು ತೆಗೆದುಕೊಂಡು ನೀವು ಅಧಿಕಾರ ನಡೆಸಿದರಲ್ಲಾ, ಯಾವತ್ತಾದರೂ ಒಂದು ದಿವಸ ಆ ಎರಡು ವರ್ಷದಲ್ಲಿ ಅಧಿಕಾರ ಕಾಲದಲ್ಲಿ ಇದ್ದಂಥ ವ್ಯತ್ಯಾಸ ಅದು ಅದಾದ ಮೇಲೆ ನಮ್ಮನ್ನು ಬಿಟ್ಟು ನೀವು ಹೋದ ಮೇಲೆ ನಿಮ್ಮ ಪರಿಸ್ಥಿತಿ ಏನಾಯಿತು ? ನಿರ್ನಾಮವಾದಿರಿ.

ಶ್ರೀ ಪಿ.ಜಿ.ಆರ್. ಸಿಂಧ್ಯ:– 146 ಸೀಟು ಗೆದ್ದೆವು.

ಶ್ರೀ ಆರ್.ವಿ. ದೇಶಪಾಂಡೆ:– ನಮಗೆ 146 ಸೀಟುಗಳು ಬಂದೆವು.

ನೀವು ಆರು ಜನರು ಬಂದಿರಿ, ನಾವು 146 ಜನರು ಬಂದೆವು.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಿಜ. ಕರ್ನಾಟಕದಲ್ಲಿ ಲೋಕಸಭೆ ನಿಮ್ಮ ಪರಿಸ್ಥಿತಿ ಏನು ?

ಶ್ರೀ ಪಿ.ಜಿ.ಆರ್. ಸಿಂಧ್ಯಾ:– ಏನಾಯಿತು ?

ಶ್ರೀ ಬಿ.ಎಸ್. ಯಡಿಯೂರಪ್ಪ:– ಯಾರಿದ್ದಾರೆ. ಸ್ವಾಮಿ ? 28 ಪರ್ಸೆಂಟ್ ವೋಟು ತೆಗೆದುಕೊಂಡು ಮೊನ್ನೆ ಲೋಕಸಭೆ ಚುನಾವಣೆಯಲ್ಲಿ ನಾಲ್ಕು ಜನ ಲೋಕಸಭೆಗೆ ಆಯ್ಕೆಯಾಗಿ ಹೋದರು. ನಿಮ್ಮವರು ಒಬ್ಬರು ಅಡ್ರೆಸ್ ಇರಲಿಲ್ಲ. 5 ವರ್ಷ ಅಧಿಕಾರ ನಡೆಸಿದಂಥ ನೀವು ಲೋಕಸಭೆಯಲ್ಲಿ ಒಂದು ಸೀಟು ತೆಗೆದು ಕೊಳ್ಳುವುದಕ್ಕೆ ಆಗದೆ ಜನರಿಂದ ದೂರ ಸರಿದಂಥ ಪಕ್ಷ ನಿಮ್ಮದು.

ಶ್ರೀ ಆರ್.ವಿ. ದೇಶಪಾಂಡೆ:– ಲೋಕಸಭೆಯಲ್ಲಿ ನಾವು ಸೀಟು ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ. ನಾನು ಒಪ್ಪೊಳ್ಳುತ್ತೇನೆ. ನೀವು ರಾಮು, ಮತ್ತೊಂದು ಎಮೋಷನಲ್ ಇಷ್ಯೂ ರೇಜ್ ಮಾಡಿ ಆ ಸಮಯದಲ್ಲಿ ಕೆಲವು ಮಟ್ಟಿಗೆ ನಿಮಗೆ ಯಶಸ್ಸು ಕೂಡ ಬಂತು. ಆದರೆ ಆ ಯಶಸ್ಸು ಎಷ್ಟು ದಿನ ಉಳಿಯಿತು ? ಅಸೆಂಬ್ಲಿ ಚುನಾವಣೆಯಾಯಿತು. ಯಾವ ಗದಗ್ ಕ್ಷೇತ್ರದಲ್ಲಿ ನೀವು ಲೀಡ್ ಮಾಡಿದ್ದೀರಿ

ಪಾರ್ಲಿಮೆಂಟಿಗೆ Your forfeited your deposit. ಕುಣಿಗಲ್ ನೀವು ಎಲ್ಲಿ ಲೀಡ್ ಮಾಡಿದ್ದಿರಿ. You forfeited your deposit within six months. ಹಾಗಾಗಿ ನೀವು ತಿಳಿದುಕೊಳ್ಳಬೇಕು. ಜನರನ್ನು ಖಾಯಂ ಆಗಿ ಮೋಸ ಮಾಡುವುದಕ್ಕಾಗುವುದಿಲ್ಲ. ಅದೇ ಪ್ರಕಾರ ಜಾತಿ ಮೇಲೆ, ದೇವರ ಹೆಸರಿನ ಮೇಲೆ ವೋಟು ಬರಲಿಕ್ಕೆ ಸಾಧ್ಯವಾಗಲಿಲ್ಲ. ಟೆಂಪೊರರಿ ಚುನಾವಣೆ ಬರಬಹುದು. ಅದರ ಲಾಭ ಟೆಂಪೊರರಿ ತೆಗೆದುಕೊಂಡಿರಿ. ಅದನ್ನು ತೆಗದುಕೊಂಡಿರಿ. ಅದು ಹೋಯಿತು. ಇಷ್ಟೆ ನಿಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೆ, ನಾನು ಇದರ ಬಗ್ಗೆ ಹೆಚ್ಚು ಚರ್ಚೆ ಮಾಡುವುದಕ್ಕೆ ಇಚ್ಛೆಪಡುವುದಿಲ್ಲ. ಆದರೆ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಏಕೆ ಇವರು ಚರ್ಚೆ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಅಂದರೆ ಇವರಿಗೆ ಕನ್‌ವಿನಿಯೆಂಟ್ ಆಗಿ ಇಲ್ಲ. ಇವರು ಶೇಕಡ 28ರಷ್ಟು ಓಟು ಬಂತು ಎಂದು ಹೇಳುತ್ತಾರೆ. ನಿಮಗೆ ವಿರುದ್ಧವಾಗಿ ಶೇಕಡ 62 ರಷ್ಟು ಓಟು ಇತ್ತು ಎಂದು ಹೇಳಿದರೆ, 72 ಪರ್ಸೆಂಟ್ ಓಟು ಇತ್ತು. ಅಂದರೆ ಅವರಿಗೆ ಸ್ವಲ್ಪ ಹೌದಲ್ಲಾ 72 ಪರ್ಸೆಂಟ್ ಓಟು ಇದೆ ಎನ್ನುತ್ತಾರೆ. ಅದು ಇನ್‌ಕನ್ವಿಯೆಂಟ್.

ಚೇರ್ಮನ್:– ಮಾನ್ಯ ಯಡಿಯೂರಪ್ಪನವರು ನೀವು ಎದ್ದೇಳಿ ಎಂದು ನಿಮಗೆ ಪ್ರಶ್ನೆ ಹಾಕುತ್ತಾರೆ. ಆದ್ದರಿಂದ ನೀವು ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಪ್ರಾರಂಭ ಮಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ:– ವಾಸ್ತವಿಕವಾಗಿ ಅವರು ಪರಿಸ್ಥಿತಿ ಅರಿವಿಲ್ಲದೆ ಒದ್ದಾಡುತ್ತಿದ್ದಾಲ್ಲಾ ಎಂದು ನನಗೆ ಇವರನ್ನು ನೋಡಿ ದುಃಖವಾಗುತ್ತದೆ. ಇರುವ 24 ಜನರಲ್ಲಿ ಒಬ್ಬ ಮುಖಂಡರ ಬಗ್ಗೆ ನಿಮಗೆ ವಿಶ್ವಾಸ ಇಲ್ಲ. ಇನ್ನೊಬ್ಬರನ್ನು ಮುಖಂಡರನ್ನಾಗಿ ಮಾಡಿಕೊಂಡರೆ.

ಶ್ರೀ ಆರ್. ವಿ. ದೇಶಪಾಂಡೆ:– ವಿಷಯಕ್ಕೆ ಬನ್ನಿ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಅಧಿಕೃತವಾದ ವಿರೋಧ ಪಕ್ಷ.

ಚೇರ್ಮನ್:– ನಮ್ಮ ಮುಂದೆ ಇರುವುದು ರಾಜ್ಯಪಾಲರ ಭಾಷಣ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಪ್ರಜಾತಂತ್ರದ ವ್ಯವಸ್ಥೆಯಲ್ಲಿ ಅಲ್ಲಿ ಯಾರು ಬೇಕಾದರೂ ಕುಳಿತುಕೊಳ್ಳಬಹುದು. ವಿರೋಧಪಕ್ಷದಲ್ಲಿ ಕುಳಿತುಕೊಂಡು ಸರ್ಕಾರದ ವೈಫಲ್ಯತೆಯನ್ನು ತೆಗೆದುಹಾಕಿ, ಜನರಲ್ಲಿ ಜಾಗೃತಿಯನ್ನು ಉಂಟು ಮಾಡಿ ಜನಕಲ್ಯಾಣ ಮಾಡುವಂತಹ ಕೆಲಸದಲ್ಲಿ ಸಂಪೂರ್ಣ ವಿಫಲವಾಗಿರತಕ್ಕಂಥ ಒಂದು ವಿರೋಧ ಪಕ್ಷ ಇಲ್ಲಿ ಕುಳಿತುಕೊಂಡು ನಿಮ್ಮ ಶಾಪದಿಂದ ನಿಮ್ಮ ನಡುವಳಿಕೆತನದಿಂದ ಈ ರಾಜ್ಯದ ಜನ ವಿರೋಧ ಪಕ್ಷಗಳ ಬಗ್ಗೆ ಇದ್ದಂತಹ ನಂಬಿಕೆಯನ್ನು ಹಾಳು ಮಾಡಿಕೊಂಡ ಪರಿಣಾಮದಿಂದ ನಮ್ಮನ್ನು ಹಾಳು ಮಾಡುವಂತಹ ಸ್ಥಿತಿಗೆ ತಂದಿರಿ. ಬದುಕಿರುವವವರೆಗೆ ನಾನು ರಾಜಕಾರಣದಲ್ಲಿ ಇರುವವರೆಗೆ ನಿಮ್ಮನ್ನು ನಂಬಿ ನಿಮ್ಮಷ್ಟೆ ಬೆಂಬಲ ಕೊಟ್ಟು ಜನಕ್ಕೆ ಒಳ್ಳೆಯ ಕೆಲಸ ಮಾಡಬಹುದು ತಿಳಿದು, ನಮಗೇನು ಇದರಿಂದ ಲಾಭವಾಗುತ್ತದೆ ಎಂದು ಅಲ್ಲ. 40–45ವರ್ಷ ಅಧಿಕಾರದಲ್ಲಿದ್ದಂತಹ ಕಾಂಗ್ರೆಸ್ಸಿನ ಸ್ನೇಹಿತರು ಮಾಡಬಾರದ್ದನ್ನು ಮಾಡಿ ದೇಶವನ್ನು ವಿನಾಶದತ್ತ ತೆಗೆದುಕೊಂಡು ಹೋದುದು ನೀವಾದರೂ ಒಳ್ಳೆಯ ಕೆಲಸ ಮಾಡಬಹುದೆಂದು ಜನ ನಂಬಿಕೊಂಡು, ಜಯಪ್ರಕಾಶ್ ನಾರಾಯಣ್‌ರವರ ಹೆಸರಿನಲ್ಲಿ ಅಧಿಕಾರಕ್ಕೆ ಬಂದು ನೀವು ಸಹ ದ್ರೋಹ ಮಾಡಿ ಈ ಸ್ಥಿತಿಗೆ ಬಂದಿರಲ್ಲಾ ಎಂದು ಜನ ಇವತ್ತು ನಿಮ್ಮ ಎಲ್ಲಿ ಇಟ್ಟಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಆ ದ್ರೋಹಿಗಳನ್ನು ನೀವು ಏಕೆ ಪಾರ್ಟಿಗೆ ಸೇರಿಕೊಳ್ಳುತ್ತಿದ್ದೀರಿ. ಸೇರಿಸಿಕೊಳ್ಳಬೇಕು. ತಿರುಗಿ ಅದೇ ಮಾತನಾಡುತ್ತೀರಿ. ನೀವು ಸತ್ಯಹರಿಶ್ಚಂದ್ರರ ಮೊಮ್ಮಕ್ಕಳು ಅಂತ ಮಾತನಾಡುತ್ತೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಈ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಯಾವ ರಾಜಕೀಯ ಪಕ್ಷ....

ಚೇರ್ಮನ್:– ಮಾನ್ಯ ಯಡಿಯೂರಪ್ಪನವರೇ ಇಲ್ಲಿಗೆ ಸಾಕು ಮಾಡಿ. ವಿಷಯಾಂತರವಾಗುತ್ತಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಈ ಸದನದ ಮೂಲಕ ನಾನು ಒಂದು ಕರೆಯನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ನಿಮ್ಮ ಕಾಂಗ್ರೆಸ್ಸಿನ ಸ್ನೇಹಿತರು ಯಾರು ಪ್ರಾಮಾಣಿಕರಿದ್ದಾರೆ, ಕಾಂಗ್ರೆಸ್ಸಿನ ತತ್ವ ನೀತಿ, ಸಿದ್ಧಾಂತವನ್ನು ಕಳೆದುಕೊಂಡಿದ್ದಾರೆ, ಜನತಾದಳದ ನಮ್ಮ ಸ್ನೇಹಿತರು ಏನು ನಂಬಿಕೆ ವಿಶ್ವಾಸವನ್ನು ಕಳೆದುಕೊಂಡಿದ್ದೀರಿ. ನಿಮಗೆ ಇರುವ ಜಾಗ ಒಂದೇ ಒಂದು ಭಾರತೀಯ ಪಾರ್ಟಿ ಇದನ್ನು ಮರೆಯಬೇಡಿ. ನಮ್ಮ ಜೊತೆಗೆ ಸೇರಿಸಿಕೊಳ್ಳುತ್ತೀರಿ ಅಂತ ಅಲ್ಲಿ ಬಂದು ಕೇಳುತ್ತೀರಾ ? ಇಲ್ಲಿ ಬಂದು ಏನೇನೋ ಮಾಡತ್ತೀರಿ ? ನಮಗೆ ಇವರನ್ನು ನೋಡಿ ಅಯ್ಯೋ ಪಾಪ ಅನ್ನಿಸುತ್ತದೆ.

ಚೇರ್ಮನ್:– ಮಾನ್ಯ ನಂಜಪ್ಪನವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ.

Dr. N.B. NANJAPPA:– You please follow the fundamental rules and regulations of this House.

ಶ್ರೀ ವಾಟಾಳ್ ನಾಗರಾಜ್:– ನಮ್ಮ ಇಂಗ್ಲೀಷ್ ನಂಜಪ್ಪನವರು ನನ್ನ ಒಂದು ನಿಮಿಷ ಕೇಳಬೇಕು.

ಚೇರ್ಮನ್:– ಅದೇನು ಹೇಳುತ್ತಾರೆ ಹೇಳಿಬಿಡಲಿ.

ಡಾ॥ ಎನ್. ಬಿ. ನಂಜಪ್ಪ:– ಮಾನ್ಯ ಅಧ್ಯಕ್ಷರೆ, ಅವರು 45 ವರ್ಷಗಳ ಕಾಲ, ಕಾಂಗ್ರೆಸ್ ಈ ದೇಶವನ್ನು ಹಾಳು ಮಾಡಿ ಸರ್ವನಾಶ ಮಾಡಿದೆ ಎನ್ನತಕ್ಕ ಮಾತನ್ನಾಡಿದ್ದಾರೆ. ನಾನು ಅವರಿಗೆ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವರ ಇತಿಹಾಸ ಏನು, ಇವರ ಚರಿತ್ರೆ ಏನು, ಇವರು 42 ವರ್ಷಗಳಲ್ಲಿ ಈ ದೇಶವನ್ನು ಯಾವ ಸ್ಥಿತಿಗೆ ತಂದಿಟ್ಟಿದ್ದಾರೆ. ಇವರಿಗೆ ಈ ದೇಶದ ಇಂಟರ್‌ಗ್ರಿಟಿ ಬಗ್ಗೆ ಈ ದೇಶಕ್ಕೆ ಕಷ್ಟಪಟ್ಟು ಸ್ವಾತಂತ್ರ್ಯವನ್ನು ಸಂಪಾದನೆ ಮಾಡಿದ ಬಗ್ಗೆ ಯೋಜನೆ ಮಾಡತಕ್ಕ ಯೋಗ್ಯತೆ ಇವರಿಗೆ ಇದೆಯೋ ? ಈ ದೇಶದ ಸರ್ವತೋಮುಖವಾದ ಅಭಿವೃದ್ಧಿಯನ್ನು ಸಾಧಿಸಿದಂತಹ ಈ ದೇಶಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟಂತಹ, ಒಂದು ಪಕ್ಷವನ್ನು ಸರ್ವ ನಾಶ ಮಾಡಿದ ಪಕ್ಷ ಎಂದು ಹೇಳುವುದಕ್ಕೆ ಯೋಗ್ಯತೆ ಅವರಿಗೆ ಇದೆಯೋ ? ಈ ದೇಶದಲ್ಲಿ ಜನಗಳನ್ನು ಮುಕ್ತ...

ಚೇರ್ಮನ್:– ಇದರೊಳಗೆ ಪಾಯಿಂಟ್ ಆಫ್ ಆರ್ಡರ್ ಏನು ?

ಶ್ರೀ ವಾಟಾಳ್ ನಾಗರಾಜ್:– ಇದರಲ್ಲಿ ಕ್ರಿಯಾನೂ ಇಲ್ಲ ಲೋಪನೂ ಇಲ್ಲ.

ಡಾ॥ ಎನ್. ಬಿ. ನಂಜಪ್ಪ:– ದೇಶದ ಸ್ವಾತಂತ್ರ್ಯಕ್ಕೆ ಇವರು ಗಂಡಾತರವನ್ನು ಮಾಡತಕ್ಕಂಥ ಇವರಿಗೆ ಈ ತರಹ ಮಾತನಾಡಬೇಕೇ ಇಲ್ಲಿ ಸದಾವಕಾಶ ಇದೆ ಎಂದು ಹೇಳಿ ಬಾಯಿಗೆ ಬಂದ ಹಾಗೆ ಹರಡತಕ್ಕಂಥದ್ದನ್ನು ಕೊನೆ ಮಾಡಬೇಕೆಂದು ನಾನು ಅಧ್ಯಕ್ಷರ ಮೂಲಕ, ರೆಸ್ಪಾನಿಬಿಲಿಟಿ ಇಡತಕ್ಕಂಥ ಒಂದು ಪಕ್ಷದ ರಾಜ್ಯದ ಅಧ್ಯಕ್ಷರಾಗಿತಕ್ಕಂಥ ಮಾನ್ಯ ಯಡಿಯೂರಪ್ಪನವರು ಇಂತಹ ಅಶ್ಲೀಲ ಪದಗಳನ್ನು ಈಗ ಜಾಗದಲ್ಲಿ ಹೇಳಬಾರದು.

ಚೇರ್ಮನ್:- ನಿಮಗೆ ಅವಕಾಶ ಇದೆ. ಮಾತನಾಡುವಾಗ ಉತ್ತರ ಕೊಡಬಹುದು. ಇದು ಪಾಯಿಂಟ್ ಆಫ್ ಆರ್ಡರ್ ಆಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಯಡಿಯೂರಪ್ಪನವರು...

ಚೇರ್ಮನ್:- ಪಾಯಿಂಟ್ ಆಫ್ ಇದೆಯೇ?

ಶ್ರೀ ವಾಟಾಳ್ ನಾಗರಾಜ್:- ನಾನು ಪಾಯಿಂಟ್ ಆಫ್ ಆರ್ಡರ್ ಎಂದು ಹೇಳುವುದಿಲ್ಲ.

ಚೇರ್ಮನ್:- ಅವರಿಗೆ ಉತ್ತರ ಹೇಗೆ ಕೊಡುತ್ತೀರಿ?

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಯಡಿಯೂರಪ್ಪನವರು ಕುಳಿತಿದ್ದಾರೆ.

ಶ್ರೀ ಪಿ.ಜಿ. ಸಿಂಧ್ಯ:- ಮಾನ್ಯ ಯಡಿಯೂರಪ್ಪನವರಿಗೆ ಏನಾಗಿದೆ ಎಂದರೆ ಅವರು ರಾಜ್ಯಪಾಲರ ಭಾಷಣದ ಬಗ್ಗೆ ಮಾತನಾಡುವುದಕ್ಕೆ ಪ್ರಿಪೇರ್ ಆಗಿ ಬಂದಿರಲಿಲ್ಲ. ಅದರಿಂದ ಕಾಂಗ್ರೆಸ್ ಜನತಾ ದಳದ ಬಗ್ಗೆ ವಿಶ್ಲೇಷಣೆ ಮಾಡುತ್ತಾ ಕುಳಿತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ಅದೊಂದು ಸತ್ಯ ಅದು ಇರಲಿ. ಇಷ್ಟೊಂದು ಮಾನ್ಯ ಯಡಿಯೂರಪ್ಪನವರ ಮಾತನ್ನು ಕೇಳಿದ್ದೆವು. ಅವರು ಬಹಳ ಬುದ್ಧಿವಂತರು. ಇಷ್ಟೊಂದು ಜನರನ್ನು ಅವರು ಎದ್ದು ಎದ್ದು ಕೂರಿಸಿ ಮಾಡಿದ್ದಾರೆ. ನೀವು ಯಾರಾದರೂ ಅವರನ್ನು ತಪ್ಪು ತಿಳಿದುಕೊಂಡರೆ ತಪ್ಪಾಗುತ್ತದೆ. ಇಡೀ ಸದನವನ್ನೇ ಎದ್ದು ಕೂರಿಸಿ ಸರ್ಕಸ್ ಮಾಡಿದ್ದಾರೆ. ನಾನು ತಮಗೆ ಏನು ಹೇಳುತ್ತಿರ್ದೇನೆಂದರೆ ಅವರು ಒಂದು ಮಾತನ್ನು ಈಗ ಹೇಳಿದರು.

ಅಂದರೆ, ಯಡಿಯೂರಪ್ಪನವರ ಪಕ್ಷಕ್ಕೆ ಆ ಕಡೆಯ ಕೆಲವರು ಸೇರತಕ್ಕಂಥ ಸುದ್ದಿ ಇದೆ, ಮತ್ತು ಇವರೂ ಸಹ ಅವರ ಕಡೆಯವರನ್ನು ತಮ್ಮ ಕಡೆಗೆ ಎಳೆಯತಕ್ಕಂಥ ಸುದ್ದಿ ಕೂಡ ಇದೆ. ಅಂದ ಮೇಲೆ ಈ ಪಕ್ಷ ಸರಿಯಲ್ಲವೆಂದು ಮತ್ತೆ ಆ ಪಕ್ಷದವರ ಜೊತೆ ಒಳಗೊಳಗೆ ಒಂದು ಸಂಧಾನ ನಡೆದಿದ್ದರೆ ಆ ವಿಷಯ ಈ ಬಹಿರಂಗವಾಗಿ ಸದನದಲ್ಲಿ ರಾಜ್ಯದ ಜನತೆಗೆ ಗೊತ್ತಾಗಲಿ. ಯಡಿಯೂರಪ್ಪನವರ ಹತ್ತಿರ ಯಾರ್ಯಾರೂ ಮಾತನಾಡುವುದಕ್ಕೆ ಬಂದಿದ್ದರು? ಎಂಬುದನ್ನು ಸ್ಪಷ್ಟಪಡಿಸಬೇಕು. ಅದನ್ನು ಬಿಟ್ಟು ಸುಮ್ಮನೆ ಒಂದು ಚಿತ್ರ ಇಟ್ಟು ಒಳಗೇನೋ ಇದೆ, ತೋರಿಸುತ್ತೇವೆ ನೋಡಿ ಎಂದು ಮಾಡುವುದು ಬೇಡ. ನಮ್ಮ ಹಳ್ಳಿಗಳ ಕಡೆ ಒಂದು ಹಬ್ಬದೊಳಗೆ ಚಿತ್ರಗಳನ್ನು ತೋರಿಸುತ್ತಾ, ತಾಜ್‌ಮಹಲ್ ನೋಡು, ರಾಜನ ಅರಮನೆ ನೋಡು ಎಂದು ತೋರಿಸುತ್ತಾರೆ. ಹಾಗೆ ನನಗೆ ಯಡಿಯೂರಪ್ಪನವರ ಬಗ್ಗೆ.....

ಚೇರ್ಮನ್:- ಸ್ವಲ್ಪ ಲಘುವಾಗಿ ಮಾತನಾಡಿ ಸದಸ್ಯರು ತಮ್ಮ ಬೇಜಾರು ಕಳೆದುಕೊಳ್ಳಲಿ ಎಂದು ಮಾತನಾಡುವುದಕ್ಕೆ ಅವಕಾಶ ಕೊಟ್ಟರೆ ಸದನದ ಉದ್ದೇಶವನ್ನು ಎಲ್ಲಿಗೋ ಎತ್ತಿಕೊಂಡು ಹೋಗುತ್ತಿದ್ದೀರಲ್ಲಾ. ಆದುದರಿಂದ, ಸದನದ ಘನತೆ-ಗೌರವವನ್ನು ಕಾಪಾಡಿಕೊಂಡು ಹೋಗುವಂಥ ಪರಿಸ್ಥಿತಿ ನಿರ್ಮಾಣವಾಗಲಿ. ಮತ್ತು ವಿಷಯಕ್ಕೆ ಬಂದರೆ ಒಳ್ಳೆಯದು. ಏಕೆಂದರೆ, ಸದನದಲ್ಲಿ ಪಾರ್ಟಿಗಳ ಪ್ರಣಾಳಿಕೆಗಳ ಬಗ್ಗೆ ಚರ್ಚೆ ಮಾಡುತ್ತಿಲ್ಲ. ತಾವು ಮಾತನಾಡುವಾಗ ನೀವು ಅವರಿಗೆ ಪ್ರಶ್ನೆ ಕೇಳುವುದು, ಅದಕ್ಕೆ ಅವರು ಉತ್ತರ ಕೊಡುವುದು ಸರಿಯಲ್ಲ.

ಶ್ರೀ ವಾಟಾಳ್ ನಾಗರಾಜ್:- ತಾವು ಹೇಳಿದಂತೆ ಇದು ಬೇಜಾರು ಕಳೆಯುವಂಥ ಸಭೆಯಾಗಬಾರದು. ಇದು ಗುಪ್ತವಾದಂಥ ಸಭೆಯೂ ಅಲ್ಲ. ಈ ರೀತಿ ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಡೆದಿದೆ, ಆದುದರಿಂದ, ಇಂತಹ ಮಾತುಗಳು ಬಂದೇ ಬರುತ್ತವೆ. ಆದರೆ, ಸುದೀರ್ಘವಾಗಿ ಈ ಮಾತುಗಳೇ ಚರ್ಚೆಯಾಗಬಾರದು ಎನ್ನತಕ್ಕಂಥಾದ್ದು ತಮ್ಮ ಅಭಿಲಾಷೆ. ಇದರ ಬಗ್ಗೆ ಚರ್ಚೆಯಾದರೆ

ನಿಜವಾಗಿಯೂ ಅರ್ಥಪೂರ್ಣವಾಗಿ ನಡೆಯಬೇಕು. ಅದಕ್ಕೋಸ್ಕರ ಈ ಸದನವಿದೆ. ಸುಮ್ಮನೆ ಒಳಗಡೆ ನಾಲ್ಕು ಜನರು ಕುಳಿತುಕೊಂಡು ಮಾಡತಕ್ಕಂಥ ಸಭೆ ಇದಲ್ಲ.

ಶ್ರೀ ಆರ್.ವಿ. ದೇಶಪಾಂಡೆ:– ನಾನು ಪಾಯಿಂಟ್ ಆಫ್ ಆರ್ಡರ್ ಎತ್ತುತ್ತಿದ್ದೇನೆ. ಈಗ ಮಾನ್ಯ ಸದಸ್ಯರಾದ ಶ್ರೀಮಾನ್ ಯಡಿಯೂರಪ್ಪನವರು ತಮ್ಮ ಭಾಷಣ ಮಾಡುತ್ತಿದ್ದಾರೆ, ಅವರ ವಿಚಾರಗಳನ್ನು ಹೇಳುತ್ತಿದ್ದಾರೆ. ಆದರೆ, ಇದರ ಬಗ್ಗೆ ಸರ್ಕಾರದಲ್ಲಿ ಯಾವುದೇ ರೀತಿಯಾದಂಥ ಗಾಂಭೀರ್ಯವಿದ್ದಂತೆ ಕಾಣಿಸುವುದಿಲ್ಲ. ಏಕೆಂದರೆ, ಈಗ ಸದನದಲ್ಲಿ ಮಂತ್ರಿಗಳಿಲ್ಲ. ಮಾನ್ಯ ಸಚಿವರಾದ ಮಲ್ಲಿಕಾರ್ಜುನ ಖರ್ಗೆಯವರು ಕುಳಿತಿದ್ದಾರೆ. ಹಾರನಹಳ್ಳಿ ರಾಮಸ್ವಾಮಿಯವರು ಕುಳಿತಿದ್ದಾರೆ. ಹಾಗಾಗಿ ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆ, ಇದನ್ನು ಯಾರೂ ಬರೆದುಕೊಳ್ಳುತ್ತಿಲ್ಲ. ಅಷ್ಟೇ ಅಲ್ಲ, ಇವೊತ್ತಿನ ಪತ್ರಿಕೆಯಲ್ಲಿ ಓದಿರುವಂತೆ ಯುವಜನ ಖಾತೆ ಮಂತ್ರಿಗಳಾದ ಡಾ।। ಪ್ರೇಮಚಂದ್ರ ಸಾಗರ್‌ರವರು ರಾಜೀನಾಮೆ ಕೊಟ್ಟಿದ್ದಾರೆಂದು ಸುದ್ದಿ ಇದೆ. ಇಲ್ಲಿ ಶಾಸನ ಸಭೆ ನಡೆಯುತ್ತಿದೆ, ಇಂತಹ ಪರಿಸ್ಥಿತಿಯಲ್ಲಿ ಒಬ್ಬ ಮಂತ್ರಿಗಳು ರಾಜೀನಾಮೆ ಕೊಟ್ಟಿದ್ದರೆ ಸದನದಲ್ಲಿ ಮಂತ್ರಿಗಳಿಲ್ಲ, ಮುಖ್ಯಮಂತ್ರಿಗಳಿಲ್ಲ, ಶಾಸಕರಿಲ್ಲ. ಈ ವಿಷಯ ನಮಗೆ ಗೊತ್ತಾಗಬೇಕಾಗುತ್ತದೆ. ಕಾಂಗ್ರೆಸ್ ಪಕ್ಷದಲ್ಲಿ ಕಚ್ಚಾಟ ನಡೆಯುತ್ತಿದೆ. ಸಧ್ಯಕ್ಕೆ ನಿಮ್ಮ ಕಚ್ಚಾಟ ಅಶೋಕ ಹೋಟೆಲಿನಲ್ಲಿ ಡಿನ್ನರ್, ಲಂಚ್‌ವರೆಗೂ ಹೋಗಿದೆ. ಮಂತ್ರಿಗಳು ರಾಜೀನಾಮೆ ಕೊಟ್ಟಿರುವುದರಿಂದ ಒಂದು ವಿಷಯ ಸ್ಪಷ್ಟವಾಗಿದೆ. ಏನೆಂದರೆ, ಇವೊತ್ತಿನ ಆಡಳಿತದಲ್ಲಿ ಯಾವುದೂ ಹಿಡಿತ ಉಳಿದಿಲ್ಲ, ನಮ್ಮ ಪಕ್ಷದಲ್ಲಿ ವಿಶ್ವಾಸವಿಲ್ಲದೆ ಗುಂಪುಗಾರಿಕೆ ಬೆಳೆಯುತ್ತಿದೆ. ಅಲ್ಲದೆ, ಮಂತ್ರಿಗಳ ರಾಜೀನಾಮೆ ಕೇಳುವಲ್ಲಿ ಮಂತ್ರಿಮಂಡಲದ ಕೆಲವು ಸದಸ್ಯರು ಒತ್ತಾಯ ಮಾಡಿದ್ದಾರೆಂದು ಸುದ್ದಿಯಿದೆ ಮತ್ತು ಇನ್ನೂ ಕೆಲವು ಜನ ಮಂತ್ರಿಗಳು ತಮ್ಮ ರಾಜೀನಾಮೆ ಕೊಡುವ ಸುದ್ಧಿ ನಮಗೆ ಬಂದಿದೆ. ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಇದರ ಬಗ್ಗೆ ಬಂದು ಸ್ಪಷ್ಟೀಕರಣ ನೀಡಬೇಕಾಗುತ್ತದೆ. ಮಂತ್ರಿಗಳು ರಾಜೀನಾಮೆ ಕೊಟ್ಟಿದ್ದಾರೆಯೆ ? ರಾಜೀನಾಮೆ ಕೊಟ್ಟಿದ್ದರೆ ಏತಕ್ಕೆ ಕೊಟ್ಟರು ? ಅವರ ರಾಜೀನಾಮೆಯನ್ನು ತಾವು ಅಂಗೀಕರಿಸಿದ್ದೀರಾ ? ಇಲ್ಲವೆ ? ಎಂಬುದು ಸಹ ನಮಗೆ ಗೊತ್ತಾಗಬೇಕು. ಆದುದರಿಂದ, ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇದರ ಬಗ್ಗೆ ಯಾವುದೇ ತರಹದ ಸ್ಪಷ್ಟೀಕರಣವನ್ನು ಸರ್ಕಾರ ಕೊಡುವುದಿಲ್ಲವೋ, ಅಲ್ಲಿಯ ತನಕ ಸದನದಲ್ಲಿ ನಡೆಯುವ ಚರ್ಚೆ ನಿಲ್ಲಿಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಈಗ ರಾಜ್ಯಪಾಲರ ಭಾಷಣದ ಬಗ್ಗೆ, ವಂದನಾ ನಿರ್ಣಯವನ್ನು ಸ್ವೀಕಾರ ಮಾಡತಕ್ಕಂಥ ಚರ್ಚೆಯನ್ನು ಮಾಡುತ್ತಿದ್ದೇವೆ. ಈ ವಂದನೆಯನ್ನು ಮಾಡುವಾಗ ಸರ್ಕಾರ ಎನ್ನತಕ್ಕಂಥ ಒಂದು ವ್ಯವಸ್ಥೆ ಇದಕ್ಕೆ ನಿರ್ಣಯವನ್ನು ಮಂಡಿಸಿದ್ದಾರೆ. ಈಗ ಸರ್ಕಾರವಿದೆಯೋ ಅಥವಾ ಇಲ್ಲವೋ, ಅದು ಸ್ಥಿರವಾಗಿದೆಯೇ ನಮ್ಮ ಆಡಳಿತವು ವಿಧಾನ ಮಂಡಲದಿಂದ ನಡೆಯತಕ್ಕಂಥ ಸಂದರ್ಭದಲ್ಲಿ, ಅದರ ಪರಿಣಾಮದಿಂದ ಇದರ ಮೇಲೆ ಇವತ್ತು ಏನು ಹೇಳುತ್ತೇನೆಂದರೆ ಯುವಜನ ಸೇವಾ ಇಲಾಖೆಯ ಮಂತ್ರಿಗಳಾಗಿದ್ದ ಪ್ರೇಮಚಂದ್ರ ಸಾಗರ್‌ರವರು ರಾಜೀನಾಮೆಯನ್ನು ಕೊಟ್ಟಿದ್ದಾರೆ, ಅದು ಪತ್ರಿಕೆಗಳಲ್ಲಿ ಸೂತ್ರ ಬಂದಿರತಕ್ಕಲ್ಲ, ಅವರ ಇಲಾಖೆಗೆ ಬಜೆಟಿನಲ್ಲಿ ಸಾಕಷ್ಟು ಹಣವನ್ನು ಕೊಡಲಿಲ್ಲ, ಅವರನ್ನು ಬಜೆಟಿನಲ್ಲಿ ಮಾತಿಗೆ ಕರೆಯಲಿಲ್ಲವೆನ್ನತಕ್ಕ ಕಾರಣದಿಂದಾಗಿ ಅವರು ರಾಜೀನಾಮೆಯನ್ನು ಕೊಟ್ಟರು ಎನ್ನುವುದು ಒಂದು. ಪ್ರೇಮಚಂದ್ರ ಸಾಗರ್‌ರವರು ರಾಜ್ಯ ಮಂತ್ರಿಗಳು. ಆದರೆ ಕ್ಯಾಬಿನೇಟ್‌ನ ಕೆಲವು ಮಂತ್ರಿಗಳು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ನಮ್ಮ ಇಲಾಖೆಗೆ ನೀವು ಸರಿಯಾಗಿ ಹಣವನ್ನು ಕೊಟ್ಟಿಲ್ಲ ಆದ್ದರಿಂದ ನಾವೂ ಕೂಡ ರಾಜೀನಾಮೆಯನ್ನು ಕೊಡಬೇಕಾಗುತ್ತದೆ ಎನ್ನತಕ್ಕದನ್ನೂ ಸಹ ಹೇಳಿದ್ದಾರೆಂದು ನನಗೆ ಖಚಿತವಾಗಿ ತಿಳಿದು ಬಂದಿದೆ. ಇದರಿಂದ ಏನಾಗುತ್ತದೆಂದರೆ ಸರ್ಕಾರ ಆಡಳಿತದ ಯಂತ್ರದ ಮೇಲೆ ಬಹಳ ಕೆಟ್ಟ ಪರಿಣಾಮವಾಗುತ್ತದೆ. ದಯಮಾಡಿ ಪ್ರೇಮ ಚಂದ್ರಸಾಗರ್‌ರವರು ರಾಜೀನಾಮೆಯನ್ನು ಕೊಟ್ಟಿಲ್ಲ,

ಅವರ ರಾಜೀನಾಮೆಯನ್ನು ರಾಜ್ಯಪಾಲರಿಗೆ ಕಳಿಸುವುದಿಲ್ಲ ಎನ್ನತಕ್ಕ ಬಗ್ಗೆ ಇಲ್ಲಿ ಸ್ಪಷ್ಟವಾಗಿ, ಖಚಿತವಾಗಿ ಹೇಳಬೇಕು. ಅಥವಾ ಸಂಬಂಧಪಟ್ಟ ಬೇರೆ ಮಂತ್ರಗಳು ರಾಜೀನಾಮೆ ಕೊಟ್ಟಿಲ್ಲ ಎನ್ನತಕ್ಕ ವಿಷಯವನ್ನು ತಿಳಿಸಿದಾಗ ನಮಗಿಂತಲೂ ನಿಮಗೆ ಹೆಚ್ಚಾಗಿ ಅನುಕೂಲವಾಗುತ್ತದೆ. ಮತ್ತು ಆಡಳಿತ ಯಂತ್ರದ ಮೇಲೆ ಆಗತಕ್ಕಂಥ ದುಷ್ಪರಿಣಾಮ ಕಡಿಮೆಯಾಗುತ್ತದೆ. ಪಾಪ ಮಾನ್ಯ ರಾಮಸ್ವಾಮಿಯವರ ಮೇಲೆ ನನಗೆ ಬಹಳ ಗೌರವವಿದೆ, ಒಳ್ಳೆಯ ಜನ, ಬಹಳ ಚೆನ್ನಾಗಿ ಉತ್ತರ ಕೊಡುತ್ತಾರೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಇಲ್ಲಿ ಪ್ರಶ್ನೆ ಏನೆಂದರೆ ಇಲ್ಲಿ ಅದಕ್ಕೆ ಹಾರನಳ್ಳಿ ರಾಮಸ್ವಾಮಿಯವರು ಉತ್ತರವನ್ನು ಕೊಡುವುದಲ್ಲ, ಅವರು ಈ ಸಭೆಗೆ ಬಂದು ಉತ್ತರವನ್ನು ಕೊಡಬೇಕಾಗುತ್ತದೆ. ಅಥವಾ ರಾಜಕೀಯವಾಗಿ ನನಗೆ ಸ್ಥಿರತೆ ಇದೆ, ನಾನು ಗಟ್ಟಿಯಾದ ನೆಲದ ಮೇಲೆ ನಿಂತುಕೊಂಡಿದ್ದೇನೆ, ಎಂ.ಎಲ್.ಎಗಳಲ್ಲಿ ಗುಂಪುಗಾರಿಕೆ ಇಲ್ಲ, ನನಗೆ ಬಹುಮತವಿದೆ, ಸಪೋರ್ಟ್ ಇದೆ, ಎನ್ನತಕ್ಕದ್ದನ್ನು ಸಾಧಿಸುವುದಾದರೆ You must sack the Minister.

ಮಂತ್ರಿಮಂಡಲದಿಂದ ತೆಗೆಯಬೇಕು. ಮತ್ತೆ ನಾನು ವಿಧಾನಸಭೆಯಲ್ಲಿ ಇನ್ನೊಂದು ಹೆಜ್ಜೆ ಮುಂದಕ್ಕೆ ಹೋಗಿ ಹೇಳುತ್ತೇನೆ, ಅದೇನೆಂದರೆ ಅಶೋಕ ಹೊಟೆಲ್‌ನಲ್ಲಿ ನಡೆಯತಕ್ಕ ಸಭೆ ಇರಬಹುದು, ಹೊರಗೆ ನಡೆಯತಕ್ಕಂಥ ಸಭೆ ಇರಬಹುದು. ಮುಖ್ಯಮಂತ್ರಿಗಳು ಈ ಸದನದಲ್ಲಿ ತಮಗಿರುವ ವಿಶ್ವಾಸವನ್ನು ವ್ಯಕ್ತಮಾಡತಕ್ಕಂಥ ಕೆಲಸವನ್ನು ಮಾಡಬೇಕು. ಇವತ್ತು ನಾನು ಹೇಳುತ್ತಿದ್ದೇನೆ. ಆ ಕಡೆ ಕುಳಿತಿರತಕ್ಕ ಸದಸ್ಯರಿಂದ ನಿಮಗೆ ಬಹುಮತವಿಲ್ಲ, ತಮಗೆ ಬಹುಮತವಿದ್ದರೆ ಸ್ಪಷ್ಟವಾಗಿ ಅದನ್ನು ಸಾಬೀತುಪಡಿಸಿ, ಇವತ್ತು ಸರ್ಕಾರ ನಡೆಯುತ್ತಿಲ್ಲ, ಸರ್ಕಾರಿ ಅಧಿಕಾರಿಗಳು ನಿಮ್ಮ ಮಾತನ್ನು ಕೇಳುತ್ತಿಲ್ಲ, ವಿರೋಧ ಪಕ್ಷದ ನಾಯಕರು ಭಾಷಣ ಮಾಡುತ್ತಾರೆಂದರೆ ಒಬ್ಬ ಸರ್ಕಾರಿ ಅಧಿಕಾರಿಯೂ ಕೂಡ ಅದಕ್ಕೋಸ್ಕರ ಬರುವುದಿಲ್ಲ, ಫ್ಲೋರ್ ಲೀಡರ್ ಮಾತನಾಡುತ್ತಾರೆಂದರೆ ಯಾರೂ ಬರುವುದಿಲ್ಲ, ಇದು ಸರಿಯೋ ಅಥವಾ ತಪ್ಪೋ, ಮಾನ್ಯ ಯಡಿಯೂರಪ್ಪನವರು ಒಬ್ಬ ಪ್ರಮುಖವಾದ ನಾಯಕರು ಅವರು ಹೇಳಿದಂತೆ ಅವರಿಗೆ 28 ಪರ್ಸೆಂಟ್ ಓಟು ಬಂದಿದೆ. ಅವರು ಮಾತನಾಡುತ್ತಾರೆಂದರೆ ಒಬ್ಬ ಅಧಿಕಾರಿ ಇರುತ್ತಾರೆಯೇ ? ಪಾಪ ಅಧಿಕಾರಿಗಳು ಒಳ್ಳೆಯವರು, ನಾವು ಕೂಡ ಅವರನ್ನು ಇಟ್ಟುಕೊಂಡೇ, ಅವಲಂಬನೆ ಮಾಡಿಕೊಂಡೆ ಆಳ್ವಿಕೆಯನ್ನು ಮಾಡತಕ್ಕದ್ದು. ಆದರೆ ನಿಮ್ಮ ಮಾತಿಗೆ ಬೆಲೆ ಇಲ್ಲ ಅವರ ಹತ್ತಿರ. ಮಾನ್ಯ ಅಧ್ಯಕ್ಷರೆ ತಾವು ಅನುಭವಸ್ಥರು. ತಾವು ಹಲವಾರು ವರ್ಷಗಳ ಕಾಲ ಶಾಸಕರಾಗಿ ಕೆಲಸ ಮಾಡಿದ್ದೀರಿ, ವಿರೋಧ ಪಕ್ಷದಲ್ಲಿ ಇದ್ದೀರಿ ನೀವು ನಮಗೆ ಬೆಂಬಲವನ್ನು ನೀಡಬೇಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಶ್ರೀಮಾನ್ ಸಿಂಧ್ಯರವರು ಹೇಳಿರತಕ್ಕದ್ದು ನಿಜ, ಆ ಕಡೆ ಇರುವವರು ಅದು ಸತ್ಯವೆಂದು ಒಪ್ಪಿಕೊಳ್ಳುತ್ತಿದ್ದಾರೆ.

(ಗೊಂದಲ)

ಚೇರ್ಮನ್:- ಯಡಿಯೂರಪ್ಪನವರೆ ದಯಮಾಡಿ ಕುಳಿತುಕೊಳ್ಳಿ, ಅವರು ಮಾತನಾಡಿದ ಮೇಲೆ ಇದರ ಬಗ್ಗೆ ತಾವು ಮಾತನಾಡುವಿರಂತೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ನಿಮ್ಮ ಸರ್ಕಾರಕ್ಕೆ ಸ್ಥಿರತೆ ಇದೆ ಎಂದು ಹೇಳಬೇಕಾದರೆ ಈ ರೀತಿ ಊಹಾಪೋಹಗಳಿಗೆ, ಪ್ರಕಾರಗಳಿಗೆ ಅವಕಾಶವನ್ನು ಮಾಡಿ ಕೊಡಬೇಡಿ. ರಾಜಕೀಯವಾಗಿ ನಮಗೆ ತಾಕತ್ತು ಇದ್ದರೆ ರಾಜೀನಾಮೆಯನ್ನು ಕೊಟ್ಟ ಮಂತ್ರಿಯನ್ನು ತೆಗೆದುಹಾಕಿ, ಅಥವಾ ಅವರಿಗೆ ಬೆಣ್ಣೆ ಹೊಡೆದು ಇಟ್ಟುಕೊಳ್ಳಿ. ನಾನು ಇದರ ಬಗ್ಗೆ ನೇರವಾಗಿ ಆಪಾದನೆಯನ್ನು ಮಾಡುತ್ತಿದ್ದೇನೆ. ಮುಖ್ಯಮಂತ್ರಿಗಳಲ್ಲಿ ಕಾಂಗ್ರೆಸ್ ಪಕ್ಷದಲ್ಲಿ ವಿಶ್ವಾಸವಿಲ್ಲ ಎನ್ನತಕ್ಕ ಮಾತನ್ನು ಹೇಳುತ್ತೇನೆ. ತಮಗೇನಾದರೂ ವಿಶ್ವಾಸವಿದ್ದರೆ ಅದನ್ನು ತೆಗೆದುಕೊಳ್ಳಿ.

ಚೇರ್ಮನ್:– ಮಾನ್ಯ ಯಡಿಯೂರಪ್ಪನವರೆ ದಯಮಾಡಿ ಕುಳಿತುಕೊಳ್ಳಿ ಅವರು ಹೇಳಿದ ಮೇಲೆ ಕೇಳುವಿರಂತೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಹಾರನಹಳ್ಳಿ ರಾಮಸ್ವಾಮಿಯವರು ಇದಕ್ಕೆ ಉತ್ತರ ಕೊಡುವುದೆಂದರೆ ಯಾವ ವಿಪರ್ಯಾಸ ಅಧ್ಯಕ್ಷರೆ, ಮುಖ್ಯಮಂತ್ರಿಗಳು ಉತ್ತರ ಕೊಡುವುದಕ್ಕೆ ಸಂಜೆಯೊಳಗೆ ಕರೆಯಿಸಿ.

ಶ್ರೀ ವಾಟಾಳ್ ನಾಗರಾಜ್:– ಅಧ್ಯಕ್ಷರೆ, ಹೊಸದಾಗಿ ಮಂತ್ರಿಮಂಡಲ ಬಂದನಂತರ ಯಾರ್‍ಯಾರು ಮಂತ್ರಿಗಳಾಗಿದ್ದಾರೆ, ಸಚಿವ ಸಂಪುಟದ ಮಂತ್ರಿಗಳಾರು ಎಂಬ ಬಗ್ಗೆ ಈ ಸಭೆಯಲ್ಲಿ, ಈ ಸದನದಲ್ಲಿ ನಮಗೆ ಪರಿಚಯವನ್ನು ಮಾಡಿಸಬೇಕಾಗಿರತಕ್ಕದ್ದು ಒಂದು ಸಂಪ್ರದಾಯ. ಆದರೆ ಅದು ಆಗಿಲ್ಲ. ನಮಗೆ ಇವತ್ತು ಯಾರು ರಾಜೀನಾಮೆ ಕೊಟ್ಟರೋ, ಯಾರು ಮಂತ್ರಿಗಳೋ, ಯಾರೋ, ಏನೋ ಎಂಬ ಬಗ್ಗೆ ಗೊತ್ತಾಗುತ್ತಿಲ್ಲ. ನಾವು ದಿಕ್ಕು ತಪ್ಪಿದ್ದೇವೆ. ನಾನು ಅನೇಕ ಸಾರಿ ಅವರು ಯಾವ ಮಂತ್ರಿ ಇವರು ಯಾವ ಮಂತ್ರಿ ಎಂದು ಕೇಳುತ್ತಿದ್ದೇವೆ.

5.40 ಪಿ.ಎಂ.

ಶ್ರೀ ಕಾಗೋಡು ತಿಮ್ಮಪ್ಪ:– ಈ ಪ್ರಶ್ನೆಯನ್ನು ಎತ್ತುವುದು ಯಾವಾಗ ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೇ ತಮ್ಮ ಮೂಲಕ ನಾನು ಕೇಳಿಕೊಳ್ಳುವುದೇನೆಂದರೆ, ನಾನು ನಿನ್ನೆಯಿಂದಲೂ ಎಚ್ಚರದಿಂದ ನೋಡುತ್ತಾ ಇದ್ದೇನೆ. 41 ಜನ ಸಚಿವರು ಎಂದು ಕೆಲವರು ಹೇಳಿದರೆ, ಕೆಲವರು 35 ಜನರು ಎಂದು ಹೇಳಿದರು. ನನಗಂತೂ ಈ ಮಂತ್ರಿಗಳ ಸಂಖ್ಯೆ ಬಗ್ಗೆ ನಂಬಿಕೆ ಹೋಗಿಬಿಟ್ಟಿದೆ. 41–45 ಎಂಬ ಬಗ್ಗೆ ಸಂಶಯ ಬಂದಿದೆ ಮತ್ತು ಈ ಮಂತ್ರಿಗಳು ಯಾರು ? ಎಂಬ ಪ್ರಶ್ನೆಯೂ ಇಲ್ಲ. ಪತ್ರಿಕೆಯಲ್ಲಿ ಒಬ್ಬ ರಾಜ್ಯಸಚಿವರು ರಾಜೀನಾಮೆ ಕೊಟ್ಟಿದ್ದಾರೆ ಎಂದು ಬಂದಿದೆ. ಅವರು ಮಂತ್ರಿಗಳಾಗಿ ಈ ಸದನದಲ್ಲಿ ಇದ್ದರೋ ? ಈ ಸದನದಲ್ಲಿ ಮುಖ್ಯಮಂತ್ರಿಗಳು ಇಂಥವರು ನಮ್ಮ ಸಚಿವ ಸಂಪುಟದ ಸದಸ್ಯರ ಎಂದು ಹೇಳಬೇಕು. ಈಗ ಗಂಭೀರವಾದಂಥ ಒಂದು ಪರಿಸ್ಥಿತಿಯು ನಿರ್ಮಾಣವಾಗಿದೆ. ಹಾಗೆಯೇ ಅತೃಪ್ತರ ಚಟುವಟಿಕೆಗಳು ಜಾಸ್ತಿಯಾಗಿವೆ ಎಂದು ಹೇಳಿ, ಪತ್ರಿಕೆಗಳಲ್ಲಿ ಬಂದಿದೆ, ಎಲ್ಲಾ ಹೋಟೆಲ್‌ಗಳಲ್ಲಿ ಸದಸ್ಯರು ಸೇರುತ್ತಾ ಇದ್ದಾರೆ, ಹಾಗಾದರೆ ರಾಜ್ಯದಲ್ಲಿ ಆಡಳಿತವು ಸುಗಮವಾಗಿದೆಯೇ ಆಡಳಿತವು ಕುಸಿದು ಬೀಳುತ್ತಾ ಇದೆಯೇ ? ಮೊನ್ನೆ ರಾಜ್ಯಪಾಲರ ಭಾಷಣವಾಗಿದೆ, ಈಗ ತಾನೆ ಹೊಸ ಸರಕಾರದ ಆಯವ್ಯಯ ಮಂಡನೆಯಾಗಿದೆ. ಮೊದಲನೆಯ ಬಾರಿಗೆ ಒಬ್ಬ ರಾಜ್ಯಸಚಿವರು ರಾಜೀನಾಮೆ ಕೊಡತಕ್ಕಂಥ ಪರಿಸ್ಥಿತಿಗೆ ಹೋಗಬೇಕಾದರೆ, ಈ ರೀತಿಯಲ್ಲಿ ಹೆಜ್ಜೆ ಹೆಜ್ಜೆಗೂ ಮುನಿಸಿಕೊಂಡು ರಾಜೀನಾಮೆ ಕೊಡತಕ್ಕಂಥವರನ್ನು ಅವರ ಚಾರಿತ್ರ್ಯ ಮತ್ತು ಹಿನ್ನೆಲೆಗಳನ್ನು ನೋಡಿ, ಅಂಥವರನ್ನು ಸಚಿವರಾಗಿ ಮಾಡಬೇಕೇ ? ಇದನ್ನು ಬಿಟ್ಟು ದಿನಕ್ಕೆ ಒಬ್ಬ ಹೇಳಿಕೆ ಕೊಡತಕ್ಕಂಥಾದ್ದು, ರಾಜೀನಾಮೆ ಕೊಡತಕ್ಕಂಥಾದ್ದು, ಈ ಸದನಕ್ಕೆ ಬಾರದೆ ಇರತಕ್ಕಂಥಾದ್ದು ಇದೇಕೆ ಮಂತ್ರಿಮಂಡಲ ಎಂದು ಹೇಳುತ್ತಾರೆಯೇ ? 40 ಜನರಲ್ಲಿ ಒಬ್ಬರು ಹೋದರೂ ಅಡ್ಡಿ ಇಲ್ಲ. ನಿಮ್ಮಲ್ಲಿ ಒಬ್ಬ ಕಣಗಲಿ ಎಂದು ಮಂತ್ರಿ ಇದ್ದಾರೆ. ಅವರು ಯಾರು ಸ್ವಾಮಿ ? ನಮಗೆ ಗೊತ್ತಿಲ್ಲ. ನಾನು ಅವರ ಬಗ್ಗೆ ಗೌರವ ಇಟ್ಟುಕೊಂಡಿದ್ದೇನೆ. ನಾನು ಮೊನ್ನೆ ಗಡಿ ಇಲಾಖೆಗೆ ಸಂಬಂಧಪಟ್ಟಂಥ ಸಚಿವರು ಯಾರು ಎಂದು ಹೇಳಿ, ಪತ್ತೆ ಹಚ್ಚಲು ಮೂರು ದಿನಗಳ ಬೇಕಾಯಿತು.

ಅಧ್ಯಕ್ಷರು:– ಈ ವಿಷಯಗಳೆಲ್ಲವೂ ಪತ್ರಿಕೆಯಲ್ಲಿ ಬಂದಿವೆ. ವಿಧಾನಸೌಧದಲ್ಲಿ ಬೋರ್ಡ್ ಹಾಕಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ಸ್ವಾಮಿ ಈ ಸದನ ನಡೆಯುವಾಗ ವಿಧಾನಸೌಧದಲ್ಲಿ ನಾಮಫಲಕ ಹಾಕಿದ್ದಾರೆ ಎಂದು ಹೇಳಿ ನಾವು ನಂಬಿಕೊಳ್ಳುವುದಲ್ಲ. ನಮ್ಮ ಮುಖ್ಯಮಂತ್ರಿಯವರು ಈಗ ದಯಮಾಡಿಸಿದ್ದಾರೆ, ಅವರಲ್ಲಿ ನಾನು ಮತ್ತೊಮ್ಮೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಿಮ್ಮ ಸಚಿವ ಸಂಪುಟದ ಸಚಿವರು ಯಾರ‍್ಯಾರೂ ಎಂಬುದನ್ನು ಅವರು ದಯಮಾಡಿ ಪರಿಚಯ ಮಾಡಿ ಕೊಡಬೇಕು. ಇವೊತ್ತು ಪತ್ರಿಕೆಗಳಲ್ಲಿ ಒಬ್ಬ ಸಚಿವರು ರಾಜೀನಾಮೆ ಕೊಟ್ಟಿದ್ದಾಗೆ ಎಂದು ಬಂದಿದೆ ಅದು ನಿಜವೆ ? ಈ ಸಭೆಯು ನಡೆಯುವಾಗ ಪತ್ರಿಕೆಯಲ್ಲಿ ವಿಷಯ ಬಂದಿದೆ. ನೀವು ಅವರ ಪರಿಚಯ ಮಾಡಿಸಲಿಲ್ಲ. ಅವರು ರಾಜೀನಾಮೆ ಕೊಟ್ಟಿದ್ದಾರೋ, ಇದ್ದಾರೋ ಎಂಬ ಬಗ್ಗೆ ನಮಗೆ ಅನುಮಾನ ಇದೆ. ಅವರು ರಾಜೀನಾಮೆ ಕೊಟ್ಟಿರುವುದನ್ನು ತಾವುಗಳು ಒಪ್ಪಿ ಅದನ್ನು ರಾಜ್ಯಪಾಲರಿಗೆ ಕಳುಹಿಸಿದ್ದಾರಾ ? ಆ ಬಗ್ಗೆ ತಾವುಗಳು ಹೇಳಬೇಕೆಂದು ಕೇಳಿಕೊಳ್ಳುತ್ತೇವೆ.

ಶ್ರೀ ವೈ.ಕೆ. ರಾಮಯ್ಯ:- ಸನ್ಮಾನ್ಯ ಅಧ್ಯಕ್ಷರೇ, ಸುಮಾರು 67 ನಿಮಿಷಗಳಿಂದ ಈ ಸದನದಲ್ಲಿ ಚರ್ಚೆಯು ನಡೆಯುತ್ತಾ ಇದೆ. ವಿಷಯ ಏನೆಂದರೆ ಯಾವ ಪಕ್ಷದವರು ಏನು ಮಾಡಬೇಕು ? ಮತ್ತು ಯಾವ ಯಾವ ಪಕ್ಷದವರು ಏನೇನು ಮಾಡಿದ್ದಾರೆ ? ಭಾರತೀಯ ಜನತಾ ಪಕ್ಷದ ಶ್ರೀ ಯಡಿಯೂರಪ್ಪನವರನ್ನು ನಾನು ಒಂದು ಪ್ರಶ್ನೆ ಕೇಳುತ್ತೇನೆ. ಲೋಕಸಭೆಯ ಉಪಾಧ್ಯಕ್ಷರು ಕೇವಲ ಬಿ.ಜೆ.ಪಿ.ಯವರಿಂದಲೇ ಹುಟ್ಟಿ ಬರಲಿಲ್ಲ. ಕಾಂಗ್ರೆಸ್‌ನ ಬೆಂಬಲವನ್ನು ತೆಗೆದುಕೊಂಡು ಅವರು ಉಪಾಧ್ಯಕ್ಷರಾದರು. ಕಾಂಗ್ರೆಸ್ ಪಕ್ಷವು ಇವರಿಗೆ ಮೈಲಿಗೆ ಆಗಲಿಲ್ಲ. ಕಾಂಗ್ರೆಸ್‌ಗೆ ಜೊತೆಗೆ ಇದ್ದಂಥ ವಿ.ಪಿ.ಸಿಂಗ್‌ರವರನ್ನು ಕರೆದುಕೊಂಡು ಬಂದು ಇವರು ರಾಷ್ಟ್ರದ ಪ್ರಧಾನಿಯಾಗಿ ಮಾಡಿದರು ಅವಾಗ ವಿರೋಧ ಪಕ್ಷದವರಿಗೆ ಕಾಂಗ್ರೆಸ್‌ನವರು ಮೈಲಿಗೆ ಆಗಿರಲಿಲ್ಲ. ವಿರೋಧ ಪಕ್ಷದಲ್ಲಿದ್ದಂಥ ಚಂದ್ರಶೇಖರ್‌ರವರನ್ನು ಅವರು ಕರೆದುಕೊಂಡು ಹೋಗಿ ಪ್ರಧಾನಿ ಮಾಡಿದರು, ಅವೊತ್ತು ಕೂಡ ಇವರಿಗೆ ಮೈಲಿಗೆ ಆಗಿರಲಿಲ್ಲ. ಆದ್ದರಿಂದ ಯಾವ ಯಾವ ಪಕ್ಷದವರು ಹಿಂದೆ ಏನೇನು ಮಾಡಿದ್ದಾರೆ, ಎಂಬ ಬಗ್ಗೆ ಅಜೆಂಡಾದಲ್ಲಿ ಹಾಕಿ ಚರ್ಚೆ ಮಾಡುವುದಾದರೆ ನಮ್ಮ ಅಭ್ಯಂತರವಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:- ವೈಟ್ ಪೇಪರ್ ಹೊರಡಿಸಿ.

ಶ್ರೀ ವೈ. ಕೆ. ರಾಮಯ್ಯ:- ಆಗಬಹುದು. ಆದ್ದರಿಂದ ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ಸಭೆಯನ್ನು ಯಾವುದಾದರೂ ಒಂದು ವಿಷಯಕ್ಕೆ ಸೀಮಿತಗೊಳಿಸಿ ಮುಂದುವರೆಸಿಕೊಂಡು ಹೋಗಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮುಖ್ಯಮಂತ್ರಿಗಳೂ ಬಂದಿದ್ದಾರೆ. ಇಲ್ಲಿ ಚರ್ಚೆಯಾಗುತ್ತಿರುವುದು ಪ್ರೇಮಚಂದ್ರ ಸಾಗರ್ ಅವರು ಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದಾರೆಂದು ಪತ್ರಿಕೆಗಳಲ್ಲಿ ಬಂದಿದೆ. ನಾವು ಮುಖ್ಯಮಂತ್ರಿಗಳನ್ನು ಒತ್ತಾಯ ಮಾಡುತ್ತೇವೆ, ಅವು ರಾಜೀನಾಮೆ ಕೊಟ್ಟಿದ್ದಾರೆಯೇ ಅದನ್ನು ನೀವು ಒಪ್ಪಿಕೊಂಡಿದ್ದೀರೆ ಇನ್ನೂ ಅನೇಕ ಜನ ಕ್ಯಾಬಿನೆಟ್ ಸಚಿವರು ರಾಜೀನಾಮೆ ಕೊಟ್ಟಿದ್ದಾರೆಂದು ಸುದ್ದಿ ನಮಗಿದೆ. ಮಾನ್ಯ ರಾಮಯ್ಯನವರು ಪಕ್ಷದ ಬಗ್ಗೆ ಹೇಳಿದರು. ತಮ್ಮ ಪಕ್ಷ ಯಾವುದು ಗೊತ್ತಿಲ್ಲ ಎಂದು ಹೇಳಿದ ರಾಮಯ್ಯನವರು ಮಾತಾಡ್ತಿದ್ದಾರೆ. ರಾಮಯ್ಯನವರ ಬಗ್ಗೆ ನನಗೆ ಗೌರವ ಇದೆ. ಆಮೇಲೆ ಅವರು ತಾವು ಯಾವ ಪಕ್ಷದಲ್ಲಿದ್ದರೆ ಎಂದು ತಿಳಿದುಕೊಳ್ಳುವುದಕ್ಕೆ ನಾನು ಪ್ರಯತ್ನಿಸುತ್ತಿದ್ದೇನೆ. ಅವರು ಹೇಳಿದರೆ ತುಂಬ ಸಂತೋಷ. ಈ ಕಡೆ ಇರುವ ಅನೇಕ ಜನತಾದಳ ಸದಸ್ಯರು ಆ ಕಡೆ ಹೋಗಬೇಕೆಂದಿದ್ದಾರೆ. ಅವರು ಈ ಕಡೆ ಬರಬೇಕೆಂದಿದ್ದಾರೆ. ಯಾರ‍್ಯಾರು ಎಲ್ಲೆಲ್ಲಿ ಹೋಗಬೇಕೋ ಹೋಗಿಬಿಡಿ. ಪ್ರೇಮಚಂದ್ರಸಾಗರರ ಬಗ್ಗೆ ಹೇಳಿಕೆ ಕೊಡುವ ಮುಂಚೆ, ಒಂದು ರಾಜಕೀಯ ಅಸ್ಥಿರತೆ ತಾಂಡವವಾಡುತ್ತಿರುವ ಈ ಸಂದರ್ಭದಲ್ಲಿ

ನಾವೆಲ್ಲಿದ್ದೇವೆ, ಎಲ್ಲಿ ಹೋಗುತ್ತೇವೆ ಎಂದು ಸ್ಪಷ್ಟವಾದರೆ ಮುಖ್ಯಮಂತ್ರಿಗಳು ಆಡಳಿತ ಮಾಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ವೈ.ಕೆ. ರಾಮಯ್ಯ:- ಅಧ್ಯಕ್ಷರೇ, ಬಹುಶಃ ನಾನೇ ಯಾವತ್ತಾದರೂ ಪ್ರಸ್ತಾಪ ಮಾಡಬೇಕಾಗಿದ್ದ ವಿಷಯವನ್ನು ಯಡಿಯೂರಪ್ಪನವರು ಪ್ರಸ್ತಾಪಿಸಲು ಅವಕಾಶ ಮಾಡಿಕೊಟ್ಟಿದ್ದಾರೆ. ಅವರಿಗೆ ನಾನು ಋಣಿಯಾಗಿದ್ದೇನೆ. ರಾಮಯ್ಯನವರು ಯಾವ ಪಕ್ಷದವರು ಎಂದು ಸಭೆಗೆ ತಿಳಿಸಬೇಕೆಂದು ಕೇಳಿದರು. ನಾನು ನೇಗಿಲು ಹೊತ್ತ ರೈತನ ಚಿಹ್ನೆ ಇರುವ ಜನತಾ ಪಕ್ಷದ ವತಿಯಿಂದ ಕರ್ನಾಟಕ ವಿಧಾನಸಭೆಗೆ ಆರಿಸಿಬಂದಿದ್ದೇನೆ. ಈ ಗೊಂದಲ ನಿವಾರಣೆ ಮಾಡಬೇಕೆಂಬ ಉದ್ದೇಶದಿಂದಲೇ ಈ ಸಭೆಯ ಅಧ್ಯಕ್ಷರಿಗೆ ಪತ್ರ ಬರೆದಿದ್ದೇನೆ. ಅವರಿಂದ ಉತ್ತರ ಬಂದಿದೆ ನೀವು ಜನತಾ ಪಕ್ಷದ ಸದಸ್ಯರು ಎಂದು. ಇದರಿಂದ ಯಡಿಯೂರಪ್ಪನವರಿಗಾಗಲೀ ಪತ್ರಿಕಾ ಮಿತ್ರರಿಗಾಗಲೀ ಇನ್ನು ಗೊಂದಲ ಬೇಕಾಗಿಲ್ಲ. ನಾನು ನೇಗಿಲು ಹೊತ್ತ ರೈತನ ಚಿಹ್ನೆ ಮೇಲೆ ಆರಿಸಿಬಂದಿರುವ ಜನತಾಪಕ್ಷದ ಸದಸ್ಯ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ನಾನು ಮುಖ್ಯಮಂತ್ರಿಗಳಿಗೆ ಪ್ರಶ್ನೆ ಮಾಡುವುದೇನೆಂದರೆ ಈಗ ತಾನೇ ಸಂಜೆ ಪತ್ರಿಕೆಗಳಲ್ಲಿ ನಿಮ್ಮ ಸಚಿವರೊಬ್ಬರು ರಾಜೀನಾಮೆ ಕೊಟ್ಟಿದ್ದಾರೆಂದು. ಅಶೋಕಾ ಹೋಟೆಲ್‌ನಲ್ಲಿ ಸಭೆ ನಡೆದದ್ದು ಆಯಿತು. ಈ ದಿವಸ ಒಕ್ಕಲಿಗರೆಲ್ಲಾ ಕಾವೇರಿ ಕಾಂಟಿನೆಂಟಲ್ ಹೋಟಲ್‌ನಲ್ಲಿ ಸಭೆ ಸೇರುತ್ತಿದ್ದಾರಂತೆ, ನಾಳೆ ರಾಜಶೇಖರ ಮೂರ್ತಿಯವರ ಮನೆಯಲ್ಲಿ ಒಂದು ಸಭೆ ಇದೆಯಂತೆ. ಇವತ್ತು ಸಂಜೆ ಅಜೀಜ್‌ಸೇಠರ ಮನೆಯಲ್ಲಿ ಒಂದು ಸಭೆ ಇದೆಯಂತೆ. ಇವೆಲ್ಲ ಸುದ್ದಿಗಳಲ್ಲಿ, ಸಭೆಯಲ್ಲಿ ನಡೆಯುತ್ತಿದೆ ಅದರಿಂದ ಇಲ್ಲಿ ಅನೇಕರು ಬಂದಿಲ್ಲ. ನಾನು ಏಕೆ ಹೇಳ್ತಿದೇನೆಂದರೆ ಇದು ಸರ್ಕಾರದ ಅಸ್ಥಿರತೆಯನ್ನು ವ್ಯಕ್ತ ಮಾಡುತ್ತದೆ. ನಾನು ವೈಯಕ್ತಿಕವಾಗಿ ನಿಮ್ಮ ವಿರುದ್ಧವಾಗಿ ಪಿತೂರಿ ಮಾಡಿ ನಾವು 22 ಜನ ಆ ಕಡೆ ಬಂದು ಕುಳಿತುಕೊಳ್ಳುವುದಕ್ಕಾಗುವುದಿಲ್ಲ ಎಂದು ನಮಗೆ ಗೊತ್ತಿದೆ. ಆದರೆ ಸರ್ಕಾರದ ಅಸ್ಥಿರತೆಯಿಂದಾಗಿ ರಾಜ್ಯದ ಜನರಿಗೆ ಆಗುವ ಗೊಂದಲ ಏನಿದೆ ಇದರ ಬಗ್ಗೆ ತಾವು ಬರುವ ಮುಂಚೆ ನಾವು ಸಾಕಷ್ಟು ವಿಷಯವನ್ನು ಪ್ರಸ್ತಾಪಿಸಿದ್ದೇವೆ, ತಾವು ಬಂದಿರೋದು ಬಹಳ ಒಳ್ಳೆಯದು. ದಯವಿಟ್ಟು ಸರ್ಕಾರದ ಸ್ಥಿರತೆ ಬಗ್ಗೆ ನಿಮ್ಮ ವಿಚಾರ ತಿಳಿಸಬೇಕೆಂದು ನಾನು ಕೋರುತ್ತೇನೆ.

ಶ್ರೀ ಎ.ಕೆ. ಅನಂತಕೃಷ್ಣ:- ನಾನು ಕ್ರಿಯಾಲೋಪದ ಮೇಲೆ ನಿಂತಿದ್ದೇನೆ. ಈಗ ನಮ್ಮ ಮುಂದಿರುವುದು ರಾಜ್ಯಪಾಲರ ಭಾಷಣ, ಅದರ ಮೇಲೆ ಚರ್ಚೆ ಆಗಬೇಕಾಗಿದೆ.

ಶ್ರೀ ವಾಟಾಳ್ ನಾಗರಾಜ್:- ಓಹೋ ಇವರು ರಾತ್ರಿಯಲ್ಲ ರಾಮಾಯಣ ನೋಡಿ ಬೆಳಿಗ್ಗೆ ರಾಮನಿಗೂ ಸೀತೆಗೂ ಏನಾಯಿತು ಎಂದು ಕೇಳುತ್ತಿದ್ದಾರೆ.

ಶ್ರೀ ಎ.ಕೆ. ಅನಂತಕೃಷ್ಣ:- ವಾಟಾಳ್ ನಾಗರಾಜರಿಗೆ ನಾವು ಹೇಳುವುದನ್ನು ಕೇಳುವ ತಾಳ್ಮೆ ಇಲ್ಲ, ದಯಮಾಡಿ ತಾವು ಕೇಳಬೇಕು. ನಾವು ರಾಜ್ಯಪಾಲರ ಭಾಷಣ ಏನಿದೆ ಅದರ ಮೇಲೆ ಚರ್ಚೆ ಮಾಡಬೇಕೆಂದು ಕಾತುರರಾಗಿ ನಾವು ಕುಳಿತಿದ್ದೇವೆ.

ಇದು ಇಂದಲ್ಲ ನಾಳೆಯಾದರೂ ಮುಗಿಸಲೇಬೇಕು. ಈ ಭಾಷಣವನ್ನು ಮುಂದಿಟ್ಟುಕೊಂಡು ಅದರ ಮೇಲೆ ನಾವು ವಿಶ್ಲೇಷಣೆ ಮಾಡುವುದಕ್ಕ ಸಾಧ್ಯವಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ:- ಹಾಗೇನೂ ಇಲ್ಲ. ಅಷ್ಟರೊಳಗೆ ಮಂತ್ರಿ ಮಂಡಲ ಬಿದ್ದು ಹೋದರೆ ಮುಗಿಸಲೇಬೇಕಾಗುತ್ತದೆ.

ಶ್ರೀ ಎ.ಕೆ. ಅನಂತಕೃಷ್ಣ:– ಕೇಳಿ ಸ್ವಾಮಿ ಚಂದ್ರೇಗೌಡರೇ. ತಮಗೂ ತಾಳ್ಮೆ ಇಲ್ಲ ಎಂದು ಹೇಳಿದರೆ ನನಗೆ ಬಹಳ ಕಷ್ಟವಾಗುತ್ತದೆ. ನಾನು ಹೇಳುವುದು ಇಷ್ಟೆ. ರಾಜ್ಯಪಾಲರ ಭಾಷಣದ ವಿಷಯದಲ್ಲಿ ಶ್ರೀಮಾನ್ ಯಡಿಯೂರಪ್ಪನವರು ಮಾತನಾಡುವಾಗ ಕೆಲವು ವಿಷಯಗಳು ಬಂತು. ಅದರ ಮೇಲೆ ಬಹಳ ಪ್ರಸ್ತಾಪ ನಡೆಯಿತು. ಆಗ ನಾನು ಎದ್ದು ನಿಂತು ಅಡಚಣೆ ಮಾಡಲಿಲ್ಲ. ಈ ಕಮ್ಯುನಿಸಂ, ಕಮ್ಯುನಲ್, ಫ್ಯಾಕ್ಟರ್, ಕಮ್ಯುನಲ್ ಕ್ಲಾಷಸ್ ಈ ವಿಷಯಗಳೆಲ್ಲಾ ಬಂದಿತ್ತು. ಆ ಸಂದರ್ಭದಲ್ಲಿ ಅಯೋಧ್ಯೆಯೂ ಬಂತು, ದಿಲ್ಲಿಯೂ ಬಂತು. ಆದ್ದರಿಂದ ಆ ವಿಷಯದಲ್ಲಿಯೂ ನಾನು ಅಡ್ಡ ಬರಲಿಲ್ಲ. ಆದರೆ ಈಗ ಏನು ನಡೆಯುತ್ತಿದೆ. ಮಾನ್ಯ ಯಡಿಯೂರಪ್ಪನವರು ತಾವು ಭಾಷಣ ಮಾಡಬೇಕಾದದ್ದು, ತಮ್ಮ ಸಿದ್ಧಾಂತ ಏನು, ತಮ್ಮ ನಿಲುವೇನು ? ತಾವೇನು ವಿಶ್ಲೇಷಣೆ ಮಾಡಬೇಕು; ಅದನ್ನು ಸಂಪೂರ್ಣವಾಗಿ, ಸಮಗ್ರವಾಗಿ, ಸವಿಸ್ತಾರವಾಗಿ ಮಾಡಿದರೆ ನಾವು ಅಡ್ಡ ಬರುವುದಕ್ಕೆ ತಯಾರಾಗಿರಲಿಲ್ಲ. ಕೆಲವು ಕಡೆ ಅವರು ಪ್ರಚೋದನೆಯನ್ನು ಮಾಡಿದರು, ಬೇರೆಯವರು ಕೂಡ ಪ್ರಶ್ನೆಗಳನ್ನು ಹಾಕಿದರು. ಆದರೆ ಒಬ್ಬರಿಂದ ಒಬ್ಬರಿಗೆ ಪ್ರಶ್ನೆ ಉತ್ತರ ಸರಿಯಲ್ಲ ಎಂದು ಹೇಳಿ ತಾವು ಭಾಷಣ ಮುಂದುವರೆಸಬೇಕು ಎಂದು ತಮ್ಮ ಪೀಠದಿಂದ ಹೇಳಿದ್ದೀರಿ. ಆದರೂ ಅದು ನಡೆಯಲಿಲ್ಲ. ಆಮೇಲೆ ಪಕ್ಷಗಳಲ್ಲಿರುವಂಥ ವಾದವಿವಾದ ಭಿನ್ನಾಭಿಪ್ರಾಯಗಳು ಬಂತು. ಇದು ರಾಜ್ಯಪಾಲರ ಭಾಷಣಕ್ಕೆ ಸಂಬಂಧ ಇಲ್ಲ. ದಯವಿಟ್ಟು ಕೇಳಬೇಕು. ನಾವು ಸಾಕಷ್ಟು ತಾಳ್ಮೆಯಿಂದ ಕುಳಿತಿದ್ದೇವೆ.

ಶ್ರೀ ಪಿ.ಜಿ.ಆರ್ ಸಿಂಧ್ಯ:– ಇದರಲ್ಲಿ ಪಾಯಿಂಟೂ ಇಲ್ಲ. ಆರ್ಡರೂ ಇಲ್ಲ.

ಶ್ರೀ ಎ.ಕೆ. ಅನಂತಕೃಷ್ಣ:– ನಾವು ಬಹಳ ತಾಳ್ಮೆಯಿಂದ ಕುಳಿತಿದ್ದೇವೆ.

ಈಗ ಏನು ಬಂತು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:– ಪ್ರೇಮಚಂದ್ರ ಸಾಗರ್‌ರವರ ರಾಜೀನಾಮೆಯನ್ನು ರಾಜ್ಯಾಪಾಲರು ಅಕ್ಸೆಪ್ಟ್ ಮಾಡಿಕೊಂಡರೇನು ? ಅದರ ಬಗ್ಗೆ ಹೇಳಿ.

ಶ್ರೀ ಎ.ಕೆ. ಅನಂತಕೃಷ್ಣ:– ಅಲ್ಲಿಗೆ ಬರುತ್ತಿದ್ದೇನೆ ನಾನು. ತಾವು ಸುಮಾರು ಒಂದೂವರೆ ಗಂಟೆ ಹೊತ್ತು ರಾಜ್ಯಪಾಲರ ಭಾಷಣದ ವಿಷಯದಲ್ಲಿ ವಿಶ್ಲೇಷಣೆ ಮಾಡುವಂಥ ಕೆಲಸವನ್ನು ಸಂಪೂರ್ಣವಾಗಿ ಮಾಡಿಲ್ಲ. ದಾರಿ ತಪ್ಪಿ ಬಹಳ ಕಡೆ ಎಲ್ಲೆಲ್ಲೂ ಹೋಗಿದ್ದೀರಿ . ಅದನ್ನೆಲ್ಲಾ ನಾವು ತಾಳ್ಮೆಯಿಂದ ಕೇಳಿಕೊಂಡಿದ್ದೇವೆ. ಆದರೆ ಈಗ ನಾನು ಪಾಯಿಂಟ್ ಆಫ್ ಆರ್ಡರ್ ಮೇಲೆ ನಿಂತಿದ್ದೇನೆ. ಆ ಒಂದು ಎಲ್ಲೆಯನ್ನು ಬಿಟ್ಟು ನಾನು ಪಕ್ಕದಲ್ಲಿ ಹೋಗುವುದಿಲ್ಲ. ಈಗ ಏನಾಗಿದೆ. ಮಂತ್ರಿಮಂಡಲದಲ್ಲಿ ಯಾರೊಬ್ಬ ಮಂತ್ರಿ ರಾಜೀನಾಮೆಯನ್ನು ಕೊಟ್ಟಿದ್ದಾರೆ. ಮತ್ತೆ ಬೇರೆ ಕಡೆ ಇನ್ನೇನೂ ಸಭೆಗಳು ನಡೆಯುತ್ತಿವೆ. ಇದೆಲ್ಲಾ ವಾಸ್ತವಾಂಶ ಸ್ವಾಮಿ ರಾಜ್ಯಪಾಲರ ಭಾಷಣದಲ್ಲಿ ಇದೆಲ್ಲಾ ಇಲ್ಲ. ಅದರ ಅವಶ್ಯಕತೆ ಇಲ್ಲ. ಪಕ್ಷದಲ್ಲಿ ಏನಾದರೂ ಭಿನ್ನಾಭಿಪ್ರಾಯಗಳು ಇದ್ದರೆ, ಮಂತ್ರಿ ಮಂಡಲದಲ್ಲಿ ಏನಾದರೂ ಭಿನ್ನಾಭಿಪ್ರಾಯ ಇದ್ದರೆ ಆ ವಿಷಯ it is purely an internal matter. ಅದು ಪ್ರತಿಯೊಂದು ಸರ್ಕಾರದಲ್ಲೂ, ಪ್ರತಿ ಮಂತ್ರಿಮಂಡಲದಲ್ಲೂ ಪ್ರತಿಯೊಂದು ಪಕ್ಷದಲ್ಲಿ ಕೂಡ ಇರುವ ಮಾತು. ಬೆಳಿಗ್ಗೆ ಇರುತ್ತದೆ. ಮಧ್ಯಾಹ್ನ ಸರಿಹೋಗುತ್ತದೆ. ಮಧ್ಯಾಹ್ನ ಇರುತ್ತದೆ. ರಾತ್ರಿ ಸರಿಹೋಗುತ್ತದೆ. ಮಾರನೇಯ ದಿವಸ ಇರುತ್ತದೆ. ಇದನ್ನು ನೋಡಿ vicarious pleasure, satisfaction.

ಅವರು ಸಫಲರಾಗುವುದಿಲ್ಲ ಎನ್ನತಕ್ಕಂಥ ಮಾತನ್ನು ಹೇಳಬಯಸುತ್ತೇನೆ. ಆದ್ದರಿಂದ ಆ

ವಿಷಯದಲ್ಲಿ ಹೆಚ್ಚು ಬೆಳೆಸಿಕೊಂಡು ಹೋಗುವುದು ಬೇಕಾಗಿಲ್ಲ. ಈಗ ರಾಜ್ಯಪಾಲರ ಭಾಷಣ ಏನು ಇದೆ, ಅದು ತಮ್ಮದೇ ಅದ ನಿಲುವು.

SRI D.B. CHANDREGOWDA:– I have a Point of Order.

ಶ್ರೀ ಎ.ಕೆ. ಅನಂತಕೃಷ್ಣ:– ನನ್ನ ಪಾಯಿಂಟ್ ಆಫ್ ಆರ್ಡರ್ ಮೇಲೆ ಅವರು ಪಾಯಿಂಟ್ ಆಫ್ ಆರ್ಡರನ್ನು ರೈಜ್ ಮಾಡುತ್ತಿದ್ದಾರೆಯೇ ?

SRI D.B. CHANDRE GOWDA:– I have a Point of Order.

ಶ್ರೀ ಎ.ಕೆ. ಅನಂತಕೃಷ್ಣ:– ತಮ್ಮ ಆದೇಶವನ್ನು ನಾನು ಹೇಳುತ್ತಿದ್ದೇನೆ. ತಾವೇ ಹೇಳಿದ್ದೀರಿ. ರಾಜ್ಯಪಾಲರ ಭಾಷಣ ಏನು ಇದೆ, ಆ ವಂದನಾರ್ಪಣೆ ವಿಷಯದಲ್ಲಿ ಮಾತ್ರ ಅದಕ್ಕೆ ಸೀಮಿತವಾಗಿ ಮಾತನಾಡಬೇಕು ಎಂದು ಹೇಳಿ. ಅದು ದಾರೀ ತಪ್ಪಿ ಹೋಗುತ್ತಿದೆ. ತಮ್ಮ ಒಂದು ಆದೇಶ ಏನು ಇದೆ, ಅದಕ್ಕೂ ಕೂಡ ಗಮನ ಕೊಡುತ್ತಿಲ್ಲ ಎಂದು ನಾನು ತಮ್ಮ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ:– ನಿನ್ನೆ ಮಾನ್ಯ ಏಕಾಂತಯ್ಯನವರು ಒಂದು ವಿಧಿ ಬಿಂದುವನ್ನು ಎತ್ತಿದರು. ರಾಜ್ಯಪಾಲರ ಭಾಷಣ ಶುರುವಾದ ಮೇಲೆ ಬೇರೆ ಯಾವ ವಿಷಯವನ್ನು ಆ ಮಧ್ಯದಲ್ಲಿ ತೆಗೆದುಕೊಳ್ಳಕೂಡದು ಎನ್ನುವ ತೀರ್ಮಾನವನ್ನು ಸಭಾಧ್ಯಕ್ಷರು ಕೊಟ್ಟಿದ್ದಾರೆ. ಅದನ್ನು ಬಿಟ್ಟು ಬಹಳ ಆಸಕ್ತಿಯಿಂದ ಅವರ ಭಾಷಣವನ್ನು ಕೇಳುವುದಕ್ಕೆ ಆಗಿನಿಂದಲೂ ಎಲ್ಲಿಗೂ ಹೋಗದೆ ಕುಳಿತ್ತಿದ್ದೇವೆ. ಚೆನ್ನಾಗಿ ಮಾತನಾಡುತ್ತಿದ್ದಾರೆ. ಎಲ್ಲರ ವಿರೋಧವನ್ನು ಎದುರಿಸಿ ಮಾತನಾಡುತ್ತಿದ್ದಾರೆ. ಅದನ್ನು ಬಿಟ್ಟು ಪ್ರತಿಯೊಂದು ಹೆಜ್ಜೆಯಲ್ಲೂ ಅವರು ಅದು ಹೋಯಿತು, ಇದು ಹೋಯಿತು. ಸರ್ಕಾರ ಗುಂಡುಕಲ್ಲಿನ ಹಾಗೆ ಎರಡು ವರ್ಷ ಇರುತ್ತದೆ. ಏನೂ ಭಯ ಇಲ್ಲ. ಈಗ ಆ ವಿಷಯ ಇಲ್ಲಿ ಅಪ್ರಸ್ತುತತ.

ಶ್ರೀ ಡಿ.ಬಿ. ಚಂದ್ರೇಗೌಡ:– ಮಾನ್ಯ ಸಂಸದೀಯ ಮಂತ್ರಿಗಳಲ್ಲಿ ನನ್ನ ವಿಜ್ಞಾಪನೆ ಇಷ್ಟೆ. ತೀರ್ಮಾನಗಳು ಆದದ್ದು ಪಾಯಿಂಟ್ ಆಫ್ ಆರ್ಡರ್ ಮೇಲೆ ನಿನ್ನೆ. ಇವತ್ತು ನನ್ನ ಪಾಯಿಂಟ್ ಆಫ್ ಆರ್ಡರೊಂದು ಇದೆ. ರಾಜ್ಯಾಪಾಲರ ಭಾಷಣದ ಮೇಲೆ ಚರ್ಚೆ ನಡೆಯುವ ಕಾಲಕ್ಕೆ ಯಾವ ಮಂತ್ರಿಗಳಿಗೆ ರಾಜ್ಯಪಾಲರು ರಾಜ್ಯಾಂಗದತ್ತವಾಗಿ ಶಪಥವನ್ನು ಮತ್ತು ಗೌಪ್ಯವಾಗಿ ಬೋಧನೆ ಮಾಡಿದ್ದರೋ ಆ ಮಂತ್ರಿಗಳು ರಾಜೀನಾಮೆಯನ್ನು ಕೊಟ್ಟರೆ ಅದನ್ನು ಸ್ವೀಕರಿಸತಕ್ಕಂಥ ತಿರಸ್ಕರಿಸತಕ್ಕಂಥ ಅಧಿಕಾರ ಅವರಿಗೇ ಇದೆ. ಆದ್ದರಿಂದ ಇದಕ್ಕಿಂತ ರೆಲೆವೆಂಟ್ ಪಾಯಿಂಟ್ ಮತ್ತೊಂದು ಇಲ್ಲ.

ಎರಡನೆಯದು ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಚರ್ಚೆ ಮಾಡುವಂತಹ ಕಾಲದಲ್ಲಿ ರಾಜೀನಾಮೆ ಬಂದಿದೆ ಎನ್ನುವ ಕಾರಣದಿಂದ ಸ್ವಲ್ಪ ಹೇಳಬೇಕಾಗಿದೆ. ನಮ್ಮಲ್ಲಿ ಈಗ ಕ್ರಿಕೆಟ್ ಫೀವರ್ ದೇಶದಲ್ಲೆಲ್ಲಾ ತುಂಬಾ ಇದೆ. ಇನ್ನು ಓಪನಿಂಗ್ ಬ್ಯಾಟ್ಸಮನ್ ಮೊದಲೇ ಬಂದಾಗ ಸ್ವಲ್ಪ ಫಾಸ್ಟ್ ಬೌಲಿಂಗ್ ಮೀಡಿಯಂ ಫಾಸ್ಟ್ ಬೌಲಿಂಗ್ ಹಾಕುತ್ತಾರೆ. ಇನ್ನು ಪಿಚ್ ಸ್ಪಿನ್ ತೆಗೆದುಕೊಂಡಿಲ್ಲ. ಆದಕ್ಕಾಗಿ ನಾವು ಸುಮ್ಮನೆ ಕುಳಿತಿದ್ದೇವೆ. ಆದರೆ ಇವತ್ತು ಏನಾಗಿದೆ ಅಂದರೆ ನಾವು ಬೌಲ್ ಮಾಡದೆ ಎರಡು ವಿಕೆಟ್ ಬಿದ್ದಿದೆ. ಇವತ್ತು ಬಿದ್ದಿರುವ ವಿಕೆಟ್‌ಗೆ ಬೌಲಿಂಗೇ ಬೇಕಾಗಿಲ್ಲ. ಬ್ಯಾಟ್ಸ್‌ಮನ್ ವಿಕೆಟ್ ಅನ್ನು ಕಿತ್ತುಹಾಕಬೇಕೆಂದು ಹೇಳುತ್ತಿದ್ದಾನೆ ಅದರ ಬಗ್ಗೆ ಇವರದು ಏನು ? ಕ್ಯಾಪ್ಟನ್ ಏನು ಕೇಳುತ್ತಾರೆ. ಪಾಯಿಂಟ್ ಆಫ್ ಆರ್ಡರ್ ಅಷ್ಟೆ. ರಾಜ್ಯಪಾಲರ ಭಾಷಣದಲ್ಲಿ ಅವರು ಬೋಧಿಸಿದಂತಹ ಗೌಪ್ಯತೆ ಮತ್ತು ಶಪಥ ಆ ಮಂತ್ರಿ ಇವತ್ತು ಇಲ್ಲ ಅಂದರೆ ಹೇಗೆ ? ಇದು ಇಡೀ ರಾಜ್ಯಕ್ಕೆ ಸಂಬಂಧಪಟ್ಟಂಥ ವಿಚಾರ ಇದು ಪಾಯಿಂಟ್ ಆಫ್ ಆರ್ಡರ್ ಆಗುವುದಿಲ್ಲವೋ ? ಇದರ ಬಗ್ಗೆ ಮುಖ್ಯಮಂತ್ರಿಗಳು

ಏನು ಹೇಳುತ್ತಾರೋ ಅದನ್ನು ಹೇಳಲಿ, ನಾವು ಕೇಳೋಣ. ಅವರ ಕಷ್ಟ ನೋಡಿ ನಮಗೆ ಸಂಕಟವಾಗುತ್ತದೆ.

ಶ್ರೀ ಎಂ. ವೀರಪ್ಪ ಮೋಯಿಲಿ:- ಮಾನ್ಯ ಅಧ್ಯಕ್ಷರೆ, ನನಗೆ ಒಂದು ಬಹಳ ಸಂತೋಷದ ವಿಚಾರ ಅಂದರೆ ನಮ್ಮ ವಿರೋಧ ಪಕ್ಷದ ನಾಯಕರಾದ ತಮಗೆ ನಮ್ಮ ಭದ್ರತೆಯ ಬಗ್ಗೆ ಇರತಕ್ಕಂಥ ಚಿಂತನೆ ಮತ್ತು ಕಾಳಜಿಯನ್ನು ನೋಡಿದರೆ ನಮ್ಮ ಪರವಾಗಿ ವಿಷವಾದಂತಹ ಕೃತಜ್ಞತೆಗಳನ್ನು ಮತ್ತು ಧನ್ಯವಾದಗಳನ್ನು ತಮಗೆ ಅರ್ಪಿಸುತ್ತೇವೆ. ಇದು ಸದಾ ಇರಲಿ, ಅದರಿಂದ ಮುಂದೆ ಬರತಕ್ಕಂಥ ಚುನಾವಣೆಯಗಳಲ್ಲಿಯೂ ಕೂಡ ತಾವು ಈ ರೀತಿಯ ಕಾಳದರ್ಜಿಯನ್ನು ನಮ್ಮ ಭದ್ರತೆಯ ಬಗ್ಗೆ ಇಡುತ್ತೀರಿ ಎನ್ನುವ ಭಾವನೆಯನ್ನು ಇಟ್ಟುಕೊಂಡಿದ್ದೇವೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಧೃತರಾಷ್ಟ್ರ ನಾನು ಆಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್:- ನಾನು ಆಗಲೇ ಹೊಂದಾಣಿಕೆ ನಡೆಯುತ್ತಿದೆ ಎಂದು ಹೇಳಿದೆ. ಪಿತೂರಿ ನಡೆಯುತ್ತಿದೆ ಎಂದು ನಾನು ಆಗಲೇ ಹೇಳಿಧೆ. ಇದೊಂದು ರಹಸ್ಯ ಬಹಳ ದೀರ್ಘವಾಗಿದೆ. ಇದು ಬಹಳ ತೀರ ಆಳವಾಗಿದೆ. ಆದರ ಬಗ್ಗೆ ರಾಜ್ಯಾದ್ಯಂತ ಚರ್ಚೆಯು ನಡೆಯಬೇಕಾಗುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಪುಟ್ಟಪ್ಪನವರು ಒಂದು ಮಾತನ್ನು ಹೇಳುತ್ತಾರೆ. ಅದೇನೆಂದರೆ 'ಮುಳುಗುವಾತ ಬದುಕಲಿಕ್ಕೆ ಮೊಸಳೆಯ ಮಾತು ಎಂಬಂತೆ' ಹಾಗೆಯೇ ನೀವು ಎಲ್ಲೇಲ್ಲೋ ನೀವು ಯಾರನ್ನೋ ಆಯ್ದುಕೊಳ್ಳುವುದಕ್ಕೆ ಹೋಗಬೇಡಿ.

ಶ್ರೀ ಎಂ. ವೀರಪ್ಪ ಮೊಯಿಲಿ:- ನನಗೆ ಇಲ್ಲಿಯವರೆಗೆ ಏನಾಗಿತ್ತು ಅಂದರೆ ನನಗೆ ಈ ಕಡೆಯ ಬೆಂಬಲ ಅಂತೂ ಇದೆ, ನಿಮ್ಮ ಬೆಂಬಲವೂ ಇದೆ. ಆದರೆ ಮಾನ್ಯ ಯಡಿಯೂರಪ್ಪನವರು ಬಗ್ಗೆ ಬೆಂಬಲ ಇಲ್ಲ. ಅತ ಸಂಶಯ ಇತ್ತು. ಈಗ ಅವರು ತೋರಿಸತಕ್ಕಂಥ ಆಸಕ್ತಿ ನೋಡಿದರೆ ಈ ಕಡೆ ಬೆಂಬಲ ಇದೆ ಎಂದು ನಮಗೆ ಸಮಾಧಾನ ಬಂದಿವೆ. ಆದ್ದರಿಂದ ನಾನು ಏತಕ್ಕೆ ಹೆದರಬೇಕು. ಹೆದರಬೇಕಾದಂತಹ ಅವಶ್ಯಕತೆ ಇಲ್ಲ. ಎಲ್ಲಾ ಭದ್ರವಾಗಿದೆ. ರಾಜೀನಾಮೆಯ ವಿಚಾರ ಬರುತ್ತಲೆ ಹೋಗುತ್ತದೆ. ಇಲ್ಲಿಯವರೆಗೆ ಭದ್ರವಾಗಿದೆ. ಡಾ।। ಪ್ರೇಮಾಚಂದ್ರ ಸಾಗರ್ ಕೂಡ ನಮ್ಮ ಮಂತ್ರಿಮಂಡಲದಲ್ಲಿ ಇದ್ದಾರೆ. ರಾಜೀನಾಮೆಯನ್ನು ಅವರು ಕೊಟ್ಟಿದ್ದು ಇದ್ದರೆ ನಾನು ತಮಗೆ ಬಂದು ಹೇಳುತ್ತೇನೆ. ತಮಗೆ ಈ ರೀತಿಯ ಆತುರ ಏತಕ್ಕೆ.

ಶ್ರೀ ಡಿ.ಬಿ. ಚಂದ್ರೇಗೌಡರು:- ಅಧಿಕೃತವಾದ ಸುದ್ದಿ ಬಂದಿದೆ.

SRI R.V. DESHAPANDE:- "Karnataka Minister of State for Sports and Culture Premachandra Sagar to-day resigned from Mr. M. Veerappa Moily's Ministry.

Official source said here that he had tendered the resignation to the Chief Minister in the morning. Poor allowcation of funds to his department in the Budget presented yesterday was stated to be the reason for his resignation." This is officaial source.

SRI M. VEERAPPA MOILY:- I don't think which source is official; not from my source.

ಶ್ರೀ ವಾಟಾಳ್ ನಾಗರಾಜ್:- ನಾನು ಅದಕ್ಕೆ 40 ಜನ ಮಂತ್ರಿಗಳನ್ನು ಮಾಡಬೇಡಿ. ಸುಮ್ಮನೆ ಕಾಲಿಗೆ, ಕೈಗೆ ಸಿಗುವಂತಹ ಮಂತ್ರಿಗಳನ್ನು ಮಾಡಬೇಡಿ ಎಂದು ಹೇಳಿದೆ.

SRI D.B. CHANDRE GOWDA:- Have you not received the resignation? Acceptance is differrent. Have you received it or not?

SRI M. VEERAPPA MOILY:- It will be made known to this House at the appropriate time.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಬೇಕಾದಾಗ ಅಂದರೆ ಆಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್:- ರಾಜೀನಾಮೆಯನ್ನು ಕೊಟ್ಟಿದ್ದಾರೆಂದು ತೀರ್ಮಾನವಾಯಿತು.

SRI P.G.R. SCINDHIA:- If he has submitted his resignation, you kindly tell us.

SRI M. VEERAPPA MOILY:- If it is to-day or it it is tomorrow, we will tell. ಮತ್ತೆ ಕೊಡುವವರು ಯಾರಿದ್ದಾರೆ ಹೇಳಿಬಿಡಿ. ಇದರ ಜೊತೆಯಲ್ಲಿ ಯಾರ್‍ಯಾರೂ ಕೊಟ್ಟಿದ್ದಾರೆಂದು ಒಳಗೆ ಗೌಪ್ಯವಾಗಿದ್ದರೆ ನನಗೆ ಗೊತ್ತಾಗುವುದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ನಾಳೆ ಇದರ ಬಗ್ಗೆ ಹೇಳಿಕೆಯನ್ನು ಕೊಡುತ್ತೀರಾ ?

ಶ್ರೀ ಎಂ. ವೀರಪ್ಪ ಮೊಯಿಲಿ:- ಅಗತ್ಯ ಬಿದ್ದರೆ ಕೊಡುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಅಗತ್ಯ ಬಿದ್ದರೆ ಅಂದರೆ ಹೇಗೆ ? ಸರ್ಕಾರದಲ್ಲಿ ಒಬ್ಬ ಜವಾಬ್ದಾರಿ ಇರತಕ್ಕಂಥ ಮಂತ್ರಿ ರಾಜೀನಾಮೆಯನ್ನು ಕೊಟ್ಟಿದ್ದಾರೆ ಅನ್ನುವುದು. it is the prerogative of this House to know whether he has submitted his resgination or not. ತಾವು ಅವರ ರಾಜೀನಾಮೆಯನ್ನು ಅಕ್ಸೆಪ್ಟ್ ಮಾಡುವುದು ಬಿಡುವುದು it is your prerogative and it is the choice of the Governor.

ಅಷ್ಟೆ ನಾವು ಕೇಳುತ್ತಿರುವುದು. ನಿಮಗೆ ರಾಜೀನಾಮೆಯನ್ನು ಅವರು ಕೊಟ್ಟಿದ್ದಾರೆಯೇ ?

ನಿಮಗೆ ಮಂತ್ರಿಗಳು ರಾಜೀನಾಮೆ ಪತ್ರ ಕೊಟ್ಟಿದ್ದಾರೆಯೇ ? ಅಷ್ಟೇ ನಾವು ಕೇಳುತ್ತಿರುವುದು. ತಾವು ಹೀಗೆ ಹೇಳಿದಗೆ ಹೇಗೆ ? ಸಂಸದೀಯ ವ್ಯವಹಾರಗಳಲ್ಲಿ ತಾವು ಬಹಳ ಪರಿಣಿತರು. ಈ ಕಡೆ ಕುಳಿತು ಪಳಗಿದವರು, ಸುಮಾರು 22 ವರ್ಷಗಳ ಕಾಲ ಅನುಭವವಿರತಕ್ಕಂಥವರು. ಅದರಲ್ಲಿ ಕಿರಿಕಿರಿಯಾಗುವುದು ಅಥವಾ ಪೇಚಿಗೆ ಸಿಕ್ಕಿಕೊಳ್ಳುವಂಥಾದ್ದೇನಿಲ್ಲ. ಮಂತ್ರಿಗಳು ತಮಗೆ ರಾಜೀನಾಮೆ ಕೊಟ್ಟಿದ್ದರೆ ಕೊಟ್ಟಿದ್ದಾರೆಂದು ಹೇಳಿ. You may not accept it, that is different this. You may persuade him to remain in your Cabinet. It all depends upon the political conveniences. The question what we would say here is, it is out prerogative to know whether he has tendered his resignation?

ಶ್ರೀ ವಾಟಾಳ್ ನಾಗರಾಜ್:- ನಿಮ್ಮನ್ನು ಇಕ್ಕಟ್ಟಿಗೆ ಸಿಲುಕಿಸಬೇಕೆಂಬುದು ನಮ್ಮ ಉದ್ದೇಶವಲ್ಲ. ಆ ರೀತಿಯ ಭಾವನೆಗಳು ನಮ್ಮದು ಯಾರದು ಅಲ್ಲವೆಂಬುದು ಸ್ಪಷ್ಟವಾಗಿದೆ. ಎರಡನೆಯದಾಗಿ, ನಿಮಗೆ ನಮ್ಮ ಸಲಹೆಯೇನೆಂದರೆ, ಈಗಾಗಲೇ ಮಂತ್ರಿಮಂಡಲದ ಸದಸ್ಯರ ಸಂಖ್ಯೆ ವಿಪರೀತ ಜಾಸ್ತಿಯಾಗಿರುವುದರಿಂದ, ಕೆಲವರನ್ನು ಕೈಬಿಡಬೇಕಾದರೆ ಬಿಟ್ಟುಬಿಡಿ, 5-6 ಸಚಿವರನ್ನು ತೆಗೆದುಬಿಡಿ.

ಶ್ರೀ ಬಿ.ಎಚ್. ಬನ್ನಿಕೋಡ್:– ಈಗ ಮುಖ್ಯಮಂತ್ರಿಗಳಿಗೆ ಮಾನ್ಯ ಮಂತ್ರಿಗಳಿಂದ ರಾಜೀನಾಮೆ ಪತ್ರ ಬಂದಿದೆಯೇ ? ಎನ್ನುವ ಪ್ರಶ್ನೆ ಉದ್ಭವಿಸಿದೆ. ಆದರೆ, ತಾವು ಅವರಿಗೆ ಹೇಳಿ ಅವರ ಮನವೊಲಿಸಿ, ತಾವು ಒಪ್ಪದಿರಬಹುದು. ರಾಜೀನಾಮೆ ಪತ್ರ ತಮಗೆ ಬಂದಿರುವ ಬಗ್ಗೆ ಖಚಿವಾಗಿ......

ಚೇರ್ಮನ್:– ಯಡಿಯೂರಪ್ಪನವರೆ, ನೀವು ಯಾವ ಸಮಯದಲ್ಲಿ ಕೇಳುತ್ತೀರಿ, ಆ ಸಮಯದಲ್ಲಿ ನಾನು ಹೇಳುತ್ತೇನೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ.

ಶ್ರೀ ಆರ್.ವಿ. ದೇಶಪಾಂಡೆ:– ರಾಜೀನಾಮೆ ಕೊಡುವ ವಿಚಾರ ಮಂತ್ರಿಗಳಿಗೆ ಬಿಟ್ಟಿದ್ದುದು, ಅದನ್ನು ಅಂಗೀಕರಿಸುವುದು ಮುಖ್ಯಮಂತ್ರಿಗಳಿಗೆ ಬಿಟ್ಟ ವಿಚಾರ. ನಮ್ಮ ಪ್ರಶ್ನೆ ಏನೆಂದರೆ, ಮಂತ್ರಿಗಳ ರಾಜೀನಾಮೆಯನ್ನು ತಾವು ಅಂಗೀಕರಿಸಿದ್ದೀರಾ ? ಇಲ್ಲವೆ ? ಎಂಬುದನ್ನು ಹೇಳುತ್ತಿಲ್ಲ. That is your prerogative ಮೂಲಭೂತವಾಗಿ ನಾವು ಕೇಳುತ್ತಿದ್ದೇವೆ. ಇವೊತ್ತು ಶಾಸನ ಸಭೆ ನಡೆಯುತ್ತಿದೆ. ಅದರಲ್ಲೂ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ನಡೆಯುತ್ತಿದೆ. ನಾನು ನಿಮ್ಮನ್ನು ಸ್ಪಷ್ಟವಾಗಿ ಕೇಳುತ್ತಿದ್ದೇನೆ. ನಿಮ್ಮ ಮಂತ್ರಿಗಳು ರಾಜೀನಾಮೆ ಸಲ್ಲಿಸಿದ್ದಾರೆಯೆ ? ಇಲ್ಲವೇ ? ಪ್ರಶ್ನೆಯೇನೆಂದರೆ, ತಾವು ಯಾವಾಗ ಸ್ಪಷ್ಟವಾಗಿ ನನಗೆ 'ಮಂತ್ರಿಗಳು ರಾಜೀನಾಮೆ ಕೊಟ್ಟಿಲ್ಲ' ಎಂದು ಹೇಳುವುದಿಲ್ಲವೋ ಅದರ ಅರ್ಥ ರಾಜೀನಾಮೆ ಕೊಟ್ಟಂತಾಗುತ್ತದೆ. It means like that. Chief Minister categorically should have stated 'No. I have not received'. You would have said it. In the normal course if any Chief Minister had not received the resignation, he would have said 'No. I have not received the resignaiton'. You have not denied, nor you are accepting it. It means that he has submitted his resignation. So, I would request....

SRI D.B. CHANDRE GOWDA:– It is the privilege and prerogative of this House to know the truth. When the media has covered it, can the House be kept in darkness?

SRI R.V. DESHAPANDE:– It may not be from your source. Official sources UNI......

ಶ್ರೀ ಡಿ.ಬಿ. ಚಂದ್ರೇಗೌಡ:– ನಿಮ್ಮ ಮನೆ (ಸರ್ಕಾರದ) ಯ ಮೂಲೆ ಕಲ್ಲು ಕಿತ್ತುಬಂದಿದೆ. ಬಂಗಾರಪ್ಪನವರಿದ್ದಾಗ ಅವರು ಹೀಗೆ ಹೇಳುತ್ತಿದ್ದರು. ಆದರೆ, ಮನೆ ಕುಸಿದ ಮೇಲೆ ಅವರಿಗೆ ಗೊತ್ತಾಯಿತು. ನಿಮಗೆ ಹಾಗಾಗಬಾರದು. ಏಕೆಂದರೆ ಬಂಗಾರಪ್ಪನವರು ನಂಬಿಕೆಟ್ಟರು, ನೀವು ನಂಬಿ ಕೆಡಬೇಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೆ, ನಮ್ಮ ಕಳಕಳಿ ಏನೆಂದರೆ, ಖಂಡಿತವಾಗಿ, ನಿಶ್ಚಿತವಾಗಿ ರಾಜ್ಯದ ಜನರ ಹಿತದೃಷ್ಟಿಯಿಂದ ಇನ್ನು 1992–93ರ ವರ್ಷ ಕಳೆಯದಿರುವಂಥ ಶ್ರೀಮಾನ್ ವೀರಪ್ಪ ಮೊಯಿಲಿಯವರ ಮಂತ್ರಿಮಂಡಲದಲ್ಲಿರುವ ಸದಸ್ಯರು, ಆ ಕಡೆ ಕುಳಿತಿರತಕ್ಕಂಥ ಶಾಸಕರು ಅವರ ಕಾಲೆಳೆಯುವಂತ ಪ್ರವೃತಿಯನ್ನು ಕೈಬಿಡಬೇಕೆಂದು ನಾನು ವಿನಂತಿಸಿ ಮಾಡಿಕೊಳ್ಳುತ್ತೇನೆ. ಏಕೆಂದರೆ ಇದು ದೊಂಬರಾಟವಲ್ಲ. ಜನರು ನಿಮಗೆ ಐದು ವರ್ಷಗಳ ಕಾಲ ಆಡಳಿತ ನಡೆಸಲು ಅಧಿಕಾರ ಕೊಟ್ಟಾಗ 184 ಜನ ಅಜೀರ್ಣವಾಗುವಷ್ಟು ಬಹುಮತ ಸಿಕ್ಕಿದ್ದರೂ ನಿಮಗೆ ವಿಫಲತೆ ಎಂದರೆ, ಇದರ ಪರಿಣಾಮವೇನಾಗುತ್ತದೆ ? ನಾನು ಏನು ಹೇಳುತ್ತಿದ್ದೇನೆಂದರೆ, ಇಷ್ಟು ಬೇಗ ಏನಾದರೊಂದು ಒಳ್ಳೆಯ ಕೆಲಸ ಮಾಡಬೇಕೆಂದು ಒಂದು ಜವಾಬ್ದಾರಿಯುತ ಸ್ಥಾನದಲ್ಲಿ

ಕುಳಿತಿರತಕ್ಕಂಥ ಒಬ್ಬ ಮುಖ್ಯಮಂತ್ರಿಗಳ ಕಾಲೆಳೆಯುತಕ್ಕಂಥ ಕಾಂಗ್ರೆಸ್ಸಿನ ಒಂದು ಪ್ರವೃತ್ತಿ ಏನಿದೆ, ಇದರಿಂದ ಜನರ ಮೇಲೆ ಕೆಟ್ಟ ಪರಿಣಾಮವಾಗುತ್ತದೆನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಚೇರ್ಮನ್:– ತಾವು ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಪ್ರಾರಂಭಿಸಿದ್ದೀರಿ ?

ಶ್ರೀ ಬಿ.ಎಸ್. ಯಡಿಯೂರಪ್ಪ:– ಹೌದು.

SRI D.B. CHANDRE GOWDA:– It is the prerogative of this House. Let the Chief Minister come out with some sort of statement.

ಶ್ರೀ ವಾಟಾಳ್ ನಾಗರಾಜ್:– 6–6 ತಿಂಗಳಿಗೋಸ್ಕರ ನಿಮ್ಮ ಮಂತ್ರಿಮಂಡಲ ಉರುಳಬೇಕೆನ್ನುವ ಇಚ್ಛೆ ನಮಗ್ಯಾರಿಗೂ ಸಹ ಇಲ್ಲ. ಇದು ಆಡಳಿತದ ದೃಷ್ಟಿಯಿಂದ ಒಳ್ಳೆಯದಲ್ಲ. ಆದುದರಿಂದ, ಮಂತ್ರಿಗಳಿಂದ ತಮಗೆ ರಾಜೀನಾಮೆ ಬಂದಿದೆಯೆಂದು ಧೈರ್ಯವಾಗಿ ಹೇಳಿ. ಇದರಲ್ಲಿ ಹಿಂದು–ಮುಂದು ನೋಡುವಂಥದ್ದೇನಿದೆ ?

ಶ್ರೀ ಎಂ. ವೀರಪ್ಪ ಮೊಯಿಲಿ:– ಸನ್ಮಾನ್ಯ ಅಧ್ಯಕ್ಷರೆ, ಈಗ ಇದರ ವಿಷಯವಾಗಿ ಕೇಳುವುದಕ್ಕೆ ವಿರೋಧ ಪಕ್ಷದ ನಾಯಕರು ಬಹಳ ಆತುರದಲ್ಲಿದ್ದಾರೆ. ನಿಮ್ಮ ಸ್ವದೀಚ್ಛೆ ನನಗರ್ಥವಾಯಿತು. ನಾವು ಭದ್ರವಾಗಿರಬೇಕೆಂಬುದು ತಮ್ಮ ಅಭಿಲಾಷೆಯಾಗಿರುವುದರಿಂದ ಮಂತ್ರಿಮಂಡಲದ ಗಾತ್ರ ದೊಡ್ಡದಾಯಿತೆಂದು ತಾವೇ ಹೇಳುತ್ತೀರಿ, ಈಗ ಅದರ ಗಾತ್ರ ಸ್ವಲ್ಪ ಕಡಿಮೆಯಾದರೆ ತಾವು ಸಂತೋಷ ಪಡಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್:– ಬಹಳ ಸಂತೋಷಪಡುತ್ತೇವೆ. ಆಮೇಲೆ ಮಾನ್ಯ ಮುಖ್ಯಮಂತ್ರಿಗಳಲ್ಲಿ ಹೇಳುವುದೇನೆಂದರೆ ಇನ್ನೊಂದು 3–4 ಮಂತ್ರಿಗಳನ್ನು ತೆಗೆದುಹಾಕುವುದಾದರೆ ನಾಳೆನೇ ತೆಗೆದುಬಿಡಿ.

ಚೇರ್ಮನ್:– ತೆಗೆಯುವುದು, ಬಿಡುವುದನ್ನು ಅವರಿಗೆ ಬಿಟ್ಟುಬಿಡಿ, ಈಗ ಯಡಿಯೂರಪ್ಪನವರು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಸನ್ಮಾನ್ಯ ಅಧ್ಯಕ್ಷರೆ, ಯಾವ ಶುಭ ಮುಹೂರ್ತದಲ್ಲಿ ಯಡಿಯೂರಪ್ಪ ರಾಜ್ಯಪಾರ ಭಾಷಣದ ಮೇಲೆ ಮಾತನಾಡಲು ಪ್ರಾರಂಭ ಮಾಡಿದರೋ ಎಂದು ನನ್ನ ಮೇಲೆ ತಮ್ಮ ದುಷ್ಟಿತಿಯನ್ನು ಹಾಕಬೇಡಿ.

ಶ್ರೀ ಹಾರನಹಳ್ಳಿ ರಾಮಸ್ವಾಮಿ:– ಈ ಹಿಂದೆ ಸದನದಲ್ಲಿ ಒಂದು ಪಕ್ಷದ ಒಳಗಿನ ವಿಷಯದ ಬಗ್ಗೆ ಈ ಸಭೆಯಲ್ಲಿ ಚರ್ಚೆ ಮಾಡಬಾರದು ಎಂದು ಅನೇಕ ಸಲ ತೀರ್ಮಾನವಾಗಿದೆ. ಪುನಃ ಹೇಳಿದ್ದೇ ಹೇಳುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಆ ವಿಷಯಕ್ಕೆ ಬರುವುದಿಲ್ಲ.

ಶ್ರೀ ಹಾರನಹಳ್ಳಿ ರಾಮಸ್ವಾಮಿ:– ನಿಮ್ಮ ಪಕ್ಷದ ಬಗ್ಗೆ ನಾಳೆಯೇ ನಾವು ಪ್ರಾರಂಭ ಮಾಡುತ್ತೇವೆ.

ಮಾನ್ಯ ಸದ್ಯರೊಬ್ಬರು:– ಅವರಿಗೆ ಇದನ್ನು ಬಿಟ್ಟರೆ ಬೇರೆ ವಿಷಯವೇ ಇಲ್ಲ.

(ಗೊಂದಲ)

ಚೇರ್ಮನ್:– ಯಡಿಯೂರಪ್ಪನವರೆ ಇದರ ಬಗ್ಗೆ ಬಹಳವಾಗಿ ಪ್ರಸ್ತಾವನೆ ಮಾಡಿದ್ದೀರಿ, ಇನ್ನು ತಾವು ನೇರವಾಗಿ ರಾಜ್ಯಪಾಲರ ಭಾಷಣಕ್ಕೆ ಬನ್ನಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಮೂರು ಮೂರು ತಿಂಗಳಿಗೆ ಮುಖ್ಯಮಂತ್ರಿಗಳು ಬದಲಾವಣೆಯಾಗುವುದು ಶೋಭೆಯನ್ನು ತರತಕ್ಕದ್ದಲ್ಲ. ಅವರು ತೆಗೆದುಕೊಂಡಿರತಕ್ಕ ನಿರ್ಧಾರ ಸ್ಪಷ್ಟವಾಗಿದೆ. ಅದರಲ್ಲಿ ರಾಜೀ ಎನ್ನುವ ಪ್ರಶ್ನೆಯೇ ಬೇಕಾಗಿಲ್ಲ.

ಚೇರ್ಮನ್:- ಪಟ್ಟಿಯಲ್ಲಿ ನಿಮ್ಮ ಹೆಸರು ಕೂಡ ಇದೆ. ನಿಮ್ಮ ಹೆಸರು ಬಂದಾಗ ಭಾಷಣ ಮಾಡಿ.

ಶ್ರೀ ಕರಿಯಣ್ಣ:- ಈಗಾಗಲೇ ಅವರಿಗೆ ಎರಡು ಗಂಟೆಗಳ ಕಾಲ ಸಮಯವನ್ನು ಕೊಟ್ಟದ್ದೀರಿ, ಇದುವರೆಗೆ ಬಿ.ಜೆ.ಪಿಯವರು ಭಾಷಣ ಮಾಡಿದ್ದಾರೆ. ಆದರೆ ಯಡಿಯೂರಪ್ಪನವರು ಈಗ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುತ್ತೇನೆಂದು ಹೇಳುತ್ತಾರಲ್ಲಾ ಅದಕ್ಕೆ ನೀವು ಸಮಯ ಕೊಡುತ್ತೇನೆಂದು ಹೇಳುತ್ತೀರಲ್ಲಾ ಹೇಗೆ ? ತಾವೇ ಹೇಳಿ ಎರಡು ಗಂಟೆಗಳ ಕಾಲ ಮಾತನಾಡಿದ್ದಾರೆ, ಮತ್ತೆ ಈಗ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಲು ಪ್ರಾರಂಭ ಮಾಡುತ್ತೇನೆಂದು ಹೇಳಿದರೆ ಹೇಗೆ ? ಬಿ.ಜೆ.ಪಿ.ಯವರು ಪಕ್ಷದ ಬಗ್ಗೆ ಮಾತನಾಡಲು ಬಂದಿದ್ದಾರೋ ಅಥವಾ ರಾಜ್ಯಪಾಲರ ಭಾಷಣದ ಬಗ್ಗೆ ಮಾತನಾಡಲು ಬಂದಿದ್ದಾರೋ.

ಚೇರ್ಮನ್:- ಅವರಿಗೆ ಮಾತನಾಡಲು ಬಿಡಿ.

(ಗೊಂದಲ)

ಶ್ರೀ ಎಂ.ಪಿ. ವೆಂಕಟೇಶ್:- ಅವರಿಗೆ ಎಷ್ಟು ಸಮಯ ಕೊಡುತ್ತೀರಿ ?

ಚೇರ್ಮನ್:- ಅವರಿಗೆ ಮಾತನಾಡಲು ಈ ರೀತಿ ಅಡ್ಡ ಬಂದರೆ ಹೇಗೆ ಪೂರೈಸುತ್ತಾರೆ. ಈಗ ಅವರು ಮಾತನಾಡಲು ಎದ್ದು ನಿಂತಿದ್ದಾರೆ, ಅವರು ಎದ್ದು ನಿಂತು ಮಾತನಾಡುತ್ತಾರೆಂದರೆ ಬೇರೆ ಸದಸ್ಯರು ಮಾತನಾಡುವುದು ಕಡತಕ್ಕೆ ಹೋಗುವುದಿಲ್ಲವೆಂದು ತಮಗೆ ಗೊತ್ತಿದೆ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಕರಿಯಣ್ಣ:- ಅವರ ಮಾತನಾಡಲು ಎದ್ದು ನಿಂತರು ನಾವೆಲ್ಲಾ ಕುಳಿತುಕೊಂಡೆವು ಆದರೆ ಅವರಿಗೆ ಭಾಷಣ ಮಾಡಲು 2 ಗಂಟೆ ಬಿಟ್ಟರೆ ಹೇಗೆ ?

ಚೇರ್ಮನ್:- ಕರಿಯಣ್ಣನವರೆ ದಯಮಾಡಿ ಕುಳಿತುಕೊಳ್ಳಿ. ಅವರಿಗೆ ಏಕೆ ತೊಂದರೆಯನ್ನು ಕೊಡುತ್ತೀರಿ ?

ಶ್ರೀ ಬಿ.ಎಸ್. ಯಡಿಯೂರಪ್ಪ:- ಸನ್ಮಾನ್ಯ ಅಧ್ಯಕ್ಷರೆ ತಮ್ಮ ಮೂಲಕ ನಮ್ಮ ಮಾನ್ಯ ಸ್ನೇಹಿತರಿಗೆ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ದಯಮಾಡಿ ಒಬ್ಬ ಜವಾಬ್ದಾರಿ ಸದಸ್ಯರು ಈ ರೀತಿ ಸುಮ್ಮನೆ ಅನಗತ್ಯವಾಗಿ, ಮಾತನಾಡಿದರು, ಸಮಯ ಹಾಳು ಮಾಡಿದರು ಎನ್ನುವುದು ಜವಾಬ್ದಾರಿ ಸದಸ್ಯರು ಮಾತನಾಡತಕ್ಕದ್ದಲ್ಲ.

ಶ್ರೀ ಕರಿಯಣ್ಣ:- ಅಧ್ಯಕ್ಷರೆ ನಾನೇ ಹೇಳಿದ್ದುದು ಆ ರೀತಿ, ಸಮಯ ಪ್ರಜ್ಞೆ ಇರತಕ್ಕವರು ಎರಡು ಗಂಟೆ ತೆಗೆದುಕೊಂಡರೆ ಹೇಗೆ ಎಂದು. ಇವರು ವಿಧಾನಸಭೆಯ ವೇಳೆಯನ್ನು ಹಾಳು ಮಾಡಿದ್ದಾರೆ.

(ಗೊಂದಲ)

ಚೇರ್ಮನ್:- ಕರಿಯಣ್ಣನವರೆ ದಯಮಾಡಿ ಕುಳಿತುಕೊಳ್ಳಿ.

ಶ್ರೀ ಕರಿಯಣ್ಣ:– ತಮ್ಮ ಆಜ್ಞೆಯನ್ನು ಪಾಲಿಸುತ್ತೇವೆ. ಆದರೆ ಅವರು ಹೇಳುತ್ತಾರೆ. ನಾವು ಜವಾಬ್ದಾರಿಯಿಂದ ಮಾತನಾಡುವುದಿಲ್ಲವೆಂದು.

ಚೇರ್ಮನ್:– ಅವರು ಈಲ್ಡ್ ಆಗಿಲ್ಲ. ನೀವು ಏಕೆ ಸುಮ್ಮನೆ ಮಾತನಾಡುತ್ತೀರಿ ?

ಶ್ರೀ ಕರಿಯಣ್ಣ:– ನೀವು ವಿಷಯಕ್ಕೆ ಬಂದು ಮಾತನಾಡಿ, ವಿಷಯಕ್ಕೆ ಬಾರದೆ ಎರಡು ಗಂಟೆ ಮಾತನಾಡುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಅದನ್ನು ಹೇಳುವುದಕ್ಕೆ ನೀವು ಯಾರು ?

ಚೇರ್ಮನ್:– ದಯಮಾಡಿ ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ:– ರಾಜ್ಯಪಾಲರ ಭಾಷಣದ ಬಗ್ಗೆ ಮಾತನಾಡುತ್ತಾ ಹೇಳುತ್ತಿದ್ದೇನೆ.

6.10 ಪಿ.ಎಂ.

ರಾಜ್ಯದ ಅಭಿವೃದ್ಧಿ ಕಾರ್ಯಗಳಿಗೆ ಗಮನ ಕೊಡದೇ, ರೈತರ ಸಂಕಷ್ಟಗಳನ್ನು ಬಗೆಹರಿಸದೆ, ಪಕ್ಷದಲ್ಲಿ ಪರಸ್ಪರ ಕಚ್ಚಾಟ ಮಾಡಿಕೊಂಡು ಇರತಕ್ಕಂಥ ಒಂದು ವಿಚಿತ್ರ ಪರಿಸ್ಥಿತಿಯು ನಿರ್ಮಾಣವಾಗಿದೆ. ನಾವುಗಳು ಒಂದು ಅವಧಿಯಲ್ಲಿ ಮೂರನೆಯ ಮುಖ್ಯಮಂತ್ರಿಯವರನ್ನು ಕೂಡ ನೋಡಿದ್ದು ಆಯಿತು. ತಮ್ಮ ಸ್ಥಾನಮಾನಕ್ಕೋಸ್ಕರವಾಗಿ, ಅಧಿಕಾರ ಮತ್ತು ಸ್ವಾರ್ಥಕ್ಕೋಸ್ಕರವಾಗಿ, ಕಳೆದ ಎರಡು ವರ್ಷಗಳಿಂದ ಈ ರಾಜ್ಯದಲ್ಲಿ ನಡೆದು ಬಂದ ವಿಚಾರವನ್ನು ಹೇಳಬೇಕಾಗುತ್ತದೆ. ಏಕೆಂದರೆ......

ಅಧ್ಯಕ್ಷರು:– ತಾವುಗಳು ಈಗ ಚರ್ಚೆ ಪ್ರಾರಂಭ ಮಾಡಿದ್ದೀರಿ, ಅದನ್ನು ನಾಳೆ ಮುಂದುವರಿಸಿ. ಸಭೆಯು ನಾಳೆ ಬೆಳಿಗ್ಗೆ 11–00 ಗಂಟೆಗೆ ಸಮಾವೇಶಗೊಳ್ಳುತ್ತದೆ.

(ಸದನವು 6–12 ಗಂಟೆಗೆ ಮುಕ್ತಾಯಗೊಂಡು ದಿನಾಂಕ: 24–2–1993ರಂದು ಬೆಳಿಗ್ಗೆ 11–00 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು).

(†ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣೆ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)